Sri H. R. ABDUL GAFFAR (Deputy Minister for Finance).—Detailed information will have to be furnished to the Hon'ble Member. Therefore it naturally requires some time. The Budget Section the Finance Department is very busy now.

Sri H. SIDDAVEERAPPA.—I know what it is and I know what your Secretariat is. Once I handled this. I wanted to know the economic position of the State. We want these figures for a comparison and understanding of the problem.

Sri H. R. ABDUL GAFFAR.—There is no intention on the part of the Finance Department to hide any information. Attempts are being made to collect this information. As soon as the budget is presented, we will furnish the information required within the shortest possible time.

Sri H. SIDDAVEERAPPA.—What is the good of your giving after everything is over.

Call Attention to a Matter of Urgent Public Importance.

Sri SADASHIVAPPA PATIL (Deodurg).—I call the attention of the Minister for Health and Housing to Small Pox Infection started in Deodurg Taluk of Raichur District.

Sri K. PUTTASWAMY (Minister Health and Housing).—Small Pox infectoin started in Ingaldal Village of Deodurg Taluk, Raichur District, on 25-12-1967. In this village there have been so far 18 attacks with 8 deaths. Out of the population of 353 in the village, 337 persons have been vaccinated. Amarapura village of Deodurg Taluk with a population of 359 had 2 attacks with no deaths since 6-1-1968. 2?2 persons in this village have been vaccinated. Khanapura village, Deodurg Taluk, with a population of 8?0 had 12 attacks with ? deaths since 9-1-1968. 7?5 vaccinations in this village have been done. Since 1-2-1968 the Taluk is free from Small Pox infection. In all the above villages prompt action has been taken to prevent the spread of infections.

In addition, prompt vaccination programme has been taken up in Hirekudligi, Chikkakudilgi, Hanchinal, Boodanal, Hodanal, Santeshnal, Kabbur and other villages which are in the neighbourhood of the infected villages. In these villages 85?9 vaccinations have been done. As a precaution, the Kabbur fair which was to be held from 11-2-1968 to 14-?-1968 was stopped.

MOTION OF THANKS TO THE GOVERNOR'S ADDRESS

(Debate Continued).

Mr. DEPUTY SPEAKER.—I request the Hon'ble members to stick to time schedule because the reply will begin at 2 O' Clock.

†ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1).—ಮಾನ್ಯ ಸಭಾಪತಿಯವರೆ, ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಮಾನ್ಯ ಮಿತ್ರರಾದ ಶ್ರೀ ಶ್ರೀನಿವಾಸನವರು ತಂದಂತಹ ವಂದನಾ ನಿರ್ಣಯವನ್ನು ಸ್ವಾಗತಿಸುತ್ತಾ, ನಾನು ಎರಡು ಮಾತುಗಳನ್ನು ಹೇಳ ಬಯಸುತ್ತೇನೆ.

ರಾಜ್ಯಪಾಲರ ಭಾಷಣವು ಬಹಳ ಸ್ಫೂರ್ತಿದಾಯಕವಾಗಿದ್ದು ಉತ್ತಮ ಮಾರ್ಗದರ್ಶನವನ್ನು ಸರ್ಕಾರಕ್ಕೆ ಹಾಗೂ ಈ ಮನೆಗೆ ನೀಡಿದೆ ಎಂದು ಹೇಳಬಹುದು. ರಾಜ್ಯಪಾಲರ ಭಾಷಣದಲ್ಲಿ ಒಳಗೊಂಡ ಪ್ರತಿಯೊಂದು ವಿಷಯವೂ ಕೂಡ ಸಂಸ್ಥಾನದ ಅಭಿವೃದ್ಧಿಗೆ ಜನಜೀವನದ ಮಟ್ಟವನ್ನು ಏರಿಸುವುದಕ್ಕೆ ಸಫಲವಾಗುವುದು ಎಂದು ಹೇಳಲಿಚ್ಛಿಸುತ್ತೇನೆ. ಕೆಲವರು ಮಿತ್ರರು ಇದನ್ನು ಬಣ್ಣಿಸಿದ್ದಾರೆ, ಪ್ರಶಂಸಿಸಿದ್ದಾರೆ, ಹಾಗೂ ಇನ್ನಿತರರು ಇದನ್ನು ಪ್ರತಿಭಟಿಸಿದ್ದಾರೆ. ಇದನ್ನು ಹೇಳುವಾಗ ನನಗೆ ಒಂದು ನನ್ನ ಚಿಕ್ಕ ಪ್ರಾಯದಲ್ಲಿ ಕಲಿತಂತಹ ಕಥೆಯು ನೆನಪಿಗೆ ಬರುತ್ತದೆ. ಅದನ್ನು ಇಲ್ಲಿ ಹೇಳಬಯಸುತ್ತೇನೆ. ಒಂದು ಊರಿನಲ್ಲಿ ಒಂದು ಕುರುಡರ ತಂಡವನ್ನು, ಒಂದು ಆನೆಯನ್ನು ನೋಡುವುದಕ್ಕೆ ಕರೆದುಕೊಂಡು ಹೋಗಿದ್ದಾರೆ. ಅದರಲ್ಲಿ ಪ್ರತಿಯೊಬ್ಬನೂ ತನಗೆ ತೋರಿದಂತೆ ನಾನಾ ರೀತಿಯಲ್ಲಿ ಆನೆಯ ಸ್ವರೂಪವನ್ನು ಹೇಳಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ಮಿತ್ರರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಿದ್ದಾರೆ. ಅವರು ಯೋಗ್ಯವಾದ ಸೂಕ್ತ ಸಲಹೆಗಳನ್ನು ಕೊಟ್ಟು ನಮಗೆ ಮಾರ್ಗದರ್ಶನ ಮಾಡಬೇಕೆಂದು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಯೂ ಕೂಡ ಕಲೆತು ಸಮಾಲೋಚಿಸಿ ಅವರಿಗೆ ಬೇಕುಬೇಕಾದ ವಿಚಾರಗಳನ್ನು ಸರಕಾರದ ಮುಂದೆ ಇಟ್ಟು ಅವರ ಕೆಲಸಗಳನ್ನು ಸೂಕ್ತವಾಗಿ ಮಾಡಿಕೊಳ್ಳಬೇಕು ಎನ್ನುವ ಅಭಿಪ್ರಾಯಕ್ಕೆ ಈಚೀಚೆಗೆ ಬರುತ್ತಿದ್ದಾರೆ. ಸರಕಾರದವರು ಮಾಡಿರುವ ಯೋಜನೆಗಳಂತೆ ಗ್ರಾಮಪಂಚಾಯಿತಿಗಳಿಗೆ ಹಾಗೂ ತಾಲ್ಲೂಕು ಬೋರ್ಡುಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಡೆಗೆ ತುಂಬಾ ಗಮನಕೊಡುತ್ತಿರುವುದು ತುಂಬಾ ಸಂತೋಷದ ಸಂಗತಿ. ಇದೇ ರೀತಿಯಲ್ಲಿ ನಮ್ಮ ಸರಕಾರದವರು ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳನ್ನು ಮಾಡಿ ಪ್ರತಿಯೊಂದು ರಂಗದಲ್ಲೂ ಅಭಿವೃದ್ಧಿಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ವ್ಯವಸಾಯದ ಕ್ಷೇತ್ರದಲ್ಲೂ ಅನೇಕ ರೀತಿಯಿಂದ ತುಂಬಾ ಅಭಿವೃದ್ಧಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. 1961 ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಸುಮಾರು 38 ಲಕ್ಷ ಟನ್ನುಗಳಷ್ಟು ಆಹಾರ ಬೆಳೆದಿದ್ದರೆ 1967 ನೇ ಇಸವಿಯಲ್ಲಿ ಸುಮಾರು 50 ಲಕ್ಷ ಟನ್ನುಗಳಷ್ಟು ಹೆಚ್ಚು ಆಹಾರದ ಬೆಳೆ ಬೆಳೆದಿದ್ದಾರೆ. ಇದನ್ನು ನೋಡಿದರೆ ದಿನೇ ದಿನೇ ನಮ್ಮ ಸರಕಾರದವರು ಹೆಚ್ಚು ಅಭಿವೃದ್ಧಿಯ ಹಾದಿಯಲ್ಲಿ ಹೋಗುತ್ತಿದ್ದಾರೆ ಮತ್ತು ಎರಡು ಲಕ್ಷ ಟನ್ನುಗಳಷ್ಟು ಹೆಚ್ಚಿನ ಆಹಾರವನ್ನು ಉತ್ಪಾದನೆ ಮಾಡುತ್ತಿದ್ದಾರೆ ಮತ್ತು ನಮ್ಮ ದೇಶದ ಆಹಾರದ ಸ್ವಾವಲಂಬನೆ ಕಡೆಗೆ ಸರಕಾರ ಕೈಗೊಂಡ ಕಾರ್ಯಕ್ರಮಗಳು ಯಶಸ್ವಿಯಾಗುತ್ತಿವೆ ಮತ್ತು ಇದು ಪರಿಣಾಮಕಾರಿಯಾಗಿಯೂ ಆಗಿದೆ ಎನ್ನುವುದನ್ನು ನಾವು ಇಲ್ಲಿ ತಿಳಿಯಬಹುದು. ಇದೇ ರೀತಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗಾಗಿ ನಮ್ಮ ರಾಜ್ಯ ಸರಕಾರ ಮೂರನೇ ಯೋಜನೆಯಲ್ಲಿ ಸುಮಾರು ಎಂಟು ಕೋಟಿಯಷ್ಟು ಮೀಸಲಾಗಿಟ್ಟಿದ್ದರೂ ಈಗಾಗಲೇ ಸಣ್ಣ ನೀರಾವರಿ ಕೆಲಸಗಳಿಗಾಗಿ ಸುಮಾರು 14 ಕೋಟಿಯಷ್ಟು ಹಣವನ್ನು ವೆಚ್ಚಮಾಡಿರುವುದನ್ನು ನೋಡಿದರೆ ಸಣ್ಣ ನೀರಾವರಿ ಕೆಲಸಗಳ ಬಗ್ಗೆ ಸರಕಾರಕ್ಕೆ ಎಷ್ಟು ಮಟ್ಟಿನ ಆಸಕ್ತಿ ಇದೆ ಎನ್ನುವುದು ಗೊತ್ತಾಗುತ್ತದೆ. ಶೇಕಡಾ ಏಳರಷ್ಟು ಇರಿಗೇಟೆಡ್ ಭೂಮಿ ಹಿಂದೆ ಇದ್ದದ್ದು ಇವೊತ್ತು ಶೇಕಡಾ ಹತ್ತರಷ್ಟಕ್ಕೆ ಏರಿದೆ. ಆಲ್ ಇಂಡಿಯಾ ಆವರೇಜಿನಂತೆ ನೋಡಿದರೆ ಶೇಕಡ 30 ರಷ್ಟು ಇರಿಗೇಟೆಡ್ ಭೂಮಿ ಇರಬೇಕು, ನಮ್ಮ ನೆರೆ ರಾಜ್ಯಗಳಾದ ಮದ್ರಾಸು ಹಾಗೂ ಕೇರಳ ರಾಜ್ಯಗಳಲ್ಲಿರುವಂತೆ ಶೇ 40 ರಷ್ಟು ಪ್ರಗತಿಯಾಗಲು ಸಾಧ್ಯವಿಲ್ಲದೇ ಇದ್ದರೂ ಮೈಸೂರು ಸಂಸ್ಥಾನದಲ್ಲಿ ಸರಕಾರ ಕೈಗೊಂಡಿರುವ ಕಾರ್ಯಕ್ರಮಗಳಿಂದಾಗಿ ಕೆಲವೇ ಸಮಯದಲ್ಲಿ ಎಲ್ಲ ಕಡೆಯಲ್ಲಿಯೂ ಸ್ವಾವಲಂಬನೆ ಪಡೆಯಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇದೇ ರೀತಿಯಲ್ಲಿ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯೂ ಕೂಡ ತುಂಬಾ ಆಶಾದಾಯಕವಾಗಿದೆ. ಹಿಂದೆ ಎಂದರೆ, ಈಗ್ಗೆ ಐದು ವರ್ಷಗಳ ಹಿಂದೆ ಉತ್ಪಾದನೆಯಾಗುತ್ತಿದ್ದುದಕ್ಕಿಂತ ಇಂದು ನಾಲ್ಕಾರು ಲಕ್ಷ ಕಿಲೋವಾಟುಗಳಷ್ಟು ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದೆ ಮತ್ತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸುಮಾರು 9 ಕೋಟಿ ರೂಪಾಯಿಗಳಷ್ಟು ವೆಚ್ಚ ಮಾಡಿ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು ಗ್ರಾಮಾಂತರ ಪ್ರದೇಶಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಲು ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತಿರುವುದು

---

†Indicates that the remarks or speeches have not been revised by the member concerned.

(ಶ್ರೀ ಎಂ. ಶ್ರೀನಿವಾಸ ನಾಯಕ್)

ಬಹಳ ಸಂತೋಷವಾಗಿದೆ. ರಾಜ್ಯಪಾಲರು ಇಂತಹ ಉತ್ತಮ ಭಾಷಣವನ್ನು ಮಾಡಿರುವುದರಿಂದ ಜನತೆಯ ಆಸೆ ಇನ್ನೂ ಕೆರಳುತ್ತದೆ. ಮತ್ತು ವ್ಯವಸಾಯದ ಬಗ್ಗೆ ತಮಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ ಎನ್ನುವ ಆಸೆಯನ್ನೂ ಅವರು ಹೊಂದಿದ್ದಾರೆ. ವ್ಯವಸಾಯಕ್ಕಾಗಿ ಹೆಚ್ಚು ಪಂಪ್ ಸೆಟ್ಟುಗಳನ್ನುಪಯೋಗಿಸಲು ಹೆಚ್ಚು ಪ್ರಯತ್ನಗಳನ್ನು ಮಾಡಬೇಕಾಗಿದೆ ಜನರೂ ಕೂಡ ಪಾಶ್ಚಾತ್ಯ ದೇಶಗಳಲ್ಲಿ ಯಾವ ರೀತಿಯಾಗಿ ನೂತನ ಪದ್ಧತಿಗಳನ್ನು ಅನುಸರಿಸಿ ಹೆಚ್ಚು ಉತ್ಪಾದನೆ ಮಾಡಲು ಯಾವ್ಯಾವ ಪ್ರಯತ್ನಗಳನ್ನು ಮಾಡುತ್ತಿದ್ದಾರೋ ಅದನ್ನು ನಮ್ಮ ದೇಶದಲ್ಲೂ ಅನುಸರಿಸಿ ಹೆಚ್ಚು ಪ್ರಯೋಜನ ಪಡೆಯುವಂತೆ ಮಾಡಿಕೊಳ್ಳಬೇಕು. ಪರದೇಶಗಳಲ್ಲಿ ಪರ್ ಹೆಡ್ ವಿದ್ಯುಚ್ಛಕ್ತಿ ಎಷ್ಟು ಉಪಯೋಗಿಸುತ್ತಿದ್ದಾರೆ ಇಲ್ಲಿ ಎಷ್ಟು ಉಪಯೋಗಿಸುತ್ತಿದ್ದಾರೆ ಅದನ್ನು ನೋಡಿದರೆ ನಮ್ಮ ಜನ ಹೆಚ್ಚು ವಿದ್ಯುಚ್ಛಕ್ತಿ ಉಪಯೋಗ ಮಾಡುತ್ತಿಲ್ಲ. ಈಗ ಜನತೆಗೆ ರಾಜ್ಯದಲ್ಲಿ ಬೇಕಾಗುವಷ್ಟು ವಿದ್ಯುಚ್ಛಕ್ತಿ ಸಿಗುತ್ತಿರುವುದರಿಂದ ಜನತೆಯೂ ಅವರಿಗೆ ಬೇಕಾಗುವ ರೀತಿಯಲ್ಲಿ ಉಪಯೋಗಿಸಬೇಕು. ಆದರೆ ರಾಜ್ಯದಲ್ಲಿ ರೈತರಿಗೆ ವ್ಯವಸಾಯಕ್ಕಾಗಿ ಎಷ್ಟು ವಿದ್ಯುಚ್ಛಕ್ತಿ ಬೇಕಾಗಿದೆಯೋ ಅಷ್ಟು ಸಿಗುತ್ತಿಲ್ಲ ಎಂದು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇದೇ ರೀತಿಯಾಗಿ ನಮ್ಮ ಹಳ್ಳಿಗಳಲ್ಲಿ ಎಷ್ಟೋ ಕಡೆ ಪವರನ್ನುಪಯೋಗಿಸಿಕೊಳ್ಳಬೇಕೆಂದು ಇದ್ದರೂ ಕೂಡ ಕೇವಲ ಪಟ್ಟಣಗಳಲ್ಲಿರುವಷ್ಟು ವಿದ್ಯುಚ್ಛಕ್ತಿ ಸೌಕರ್ಯ ಹಳ್ಳಿಗಳ ಕಡೆ ಸಿಗುತ್ತಿಲ್ಲ. ಇದರಿಂದ ವ್ಯವಸಾಯ ಮಾಡುವವರಿಗೆ ಕಷ್ಟವಾಗಿದೆ. ಹಳ್ಳಿಗಳ ಕಡೆ ಪವರನ್ನು ಕೊಟ್ಟರೆ ಸಾವಿರಾರು ಎಕರೆಗಳಷ್ಟು ಭೂಮಿ ವ್ಯವಸಾಯ ಮಾಡಲು ಅನುಕೂಲ ಸಿಗುತ್ತದೆ. ಇವರಿಗೆ ವಿದ್ಯುಚ್ಛಕ್ತಿ ಒದಗಿಸದೇ ಇರುವುದರಿಂದ ಜನ ನಿರಾಶೆಯಾಗಿದ್ದಾರೆ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಸರಕಾರ ಇಂತಹ ಪರಿಸ್ಥಿತಿಯನ್ನು ಮನಗಂಡು ಇದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಗೊಂಡು ಅದಷ್ಟು ಹೆಚ್ಚಿನ ಆಸಕ್ತಿಯನ್ನು ವಹಿಸಿ ಜನತೆಗೆ ಹಾಗೂ ರೈತರಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿ ಕೊಡಬೇಕಾದುದು ಅವಶ್ಯಕ.

ಇದೇ ರೀತಿಯಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೇಳಿದ್ದಾರೆ ಮತ್ತು ಈ ವರ್ಷದಲ್ಲಿ ಸುಮಾರು ನಾಲ್ಕು ಲಕ್ಷ ಮಕ್ಕಳಿಗಾಗಿ ಒಂದು ಶಾಲಾ ಪೂರ್ವ ಪೋಷಣೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದು ತುಂಬಾ ಸಂತೋಷದ ವಿಷಯ, ಈಗ ಪ್ರೈಮರಿ ವಿದ್ಯಾಭ್ಯಾಸಕ್ಕೆ ಆರು ವರ್ಷಗಳಾಗಿರುವ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗಳಿಗೆ ಕಳುಹಿಸಬೇಕು ಎಂದು ಮಾಡಿದ್ದಾರೆ, ಆದರೆ ಆರು ವರ್ಷಗಳ ಒಳಗೆ ಇರುವ ಮಕ್ಕಳಿಗೆ ಅನುಕೂಲವಾಗುವಂತೆ ನರ್ಸರಿ ಶಾಲೆಗಳನ್ನು ತೆರೆಯುವುದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು. ಪ್ರೈಮರಿ ವಿದ್ಯಾಭ್ಯಾಸದ ಶಾಲೆಗಳಲ್ಲಿ ನರ್ಸರಿ ವಿದ್ಯಾಭ್ಯಾಸಕ್ಕೆ ಸಾಕಷ್ಟು ಸಲಕರಣೆಗಳು ಇಲ್ಲ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಇನ್ನೂ ಸಾಮಾನು ಸಾಗಾಣಿಕೆಯಲ್ಲಿ ರಸ್ತೆ ಸಾರಿಗೆ ವಿಷಯ ಬಹು ಮುಖ್ಯವಾದುದು. ಇದರಲ್ಲಿ ವರ್ತಕರು ಸಾಮಾನುಗಳನ್ನು ಸಾಗಿಸುವಾಗ ಗೋಡೌನಿನಿಂದ ಗೋಡೌನಿಗೆ ಸಾಗಿಸಬೇಕು ಎಂದು ಲಾರಿಗಳಲ್ಲಿ ಸಾಗಿಸುತ್ತಾರೆ ಮತ್ತು ಲಾರಿಗಳವರೂ ಅದೇ ರೀತಿ ಸಾಗಿಸುತ್ತಿದ್ದಾರೆ. ವ್ಯಾಪಾರಸ್ಥರು ಕಲ್ಕತ್ತಾ ಹಾಗೂ ಬೊಂಬಾಯಿಗಳಲ್ಲಿ ಲಾರಿ ಮುಖಾಂತರ ಸಾಮಾನುಗಳನ್ನು ಸಾಗಿಸುತ್ತಾರೆ. ಅಲ್ಲದೆ ರೈಲ್ವೆ ಮುಖೇನ ಸಾಗಿಸಬೇಕಾದರೆ ಅವರುಗಳು ಒಮ್ಮೆಲೆ ವ್ಯಾಗನ್ ಛಾರ್ಜ್ ಹಾಗೂ ಇನ್ನಿತರ ಛಾರ್ಜುಗಳನ್ನು ಕೊಟ್ಟರೂ ಅದರಿಂದ ಬೇಗನೆ ಸಾಮಾನುಗಳು ಬರುವುದಿಲ್ಲ ಎಂದು ಲಾರಿಗಳಲ್ಲೇ ವರ್ತಕರು ಸಾಮಾನುಗಳನ್ನು ಸಾಗಿಸಲು ಹೆಚ್ಚು ಆಸೆ ಮಾಡುತ್ತಾರೆ ಮತ್ತು ಇದರಲ್ಲಿ ಹೆಚ್ಚು ಪಿಲ್‌ಫರೇಜಿಗೆ ಅವಕಾಶವೇ ಇಲ್ಲ. ರೈಲಿನಲ್ಲಿ ಪಿಲ್‌ಫರೇಜಿಗೆ ಅವಕಾಶವಿದೆ. ಆದರಿಂದಾಗಿ ರಸ್ತೆ ಸಾರಿಗೆಯಲ್ಲಿ ಲಾರಿಗಳ ಮೂಲಕವೇ ಸಾಮಾನುಗಳ ಸಾಗಾಣಿಕೆ ಈಚೆಗೆ ಬಹಳ ಹೆಚ್ಚಾಗಿದೆ. ಆದುದರಿಂದ ರಸ್ತೆ ಸಾರಿಗೆ ಕಡೆ ಗಮನವಿತ್ತು ಸರಕಾರ ಇನ್ನೂ ಹೆಚ್ಚು ಉತ್ತಮಪಡಿಸಬೇಕು ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಮತ್ತೆ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಇಲ್ಲಿ ಇನ್ನೂ ಒಂದು ವಿಚಾರವನ್ನು ಹೇಳಲು ಇಷ್ಟಪಡುತ್ತೇನೆ. ಪ್ರೈಮರಿ ಶಾಲೆಗಳ ಜೊತೆಗೆ ನರ್ಸರಿ ಶಾಲೆಗಳನ್ನೂ ಸೇರಿಸಲು ಸಾಧ್ಯವೇ ಎನ್ನುವುದನ್ನು ಸರಕಾರ ವಿಚಾರ ಮಾಡಬೇಕು. ಪ್ರೈವೇಟು ಏಜನ್ಸಿಯವರು ಈಗ ನರ್ಸರಿ ಶಾಲೆ

ಗಳನ್ನು ನಡೆಸುತ್ತಿದ್ದಾರೆ ಮತ್ತು ಜನರು ಅಲ್ಲಿ ಶುಲ್ಕಗಳನ್ನು ಕೊಟ್ಟು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಿದ್ದಾರೆ. ಆದರೆ ಪ್ರೈಮರಿ ಶಾಲೆಗಳಿಗೆ ಇವನ್ನು ಸೇರಿಸಿದರೆ ಇವರಿಂದ ಶುಲ್ಕ ವಸೂಲು ಮಾಡಲಿಕ್ಕೆ ಬರುವುದಿಲ್ಲ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು.

ಸರಕಾರ ಲೈಬ್ರರಿ ಮೂವ್‌ಮೆಂಟ್ ಪದದ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಇದು ಬಹಳ ಮುಖ್ಯವಾಗಿ ಆಗಬೇಕಾದ ವಿಷಯ. ಇಂತಹ ಲೈಬ್ರರಿಗಳನ್ನು ಮಾಡುವುದರಿಂದ ಶಾಲಾ ಮಕ್ಕಳಿಗೆ ಹೆಚ್ಚು ಆಸಕ್ತಿ ಬಂದು ಅಲ್ಲಿ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಚಿಲ್ಡ್ರನ್ಸ್ ಲೈಬ್ರರಿ ಎಂದು ಮಾಡಿರುತ್ತಾರೆ. ಅದರಂತೆ ಇಲ್ಲೂ ಮಾಡುವುದು ಅಗತ್ಯ. ಇದರಿಂದ ಹುಡುಗರು ಚೆನ್ನಾಗಿ ಓದುವುದನ್ನು ಅಭ್ಯಾಸ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಮತ್ತು ಮುಂದೆ ವಿದ್ಯಾರ್ಥಿಗಳು ಇದರಿಂದ ಹೆಚ್ಚಿನ ಪ್ರಯೋಜನವನ್ನೂ ಪಡೆಯುತ್ತಾರೆ. ಇದರ ಬಗ್ಗೆ ಸರಕಾರ ಆಸಕ್ತಿ ವಹಿಸಬೇಕು. ಇದರ ಜೊತೆಗೆ ಮೊಬೈಲ್ ಲೈಬ್ರರಿ ಎಂದು ಮಾಡುವುದೂ ಅಗತ್ಯ. ಇದರ ಕಡೆಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಮಂಗಳೂರು ಬಂದರು ವಿಚಾರವಾಗಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ಕಡೆ ಮಂಗಳೂರು ಬಂದರು ಮಾಡಬೇಕೆಂದು ಈಗಾಗಲೇ ಇದರ ಕಡೆಗೆ ತೀವ್ರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಇದ್ದರೂ ಇಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡಿದರೆ ಇದು ಬಹಳ ವಿಳಂಬವಾಗುವಂತೆ ಕಾಣುತ್ತದೆ. ಸರಕಾರ ಆದಷ್ಟು ಬೇಗನೆ ಇದರ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಬೆಂಗಳೂರು ಡೈರಿ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಈಗ್ಗೆ ಎರಡು ವರ್ಷಗಳ ಹಿಂದೆ ಸರಕಾರದವರು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಹಾಲಿನ ಡೈರಿಗಳನ್ನು ಸ್ಥಾಪಿಸುತ್ತೇವೆ ಎಂದು ಹೇಳಿದ್ದರು ಅದರಂತೆ ಕೆಲವು ಕಡೆಗಳಲ್ಲಿ ಮಾಡಿದರು. ಕೆಲವು ಚೆನ್ನಾಗಿ ನಡೆಯುತ್ತಿವೆ. ಕೆಲವು ಆರಂಭವಾಗಿ ಅರ್ಧದಲ್ಲೇ ನಿಂತು ಹೋಗಿವೆ. ಇದರ ಕಡೆಗೆ ಸರಕಾರ ಆದಷ್ಟು ತೀವ್ರ ಗಮನಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮಂಗಳೂರು ಬಂದರು ಯೋಜನೆಯ ಬಗ್ಗೆ ನೋಡುವಾಗ ಇದರ ಆಳ 30 ಅಡಿಗಳಿಗಿಂತಲೂ ಹೆಚ್ಚಾಗಿರುತ್ತದೆ ಮತ್ತು ಬೊಂಬಾಯಿ, ಕಲ್ಕತ್ತಾ ಹಾಗೂ ಮದ್ರಾಸು ಈ ಕಡೆಗಳಲ್ಲಿರುವ ಬಂದರುಗಳ ಆಳಕ್ಕಿಂತ ಇದು ಹೆಚ್ಚು ಆಳವಾಗಿರುವುದರಿಂದ ಇಲ್ಲಿ ಹೆಚ್ಚು ಸ್ಟೀಮರುಗಳು ದೊಡ್ಡದಾಗಿರುವುದು ಬಂದರೂ ನಿಲ್ಲಬಹುದು ಎಂದು ಈ ರೀತಿ ಮಾಡುತ್ತಿದ್ದಾರೆ ಎಂದು ಕೇಳುತ್ತೇವೆ. ಬೊಂಬಾಯಿ ಹಾಗೂ ಮದ್ರಾಸು ಇಲ್ಲಿನ ಬಂದರುಗಳಲ್ಲಿ ದೊಡ್ಡ ಪ್ರಮಾಣದ ಹಡಗುಗಳು ಬರುವುದಕ್ಕೆ ಸಾಧ್ಯವಿಲ್ಲ. ಆದರೆ ಈಗ ಮಂಗಳೂರಿನಲ್ಲಿ ಆಗುವ ಬಂದರು ಬಹಳ ದೊಡ್ಡ ಪ್ರಮಾಣದ ಹಡಗುಗಳೂ ಬರಲನುಕೂಲವಾಗುವಂತೆ ತಕ್ಕ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಈಗ ಒಂದು ಲಕ್ಷ ಟನ್ನುಗಳಷ್ಟು ಭಾರ ಉಳ್ಳ ಹಡಗೂ ಕೂಡ ಇಲ್ಲಿಗೆ ಬರಬಹುದು ಎಂದು ಈ ಬಂದರನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಕುದುರೆಮುಖದ ಯೋಜನೆಯನ್ನು ಮಾಡಲು ಹೊರ ದೇಶಗಳಿಂದ ಬಂದಿರುವ ತಜ್ಞರು ಇಲ್ಲಿ ಒಂದು ಲಕ್ಷ ಟನ್ನುಗಳಷ್ಟು ಭಾರ ಇರುವ ಸ್ಟೀಮರುಗಳು ಬಂದರೂ ನಿಲ್ಲಲು ಅವಕಾಶವಿರುವಂತೆ ಈ ಮಂಗಳೂರು ಬಂದರು ಮಾಡಬೇಕೆಂದು ಈ ಸರಕಾರಕ್ಕೆ ಸೂಚನೆ ಕೊಟ್ಟಿದ್ದಾರೆ ಎಂದು ಕೇಳುತ್ತೇವೆ. ಸರಕಾರದವರು ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಕೇಂದ್ರ ಸರಕಾರಕ್ಕೂ ಶಿಫಾರಸನ್ನು ಮಾಡಿ ಇದು ಆದಷ್ಟು ಬೇಗನೆ ಕಾರ್ಯಗತವಾಗುವಂತೆ ನಿಗಾ ಇಡಬೇಕೆಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ.

ಇನ್ನು ಸರ್ಟಿಫೈಡ್ ಸ್ಕೂಲ್‌ಗಳ ಬಗ್ಗೆ ಹಾಗೂ ರಿಮ್ಯಾಂಡ್ ಹೋಂಗಳ ಬಗ್ಗೆ ಹಾಗೂ ಫಿಸಿಕಲ್ ಹ್ಯಾಂಡಿಕ್ಯಾಪ್ ಎಂದರೆ ಅಂಗವಿಕಲರ ಬಗ್ಗೆ ಸಾಕಷ್ಟು ಸೌಕರ್ಯಗಳನ್ನು ಒದಗಿಸಿಲ್ಲ. ಇದರ ಕಡೆಗೆ ಆದಷ್ಟು ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಪಾಶ್ಚಾತ್ಯ ದೇಶಗಳಲ್ಲಿ ಅಂಗವಿಕಲರಿಗಾಗಿ ಹೆಚ್ಚು ಸೌಕರ್ಯಗಳನ್ನು ಮಾಡಿಕೊಡುತ್ತಿದ್ದಾರೆ. ಇದರಿಂದ ಅವರುಗಳು ಸಮಾಜದಲ್ಲಿ ಒಳ್ಳೆಯ ಜೀವನವನ್ನು ನಡೆಸುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅದರಂತೆ ನಮ್ಮ ದೇಶದಲ್ಲೂ ಕೂಡ ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ಗಣಿ ಮತ್ತು ಭೂತೈಲದ ಬಗ್ಗೆ ಹೇಳುವಾಗ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಯಾವ ಯಾವ ಭಾಗದಲ್ಲಿ ತೈಲ ಸಂಶೋಧನೆ ನಡೆದಿದೆ ಎಂಬ ಬಗ್ಗೆ ಹೇಳಿಲ್ಲ. ಒಂದು ಪ್ರದೇಶ ಏಳಿಗೆಯಾಗಬೇಕಾದರೆ, ಅಭಿವೃದ್ಧಿಯಾಗಬೇಕಾದರೆ, ಆ ಪ್ರದೇಶದಲ್ಲಿ ತೈಲ ನಿಕ್ಷೇಪ ಹೆಚ್ಚು ಇರ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಬೇಕು. ನಮ್ಮ ರಾಜ್ಯದಲ್ಲಿರುವ ಸಮುದ್ರದ ಕರಾವಳಿ ಪ್ರದೇಶಗಳಲ್ಲಿ ಮತ್ತು ಪರ್ವತದ ಕೆಳಗಿರುವ ಅರಣ್ಯಗಳಲ್ಲಿ ತೈಲ ನಿಕ್ಷೇಪವಿರಬಹುದೆಂಬ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಈ ಬಗ್ಗೆ ಸರ್ಕಾರದವರು ಸರಿಯಾದ ಕಾರ್ಯಕ್ರಮ ಕೈಕೊಳ್ಳಬೇಕೆಂದು ಈ ಸಮಯದಲ್ಲಿ ಒತ್ತಾಯ ಮಾಡಲು ಇಚ್ಛೆಪಡುತ್ತೇನೆ.

ಇನ್ನು ಮಹಾಜನ್ ವರದಿಯ ತೀರ್ಪು ಏನಿದೆ ಅದನ್ನು ಕೇಂದ್ರಸರ್ಕಾರದವರು ಜಾಗ್ರತೆ ಜಾರಿಗೆ ಕೊಡಬೇಕು. ಮೊದಲು ಆಯೋಗ ನೇಮಕವಾದಾಗ, ನೇಮಕವಾಗಬಾರದೆಂದು ಈ ಮನೆಯಲ್ಲಿ ಒತ್ತಾಯಪೂರ್ವಕವಾಗಿ ಕೇಂದ್ರಸರ್ಕಾರಕ್ಕೆ ಕೇಳಿಕೊಂಡೆವು. ಆಯೋಗ ಬೇಕೆಂದ ಕೇಳಿಕೊಂಡವರು ಮಹಾರಾಷ್ಟ್ರದವರು. ಈಗ ಮಹಾರಾಷ್ಟ್ರದವರು ಆಯೋಗದ ತೀರ್ಪು ನಮಗೆ ಸಮಂಜಸವಾಗಿಲ್ಲ, ಒಪ್ಪುವುದಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ನೋಡುವಾಗ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಹೋಗಿ ಸರ್ವಾಧಿಕಾರದಕಡೆಗೆ ಸರ್ಕಾರ ಹೋಗುತ್ತಿದೆಯೋ ಎಂಬಂತೆ ನನಗೆ ಕಾಣುತ್ತಿದೆ. ಮದ್ರಾಸ್ ಮತ್ತು ಆಂಧ್ರ ಬಾರ್ಡರ್ ವಿಷಯ ಬಂದಾಗ, ಹರಿಯಾನ ಮತ್ತು ಪಂಜಾಬ್ ಬಾರ್ಡರ್ ವಿಷಯ ಬಂದಾಗ ಕೇಂದ್ರಸರ್ಕಾರದವರು ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನ ಮಾಡಲಿಲ್ಲ. ಈಗ ಮಹಾಜನ ವರದಿಯ ಬಗ್ಗೆ ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದು ಕೇಂದ್ರದವರು ಹೇಳುತ್ತಿರುವುದು ಸರಿಯಾದ ಮಾತಲ್ಲ. ಸರ್ವಾಧಿಕಾರದ ಕಡೆಗೆ ಹೋಗುತ್ತಿದ್ದೇವೆ ಎಂಬ ಒಂದು ಹೆದರಿಕೆಯನ್ನು, ಬೆದರಿಕೆಯನ್ನು ಕೇಂದ್ರದವರು ನಮ್ಮ ಮುಂದೆ ಇಡುತ್ತಿದ್ದಾರೆ. ಆದಕಾರಣ ನಮ್ಮ ಮೈಸೂರು ಅಸೆಂಬ್ಲಿಯ ಸದಸ್ಯರುಗಳನ್ನು ಒಳಗೊಂಡಂತೆ ಒಂದು ಶಿಷ್ಟಮಂಡಲಿಯನ್ನು ನೇಮಕಮಾಡಿ ರಾಷ್ಟ್ರಾಧ್ಯಕ್ಷರ ಬಳಿಗೆ ಕಳಿಸುವುದು ಒಳ್ಳೆಯದು. ಪ್ರಜಾಪ್ರಭುತ್ವದ ತಳಹದಿಯನ್ನು ಬದಿಗೊತ್ತಿ ಸರ್ವಾಧಿಕಾರದ ಕಡೆಗೆ ಕೇಂದ್ರಸರ್ಕಾರದವರು ಹೋಗುತ್ತಿದ್ದಾರೆಂದು, ಈ ಒಂದು ಬೆದರಿಕೆಯನ್ನು ತಪ್ಪಿಸಬೇಕೆಂದು ರಾಷ್ಟ್ರಾಧ್ಯಕ್ಷರಲ್ಲಿ ಕೇಳಿಕೊಳ್ಳುವುದು ಒಳ್ಳೆಯದು. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡುವುದು ಒಳ್ಳೆಯದು. ಈ ಬಗ್ಗೆ ಒಂದು ನಿಯೋಗವನ್ನು ರಾಷ್ಟ್ರಾಧ್ಯಕ್ಷರಲ್ಲಿಗೆ ಕಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ನಮ್ಮ ರಾಜ್ಯದಲ್ಲಿ ಹಲವು ರೀತಿಯ ಪ್ರಗತಿಯಾಗಿದೆ. ನಮ್ಮ ರಾಜ್ಯದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿವೆ. ಇದೇ ಮಾನ್ಯ ಸಭೆಯ ಮುಂದೆ ಅನೇಕಬಾರಿ ನಮ್ಮ ಮಲೆನಾಡಿಗೆ ಒಂದು ಪ್ರತ್ಯೇಕವಾದ ವಿಶ್ವವಿದ್ಯಾನಿಲಯ ಬೇಕೆಂದು ಕೇಳಿಕೊಂಡಿದ್ದೇವೆ. ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈ ರಾಜ್ಯಪಾಲರ ಭಾಷಣದಲ್ಲಿ ಆಗಲೀ ಅಥವಾ ಸರ್ಕಾರದ ಧೋರಣೆಯಲ್ಲಿ ಆಗಲೀ ನಮ್ಮ ಮಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಯಾವ ಒಂದು ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಮಂಗಳೂರಿನಲ್ಲಿ ಸ್ನಾತಕೋತ್ತರ ತರಗತಿಗಳು ಅಂದರೆ ಪೋಸ್ಟ್ ಗ್ರಾಜುಯೇಟ್ ಟ್ರೈನಿಂಗ್ ಕ್ಲಾಸ್‌ಗಳು ಪ್ರಾರಂಭವಾಗಿವೆ. ಆದ್ದರಿಂದ ಆದಷ್ಟು ಜಾಗ್ರತೆ ನಮ್ಮ ಮಲೆನಾಡಿನಲ್ಲಿ ಒಂದು ಪ್ರತ್ಯೇಕವಾದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಕೇಳಿಕೊಂಡು, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದ ಮೇಲೆ ಮತ್ತು ಇದರ ಬಗ್ಗೆ ತಂದಿರುವ ತಿದ್ದುಪಡಿಯ ಬಗ್ಗೆ ಸಲಹೆ ಮಾಡುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಶಾಸನ ಸುವ್ಯವಸ್ಥೆಯ ಬಗ್ಗೆ ಪ್ರಸ್ತಾಪಮಾಡುತ್ತ, ರಾಜ್ಯದಲ್ಲಿ ಶಾಸನ ಸುವ್ಯವಸ್ಥೆ ಯೋಗ್ಯ ರೀತಿಯಲ್ಲಿ ನಡೆದಿಲ್ಲವೆಂದು ಹೇಳಿದ್ದಾರೆ. ಅಂದರೆ ರಾಜ್ಯದಲ್ಲಿ ಶಾಸನ ಸುವ್ಯವಸ್ಥೆಯನ್ನು ಚೆನ್ನಾಗಿ ನಡೆಸುವ ಬಗ್ಗೆ ಸರ್ಕಾರದವರು ಯೋಚನೆ ಮಾಡಿಲ್ಲವೆಂದು ಅರ್ಥವಾಗುತ್ತದೆ. ಈಗಾಗಲೆ ರೈತರ ಏಳಿಗೆಗಾಗಿ ಮತ್ತು ರೈತರ ಅಭಿವೃದ್ಧಿಗಾಗಿ ಅನೇಕ ಶಾಸನಗಳನ್ನು ಈ ಶಾಸನ ಸಭೆಯಲ್ಲಿ ಮಂಡಿಸಿ ತೀರ್ಮಾನಿಸಿದ್ದರೂ ಸಹ ಇದುವರೆಗೆ ಕಾರ್ಯತಃ ಜಾರಿಗೆ ತಂದಿಲ್ಲ. ಅವುಗಳಲ್ಲಿ ಮುಖ್ಯವಾದಂಥ ಎರಡು ಶಾಸನಗಳ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇನೆ. ಮೈಸೂರು ಅಗ್ರಿಕಲ್‌ಚರ್ ಪ್ರಾಡ್ಯೂಸ್ ಮಾರ್ಕೆಟಿಂಗ್ ರೆಗ್ಯುಲೇಷನ್ ಆಕ್ಟ್ 1966 ಬಿಲ್ ಒಂದೂವರೆ ವರ್ಷದ ಹಿಂದೆ ಶಾಸನವಾಗಿದ್ದರೂ ಸಹ ಈ ದೇಶದಲ್ಲಿ ಇನ್ನೂ ಜಾರಿಗೆ ಕೊಟ್ಟಿಲ್ಲ. ಮತ್ತು ಇದಕ್ಕೆ ಸಂಬಂಧಪಟ್ಟಂತೆ ಇರುವ ಕಮಿಟಿಗಳಿಗೆ ಚುನಾವಣೆ ಮಾಡುವುದಕ್ಕೂ

ಸಹ ಸರ್ಕಾರದವರು ಹಿಂಜರಿಯುತ್ತಿದ್ದಾರೆ. ಚುನಾವಣೆ ನಡೆಸಿದರೆ ಆಡಳಿತ ಪಕ್ಷದವರ ಕಡೆಯುವರಿಗೆ ತೊಂದರೆಯಾಗಬಹುದೆಂದು ತಿಳಿದುಕೊಂಡು ಚುನಾವಣೆಯನ್ನು ಮುಂದುವರಿಸಿ ಕೊಂಡು ಹೋಗುತ್ತಿದ್ದಾರೆಂದು ಕಾಣುತ್ತದೆ. ಇಂತಹ ಕಾನೂನುಗಳನ್ನು ಜಾರಿಗೆ ತರದಿದ್ದರೆ, ಯಾರ ಅನುಕೂಲಕ್ಕಾಗಿ ಇಂತಹ ಕಾನೂನುಗಳನ್ನು ತರುತ್ತೀರೋ ಅಂತಹವರಿಗೆ ತೊಂದರೆ ಮಾಡಿದಂತಾಗುತ್ತದೆ. ಈ ಶಾಸನವನ್ನು ಜಾರಿಗೆ ತರದಿರುವುದರಿಂದ ರೈತರ ಏಳಿಗೆ ಕುಂಠಿತವಾಗುತ್ತದೆಯೆಂದು ಹೇಳುತ್ತೇನೆ. ಇನ್ನೊಂದು ಶಾಸನವೆಂದರೆ: ಮೈಸೂರು ಅಗ್ರಿಕಲ್ಚರಲ್ ಡೆಟರ್ಸ್ ರಿಲೀಫ್ ಆಕ್ಟ್, ಇದನ್ನು ತಂದ ಉದ್ದೇಶವೆಂದರೆ ರೈತರ ಋಣ ಪರಿಹಾರ ಮಾಡುವುದಕ್ಕಾಗಿ. ಆದರೆ ಈ ಶಾಸನವನ್ನು ಇನ್ನೂ ಜಾರಿಗೆ ತಂದಿಲ್ಲ. ಇದನ್ನು ಜಾರಿಗೆ ತರುವ ಅವಶ್ಯಕತೆ ಇತ್ತು. ಈ ಶಾಸನವನ್ನು ಜಾರಿಗೆ ಕೊಡದೆ ರೈತರಿಗೆ ಅನ್ಯಾಯ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಮತ್ತೊಂದು ಶಾಸನವೆಂದರೆ, ಮೈಸೂರು ವೇರ್‌ಹೌಸ್ ಆಕ್ಟ್ 1961. 1962ನೇ ಇಸವಿಯಲ್ಲಿ ಇದು ಪಾಸಾಗಿದ್ದರೂ ಸಹ ಇನ್ನೂ ಜಾರಿಗೆ ತಂದಿಲ್ಲ. ಕಳೆದ 6 ವರ್ಷಗಳಿಂದ ಜಾರಿಗೆ ತಂದಿರುವುದನ್ನು ನೋಡಿದರೆ ಮೈಸೂರಿನಲ್ಲಿ ಆಡಳಿತ ನಡೆಯುತ್ತಿದೆಯೇ ಎನ್ನುವ ಅನುಮಾನ ಬರುತ್ತದೆ. ಈ ದೇಶದ ಅಭಿವೃದ್ಧಿ ಬಗ್ಗೆಯಾಗಲೀ, ಈ ದೇಶದ ಜನತೆಯ ಬಗ್ಗೆಯಾಗಲೀ ಈಗಿರುವ ಸರ್ಕಾರಕ್ಕೆ ಆಸಕ್ತಿಯಿಲ್ಲವೆಂದು ಕಾಣುತ್ತದೆ. ರೈತರ ಅಭಿವೃದ್ಧಿಗೋಸ್ಕರ ಕಾನೂನುಗಳನ್ನು ಮಾಡಿ, ನಂತರ ಅವುಗಳನ್ನು ತಡೆಹಿಡಿಯುವುದು ಸರಿಯಲ್ಲವೆಂದು ಕಾಣುತ್ತದೆ. ಶಾಸನ ಸುವ್ಯವಸ್ಥೆಯ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುವಾಗ ತುಮಕೂರು ಜಿಲ್ಲೆಯಲ್ಲಿ ಮತ್ತು ಮಧುಗಿರಿಯಲ್ಲಿ ನಡೆದ ಪ್ರಕರಣಗಳ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲ. ಮಧುಗಿರಿಯಲ್ಲಿ ನಡೆದ ಪ್ರಕರಣವನ್ನು ಯೋಚನೆ ಮಾಡಿದಾಗ, ಆ ರೀತಿ ಈ ಯುಗದಲ್ಲೇ ನಡೆದಿಲ್ಲವೆಂದು ಕಾಣುತ್ತದೆ. ಈ ಪ್ರಕರಣದ ಬಗ್ಗೆ ಪ್ರಸ್ತಾಪ ಮಾಡುವುದನ್ನು ರಾಜ್ಯಪಾಲರಾಗಲೀ, ಸರ್ಕಾರದವರಾಗಲೀ ಮರೆತಿರುವಂತೆ ಕಾಣುತ್ತದೆ. ರಾಜ್ಯಪಾಲರು ಕೇವಲ ಆಡಳಿತ ಪಕ್ಷದ ಮುಖವನ್ನೇ ಅಂದರೆ ಇದುವರೆಗೆ ಆಗಿರ ತಕಂಥ ಕೆಲಸಗಳನ್ನೇ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸರ್ಕಾರ ಶಕ್ತಿದಾಯಕವಾಗಿ ನಡೆದುಕೊಂಡು ಹೋಗುವ ಬಗ್ಗೆ ಯಾವ ಪ್ರಸ್ತಾಪವನ್ನೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಾಡಿಲ್ಲ.

ಇನ್ನು ಇವತ್ತಿನದಿನದ ಪತ್ರಿಕೆಗಳಲ್ಲಿ ಕನ್ನಡವನ್ನು ತಾಲ್ಲೂಕ್ ಮಟ್ಟದಲ್ಲಿ ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವ ಬಗ್ಗೆ ಸಚಿವ ಸಂಪುಟ ತೀರ್ಮಾನಿಸಿತೆಂದು ವರದಿಯಾಗಿದೆ. ತಾಲ್ಲೂಕ್ ಮಟ್ಟಕ್ಕಿಂತ ಜಿಲ್ಲಾ ಮಟ್ಟದಲ್ಲಿ ಜಾರಿಗೆ ತಂದರೆ ಒಳ್ಳೆಯದು. ಇದರಿಂದ ವ್ಯವಹಾರಗಳು ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಭಾಷಾಂತರಕಾರರನ್ನು ನೇಮಿಸಬೇಕು.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಖುತುಮಾನಸ್ಥಿತಿ ಮತ್ತು ಪರಿಹಾರ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಒಂದೊಂದು ಜಿಲ್ಲೆಗೆ 40 ಸಾವಿರ ರೂಪಾಯಿಗಳನ್ನು ಮಾತ್ರ ಹಂಚಿದ್ದಾರೆ. ಸ್ವಾಭಾವಿಕವಾಗಿ ಬಹಳ ಹೆಚ್ಚಿನ ಕ್ಷಾಮ ಪ್ರದೇಶಗಳಾದ ತುಮಕೂರು ಮತ್ತು ಇತರ ಜಿಲ್ಲೆಗಳಿಗೆ 40 ಸಾವಿರ ರೂಪಾಯಿಗಳನ್ನು ಹಂಚಿದರೆ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಂಡು ಹೆಚ್ಚು ಜನರಿಗೆ ಪರಿಹಾರವನ್ನು ಒದಗಿಸುವುದಕ್ಕಾಗುವುದಿಲ್ಲ. ಪ್ರತಿಯೊಂದು ಜಿಲ್ಲೆಗೆ 4–5 ಲಕ್ಷ ರೂಪಾಯಿಗಳನ್ನಾದರೂ ಒದಗಿಸುವ ವ್ಯವಸ್ಥೆ ಮಾಡದೇ ಹೋದರೆ ಆಯಾ ತಾಲ್ಲೂಕಿನ ಜನರಿಗೆ ಬಹಳ ಕಷ್ಟವಾಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ಸಾಕಷ್ಟು ಹಣ ಒದಗಿಸಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳದಿದ್ದರೆ ಕ್ರಾಂತಿಯಾಗುವ ಸನ್ನಿವೇಶ ಹತ್ತಿರ ಬರುತ್ತದೆ. ಈಗಿನ ಸರ್ಕಾರ ಜನರನ್ನು ಗುಂಡಿಕ್ಕಿ ಕೊಲ್ಲುವ ಸ್ಥಿತಿಗೆ ಬಂದಿದೆ. ರಕ್ತಕ್ರಾಂತಿಯಾಗುವುದಕ್ಕೆ ಸರ್ಕಾರದವರು ಅವಕಾಶ ಕೊಡದೆ ಕ್ಷಾಮ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಜರೂರಾಗಿ ಮತ್ತು ತ್ವರಿತವಾಗಿ ತೆಗೆದುಕೊಳ್ಳಲು ಅನುಕೂಲವಾಗುವಂತೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1-30 P.M.

ಆಮೇಲೆ ಕುಟುಂಬ ಯೋಜನಾ ಕಾರ್ಯಕ್ರಮದ ಬಗ್ಗೆ 1968–69ರಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 223 ಲಕ್ಷ ರೂಪಾಯಿ ವೆಚ್ಚವಾಗುವುದು ಎಂದು ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ಈ ಕುಟುಂಬ ಯೋಜನಾ ಕಾರ್ಯಕ್ರಮವು ಒಂದು ವಿಚಿತ್ರ ರೀತಿಯಲ್ಲಿ ವ್ಯವಸ್ಥೆಯಾಗಿದೆ ಎಂದು ಹೇಳಬಹುದು. ಒಬ್ಬ ವ್ಯಕ್ತಿಗೆ ಎರಡು ರೂಪಾಯಿ ಕೊಡುವುದು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ 18 ರೂಪಾಯಿ ಕೊಡುವುದು ಈ ರೀತಿ ಹಣ ಹಂಚುವ ಕಾರ್ಯಕ್ರಮ ನಡೆದಿದೆ. ಈ ರೀತಿ ಮಾಡದೆ ಒಂದು ಸರಿಯಾದ ಶಾಸನವನ್ನು ಜಾರಿಗೆ ತಂದರೆ ಯೋಗ್ಯವಾಗುತ್ತದೆ

(ಶ್ರೀ ಪಿ. ಎಲ್. ಶಿವಪ್ಪ)

ಮತ್ತು ಈ 223 ಲಕ್ಷ ರೂಪಾಯಿ ಖರ್ಚು ಮಾಡುವುದನ್ನು ಬೇರೆ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ.

ಇನ್ನು ತೆಂಗಿನ ತೋಟದ ಅಭಿವೃದ್ಧಿಪಡಿಸುವ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ತೆಂಗಿನ ತೋಟ ಅಭಿವೃದ್ಧಿಯಾಗಬೇಕಾದರೆ ಕೋಕೋನಟ್ಸ್ ಪಿಕ್‌ಅಪ್ಸ್ ಮಾಡಬೇಕು. ನಾಲ್ಕಾರು ಅಡಿ ಅಂತರದಲ್ಲಿ ನೀರಾವರಿಯಾಗುವುದಕ್ಕೆ ಅವಕಾಶ ಇರಬೇಕು. ಬೈಲು ಪ್ರದೇಶದಲ್ಲಿ ಪಿಕ್‌ಅಪ್ಸ್ ಮಾಡಿ ಈ ಯೋಜನೆ ಜಾರಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಎಂ. ಬಸವರಾಜು (ಕೃಷ್ಣರಾಜ ನಗರ).—ಸನ್ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣವನ್ನು ನೋಡಿದಾಗ ಇದು ನಿಜವಾಗಿಯೂ ಸರಕಾರದ ಮುಖವಾಣಿಯೋ ಅಲ್ಲವೋ ಎಂದು ಅನುಮಾನ ಬಂತು. ರಾಜ್ಯಪಾಲರ 29 ಪುಟದ ಭಾಷಣದಲ್ಲಿ ಎಲ್ಲಿಯೂ ಸಹ ಮುಂದಿನ 12 ತಿಂಗಳುಗಳಲ್ಲಿ ಸರಕಾರದ ಧೋರಣೆ ಯಾವ ರೀತಿ ಇರುತ್ತದೆ ಎನ್ನುವ ನಿರೂಪಣೆ ಇಲ್ಲ. ಆದರೆ ನಮ್ಮ ಪಕ್ಕದ ಮದ್ರಾಸ್ ರಾಜ್ಯದ ರಾಜ್ಯಪಾಲರ ಭಾಷಣದಲ್ಲಿ ಸರಕಾರದ ನೀತಿ ಹೇಗೆ ಇರುತ್ತದೆ ಎನ್ನುವುದನ್ನು ಹೇಳಿರುವುದು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಅವರು ನಿರ್ದಿಷ್ಟವಾಗಿ ಈ ರೀತಿ ಹೇಳಿದ್ದಾರೆ.

"It is the firm view of my Government..........."

ಭಾಷೆಯ ಗೊಂದಲದಿಂದ ಕೆಲವು ನಾನ್-ಹಿಂದಿ ಪ್ರದೇಶದಲ್ಲಿ ತಮ್ಮ ಹಿತಕ್ಕೆ ಧಕ್ಕೆ ಆಗುತ್ತದೆ ಎಂದು ಇದು ನನ್ನ ಸರಕಾರದ ಅಭಿಪ್ರಾಯ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ರಾಜ್ಯಾಂಗಕ್ಕೆ ಒಂದು ಸೂಕ್ತ ತಿದ್ದುಪಡಿ ತರಬೇಕೆಂದು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಎಲ್ಲಿಯೂ ಹೇಳಿದಂತೆ ಕಾಣುವುದಿಲ್ಲ. ಈ ವಿಚಾರದಲ್ಲಿ ಮದ್ರಾಸ್ ರಾಜ್ಯಪಾಲರು ಹೇಳಿರುವುದು ಈ ರೀತಿ ಇದೆ :

> "It is the firm view of my Government that in the light of experience during the last 15 years a high level review of the Constitution, dealing with resources and powers as between the Central Government and the States is essential."

ತಮ್ಮ ಸರಕಾರ ಯಾವುದಾದರೂ ಒಂದು ಅನುಕೂಲ ಹೊಂದಬೇಕು ಎನ್ನುವುದಕ್ಕೆ ಒಂದು ದೃಢವಾದ ನೀತಿ ನಿರೂಪಣೆ ಮಾಡಲು ಒಂದು ರೀತಿಯ ಮಾರಲ್ ಕರೇಜ್ ಹಾಗೆ ಇದೆ. ಆದರೆ ನಮ್ಮ ರಾಜ್ಯದ ರಾಜ್ಯಪಾಲರ ಭಾಷಣದಲ್ಲಿ ಇಂಥ ಒಂದು ವಾಕ್ಯ, ಒಂದು ಪದ ಕೂಡ ಕಂಡುಬರುವುದಿಲ್ಲ.

ಇನ್ನೊಂದು ಮುಖ್ಯವಾದ ವಿಚಾರ. ನಮ್ಮ ದೇಶದ ಬೇಸಾಯದ ಕ್ಷೇತ್ರದಲ್ಲಿ ಒಂದು ಮುಖ್ಯ ಭಾಗವಾಗಿರುವ ಅಗ್ರಿಕಲ್ಚರಲ್ ಲೇಬರರ್ಸ್ ಅಂದರೆ ಒಕ್ಕಲತನದ ಕಾರ್ಮಿಕರ ಬಗ್ಗೆ ರಾಜ್ಯಪಾಲರ 29 ಪುಟದ ಭಾಷಣದಲ್ಲಿ ಎಲ್ಲಿಯೂ ಅವರ ಹೆಸರು ಕೂಡ ಬರುವುದಿಲ್ಲ. ಆದರೆ ಕೈಗಾರಿಕಾ ಕ್ಷೇತ್ರದಲ್ಲಿ ಇರತಕ್ಕ 11 ಲಕ್ಷ ಕಾರ್ಮಿಕರ ಬಗ್ಗೆ ಅವರಿಗೆ ಪ್ರೊಟೆಕ್ಷನ್ ಬೇಕು ಎಂದು ಅವರ ಜೀವನಕ್ಕೆ ಬೇಕಾಗುವ ಸೌಕರ್ಯದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಆ ವಿಷಯ ಪ್ರಸ್ತಾಪಮಾಡಿದ್ದಾರೆ. ಆದರೆ ಮೈಸೂರು ದೇಶದಲ್ಲಿ ಇರತಕ್ಕ ಹದಿನೇಳು ಲಕ್ಷ ಅಗ್ರಿಕಲ್ಚರಲ್ ಲೇಬರರ್ಸ್ ಬಗ್ಗೆ ಒಂದು ಮಾತೂ ಒಂದು ಸಹಾನುಭೂತಿಯ ಮಾತು ಕೂಡ ಬರುವುದಿಲ್ಲ ಎನ್ನುವುದು ಬಹಳ ವ್ಯಥೆಯಾಗುತ್ತದೆ. ಹಳ್ಳಿಗಾಡಿನಲ್ಲಿ ಇರತಕ್ಕಂಥ 17 ಲಕ್ಷ ವ್ಯವಸಾಯ ಕಾರ್ಮಿಕರ ಜೀವನದ ಪರಿಸ್ಥಿತಿ ಸುಧಾರಣೆಯಾಗಬೇಕು ಮತ್ತು ಅವರಿಗೆ ಅಗತ್ಯವಿರುವ ರಕ್ಷಣೆ ಕೊಡಬೇಕಾದುದು ಅಗತ್ಯವಾಗಿದೆ. ಸರಕಾರ ಒದಗಿಸಿರುವ ಅಂಕಿ ಸಂಖ್ಯೆಗಳ ಪ್ರಕಾರ ಒಂದು ವರ್ಷದ 365 ದಿವಸಗಳಲ್ಲಿ ಇವರಿಗೆ 143 ದಿವಸ ಮಾತ್ರ ಕೂಲಿ ಸಿಕ್ಕುತ್ತದೆ. ಇದರಿಂದ ಅವರು ಜೀವನ ಮಾಡಬೇಕಾಗಿದೆ. ಜೀವನ ಮಟ್ಟಕ್ಕೆ ಬೇಕಾಗುವ ಸಂಪಾದನೆ ಇಲ್ಲದೆ ಬಹಳ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಇದಲ್ಲದೆ ಇತ್ತೀಚೆಗೆ ಕಾಸ್ಟ್ ಆಫ್ ಲಿವಿಂಗ್ ಕೂಡ ಹೆಚ್ಚಾಗಿದೆ. ಅಂಥವರಿಗೆ ಏನೇನು ಅನುಕೂಲ ಮಾಡಿ ಕೊಡಬೇಕು ಎನ್ನುವುದಕ್ಕೆ ಸರಕಾರ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ ಮತ್ತು ಇದರ ಬಗ್ಗೆ ಒಂದು ನಿರ್ದಿಷ್ಟವಾದ ಸೂಚನೆ ಈ ರಾಜ್ಯಪಾಲರ ಭಾಷಣದಲ್ಲಿ ಕಂಡುಬರುವುದಿಲ್ಲ. ಇದು ತುಂಬಾ ಶೋಚನೀಯವಾದುದು. ಈ ಕಾರ್ಮಿಕರು ಅಗಾಧ ಸಂಕಟದಲ್ಲಿ ಇದ್ದಾರೆ. ಕಳೆದ ಮೂರು ವರ್ಷ ಅಭಾವ ಪರಿಸ್ಥಿತಿ ಉಂಟಾಗಿ

ಕಷ್ಟದಲ್ಲಿ ಇರುವುದರಿಂದ ಅವರ ಬಗ್ಗೆ ಒಂದು ಸಹಾನುಭೂತಿಯ ಮಾತು ರಾಜ್ಯಪಾಲರ ಭಾಷಣದಲ್ಲಿ ಬಾರದೇ ಇರುವುದು ಬಹಳ ದುಃಖದ ವಿಷಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೋ-ಆಪರೇಟಿವ್ ಸೆಕ್ಟರ್ ವಿಷಯ ಹೇಳುವುದಾದರೆ ಇದರಲ್ಲಿ ಸರಕಾರ ಕೋಟ್ಯಾಂತರ ರೂಪಾಯಿ ಹಂಚುವುದಕ್ಕೆ ಕೊಡುತ್ತಿದ್ದಾರೆ. ನಿಜವಾಗಿ ಯಾರಿಗೆ ಹಣ ಸಿಕ್ಕಬೇಕೋ ಅವರಿಗೆ ಹಣ ಸಿಕ್ಕುವುದಿಲ್ಲ, ಯಾರಿಗೆ ಇದರಿಂದ ಅನುಕೂಲವಾಗಬೇಕೋ ಅವರಿಗೆ ಅನುಕೂಲವಾಗುತ್ತಾ ಇಲ್ಲ. ನಮ್ಮ ಬ್ಯಾಂಕ್‌ನಲ್ಲಿ ಇರತಕ್ಕ ಅಂಕಿ ಅಂಶಗಳ ಬಗ್ಗೆ ಹೇಳಲು ನಾನು ಇಷ್ಟಪಡುತ್ತೇನೆ. 1962 ರಿಂದ 1967 ರ ವರೆಗೆ ಎರಡು ಎಕರೆ ಜಮೀನು ಇರತಕ್ಕವರಿಂದ ಹಿಡಿದು ಒಟ್ಟು 10 ಲಕ್ಷ 11 ಸಾವಿರ ರೂಪಾಯಿ ಅಡಮಾನ್ ಬ್ಯಾಂಕು ಸಾಲ ಕೊಟ್ಟಿದೆ. ಇದರಲ್ಲಿ ಎರಡು ಎಕರೆಗಿಂತ ಜಮೀನು ಕಡಿಮೆ ಇರತಕ್ಕಂಥ 61 ಅಪ್ಲಿಕೇಷನ್‌ಗಳಿಗೆ 1,01,500 ರೂಪಾಯಿ ಸಾಲ ಕೊಟ್ಟಿದ್ದಾರೆ. 5 ಎಕರೆಗೆ ಮೇಲ್ಪಟ್ಟು ಜಮೀನು ಇರತಕ್ಕಂಥವರಿಗೆ ಸಾಲ ಕೊಟ್ಟಿರುವುದು 135 ಜನರ ಅಪ್ಲಿಕೇಷನ್‌ಗಳಿಗೆ 6 04,900 ರೂಪಾಯಿ ಸಾಲ ದೊರೆತಿದೆ. ವ್ಯವಸಾಯಗಾರರು ಇವರು ವೀಕರ್ ಸೆಕ್ಷನ್ ಆಗಿದ್ದರೂ ಕೂಡ ಸಾಲ ಮಂಜೂರು ಆಗದೇ ಇದ್ದವರು ಅಗಾಧ ಸಂಖ್ಯೆಯಲ್ಲಿ ಇದ್ದಾರೆ. ಸಾಲ ಪಡೆದವರು ಸ್ವಲ್ಪ ಜನ. ಅವರ ಸಂಖ್ಯೆ ಬಹಳ ಕಡಿಮೆ ಇದೆ. ಕಡಿಮೆ ಜಮೀನು ಇರತಕ್ಕವರಿಗೆ ಒಂದು ಲಕ್ಷ ರೂಪಾಯಿ ಸಾಲ ಕೊಟ್ಟರೆ ಹೆಚ್ಚು ಜಮೀನು ಇರತಕ್ಕವರಿಗೆ ಆರು ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ. ವ್ಯವಸಾಯದ ಬಗ್ಗೆ ರಾಜ್ಯ ಸರಕಾರ ತಳೆದಿರುವ ಒಂದು ನೀತಿ ನಿಲುವು ತುಂಬಾ ಶೋಚನೀಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ (ಬೇಲೂರು).—ಸ್ವಾಮಿ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಬಹಳ ಜನ ಸದಸ್ಯರಿಗೆ ಅವಕಾಶ ಕೊಟ್ಟಿಲ್ಲ, ಈ ರೀತಿ ಮಾತನಾಡಲು ಅವಕಾಶ ಕೊಡದೇ ಇರುವುದು ಬಹಳ ಅನ್ಯಾಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷರು.—ಈಗ ಶ್ರೀಮಾನ್ ಅರಕೇರಿ ಅವರು ಮಾತನಾಡಲಿ.

ಶ್ರೀ ಎಸ್. ಎಸ್. ಅರಕೇರಿ (ಬ[illegible]ಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಿಂದ ಸರಕಾರ ಮಾಡಿರುವ ಸಾಧನೆಯ ನಿರೂಪಣೆ ನೋಡಿದಾಗ ಕಳೆದ ಹತ್ತು ವರ್ಷಗಳಲ್ಲಿ ರಾಜ್ಯಪಾಲರ ಭಾಷಣ ನೋಡಿದಾಗ ದಿನೇ ದಿನೇ ರಾಜ್ಯಪಾಲರ ಭಾಷಣದ ಸ್ಟ್ಯಾಂಡರ್ಡ್ ಕೆಳಮಟ್ಟಕ್ಕೆ ಹೋಗುತ್ತಾ ಇದೆ ಎನ್ನುವುದು ಕಂಡುಬರುತ್ತದೆ. ಕಳೆದ ಹತ್ತು ವರ್ಷದ ರಾಜ್ಯಪಾಲರ ಭಾಷಣ ನೋಡಿದಾಗ ಈ ಕಾಂಗ್ರೆಸ್ ಸರಕಾರದ ಮಟ್ಟವು ದಿನೇ ದಿನೇ ಕೆಳಮಟ್ಟಕ್ಕೆ ಹೋಗುತ್ತಾ ಇದೆ ಎನ್ನುವುದು ಕಂಡುಬರುತ್ತದೆ. ಕಳೆದ ಇಪ್ಪತ್ತು ವರ್ಷ ಈ ಪ್ರಜಾ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವು ಸಾಮಾನ್ಯ ಜನತೆಗೆ ಬೇಕಾದ ಅನ್ನ ಬಟ್ಟೆ ವಸತಿ ಈ ಮೂರು ಸಮಸ್ಯೆಗಳನ್ನು ಸಮಾಧಾನಕರವಾಗಿ ಬಗೆಹರಿಸಿಲ್ಲ. ಇವರು ತಿರುಕನ ಕನಸು ಕಂಡ ಹಾಗೆ ಆಗುತ್ತಿದೆ. ರಾಜ್ಯಪಾಲರ ಭಾಷಣ ನೋಡಿದಾಗ ಎಲ್ಲವೂ ತಿರುಕನ ಕನಸಿನಲ್ಲಿರುವಂತೆ ಆಗಿದೆ. ಕನಸು ಕಂಡ ಮೇಲೆ ಏನೂ ಇಲ್ಲ, ಎಲ್ಲವೂ ಹೋಯಿತು ಎನ್ನುವ ಹಾಗೆ ರಾಜ್ಯಪಾಲರು ಭಾಷಣ ಮಾಡಿ ಹೋದ ಮೇಲೆ ನಮಗೆ ನಿಜ ಸ್ಥಿತಿ ಕಂಡುಬರುತ್ತದೆ.

ರಾಜ್ಯಪಾಲರ ಭಾಷಣದಲ್ಲಿ ಕನ್ನಡನಾಡಿನ ರೈತರ ಏಳಿಗೆಯ ವಿಚಾರವಾಗಿ ಆಗಲೀ, ಬಡ ಜನರ ಏಳಿಗೆಯ ವಿಚಾರವಾಗಿಯಾಗಲೀ ಏನೂ ಧೋರಣೆಯನ್ನು ಕಲ್ಪಿಸಿಲ್ಲ. ಇವತ್ತಿನ ದಿವಸ ಲಕ್ಷಾಂತರ ಜನ ಸುಶಿಕ್ಷಿತರು ಮತ್ತು ನಿರಕ್ಷರಿಗಳು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಇದರ ಬಗ್ಗೆ ಒಂದೇ ಒಂದು ಮಾತನ್ನೂ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿಲ್ಲ. ಒಂದು ವರ್ಷದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಯಾವರೀತಿ ಬಗೆಹರಿಸುತ್ತಾರೆ, ಎಷ್ಟು ಜನ ನಿರುದ್ಯೋಗಿಗಳು ಕನ್ನಡನಾಡಿನಲ್ಲಿದ್ದಾರೆ ಎನ್ನುವುದು ಕಿಂಚಿತ್ತೂ ರಾಜ್ಯಪಾಲರ ಭಾಷಣದಲ್ಲಿಲ್ಲ. ಕಾಂಗ್ರೆಸ್ ಸರಕಾರದಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಮಾತ್ರವೂ ಪ್ರಯತ್ನ ನಡೆದಿಲ್ಲ ಎಂದು ಕಂಡುಬರುತ್ತದೆ.

ಆಹಾರ ಸಮಸ್ಯೆ ಮೇಲೆ ಹೇಳಬೇಕಾದರೆ ಈಗ ಸಕ್ಕರೆ ಡೀಕಂಟ್ರೋಲ್ ಮಾಡಿದ್ದಾರೆ. ಇದನ್ನು ನೋಡಿದರೆ ಸರಕಾರದ ಕೋಟಾ ಕೂಡ ಸಹಕಾರ ಸಂಸ್ಥೆಗಳಿಗೆ ಕೊಡುವುದು ಕಾಳಸಂತೆಗೆ ಹೋಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರ ಸಂಸ್ಥೆಗಳು ಎಲ್ಲೆಲ್ಲಿವೆ ಅಲ್ಲೆಲ್ಲಾ ಸಕ್ಕರೆ ಬಂದರೆ 5 ಕಿಲೋ ಅಥವಾ 10 ಕಿಲೋಗಳ, ಸಕ್ಕರೆಯನ್ನು ಆ ಸಂಸ್ಥೆಯ ಚೇರ್‌ಮನ್ ಅವರಿಗೆ ಅಥವಾ ಪ್ರೆಸಿಡೆಂಟರಿಗೆ ಹಂಚಲು ಕೊಟ್ಟರೆ ಆತ ಊರಿಗೆ ಮುಟ್ಟುವುದರೊಳಗೆ ಮಾರಿಕೊಂಡು ಹೋಗುತ್ತಾನೆ. ಹೀಗಾದರೆ ಕೇಂದ್ರ ಸರ್ಕಾರದವರು ಡೀಕಂಟ್ರೋಲ್ ಮಾಡಿದ್ದರಿಂದ

(ಶ್ರೀ ಎಸ್. ಎಸ್. ಅರಕೇರಿ)

ಏನು ಪ್ರಯೋಜನವಾದ ಹಾಗೆ ಆಯಿತು? ಮೊದಲು ಏನು ಸಕ್ಕರೆ ಧಾರಣೆ ಇತ್ತೋ ಅದೇ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ನಮ್ಮ ಕನ್ನಡ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ವಿಚಾರದ ಬಗ್ಗೆ ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕುಟುಂಬ ಯೋಜನೆಯ ಬಗೆ ಕಾಂಗ್ರೆಸ್ ಸರ್ಕಾರಕೆ ಒಂದು ಹುಚ್ಚು ಹಿಡಿದಿದೆ ಎಂದು ಕಾಣುತ್ತದೆ. 1966-67 ರಲ್ಲಿ 93 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, 1967-68 ರಲ್ಲಿ 142 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, 1968-69 ರಲ್ಲಿ 221 ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಖರ್ಚು ಮಾಡುವುದೆಂದರೆ, ಕುಟುಂಬ ಯೋಜನೆಯ ಬಗ್ಗೆ ಈ ಸರ್ಕಾರಕೆ ಹುಚ್ಚು ಹಿಡಿದಿದೆ ಎಂದು ನನಗನಿಸುತ್ತದೆ. ಇದೇ ಹಣವನ್ನು ವೆಚ್ಚ ಮಾಡಿ ನಾನ್‌ಗೆಜೆಟೆಡ್ ಅಧಿಕಾರಿಗಳಿಗೆ ಏನಾದರೂ ಸಹಾಯ ಮಾಡಿದರೆ ಎಷ್ಟೋ ಉತ್ತಮ ರೀತಿಯಿಂದ ಸದುಪಯೋಗ ಆಗುತ್ತಿತ್ತು. ವಂಕಿ ಧಾರಣೆ, ಗರ್ಭ ನಿರೋಧಕ ಕಾರ್ಯಗಳು ಇವುಗಳ ಬಗ್ಗೆ ಸರ್ಕಾರ ವೆಚ್ಚ ಮಾಡುತ್ತಿರುವುದು ದುರುಪಯೋಗವಾಗುತ್ತಿದೆಯೋ ಎನ್ನುವ ಸಂಗತಿ ನಮ್ಮ ಮುಂದೆ ಇದೆ. ವಂಕಿ ಧಾರಣೆ ಮಾಡಿಸಿಕೊಂಡವರು, ಇವತ್ತು ಧಾರಣೆ ಮಾಡಿಸಿಕೊಂಡು ನಾಳೆ ತೆಗೆದು ಒಗೆಯುತ್ತಿದ್ದಾರೆ. ಆ ರೀತಿ ಮಾಡಿದರೆ ಲಾಭವೇನು? 221 ಲಕ್ಷ ರೂಪಾಯಿಗಳನ್ನು ಒಕ್ಕಲುತನಕ್ಕೆ ಉಪಯೋಗ ಮಾಡಿದರೆ ಹೆಚ್ಚು ಅನುಕೂಲವಾಗುತ್ತಿತ್ತು. ರೈತರ ಹಿತಕ್ಕಾಗಿ ಭೂ ಅಭಿವೃದ್ಧಿ ಬ್ಯಾಂಕಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೂ ಸಹಿತ ರೈತನಾದವನು ಸಾಲದ ಹೊರೆಯಿಂದ ಹೊರ ಬರಲಿಲ್ಲ. ಈ ಬ್ಯಾಂಕುಗಳಿಂದ ರೈತರಿಗೆ ಎರಡೂವರೆ, ಮೂರು ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈ ರೀತಿ ಸಿಕ್ಕುವ ಸಾಲದಲ್ಲಿ ರೈತನಾದವನಿಗೆ ಸಿಕ್ಕುವುದು ಕೇವಲ ಒಂದು ಸಾವಿರ ಅಥವಾ 1,500 ರೂಪಾಯಿಗಳು; ಉಳಿದದ್ದು ಲಂಚದ ರೂಪದಲ್ಲಿ ಹೋಗುತ್ತದೆ. ಪ್ರತಿಯೊಂದು ಕಡೆಯೂ ಪೇಪರ್ ಮುಂದೆ ಹೋಗಬೇಕಾದರೆ ಲಂಚ ಕೊಡಬೇಕಾಗುತ್ತದೆ. ಈ ರೀತಿಯ ಪರಿಸ್ಥಿತಿ ಇದೆ. ಹಳ್ಳಿಯಲ್ಲಿರುವ ರೈತರ ಉದ್ಧಾರವಾದ ಹೊರತು ದೇಶದಲ್ಲಿ ಆಹಾರದ ಮಟ್ಟ ಯಾವ ರೀತಿಯಿಂದ ಹೆಚ್ಚಾಗುತ್ತದೆ ಎನ್ನುವಂಥದ್ದು ಗಮನಿಸಬೇಕಾದ ವಿಷಯ. ಈ ವಿಚಾರದಲ್ಲಿಯೂ ಸರ್ಕಾರದವರು ಆಲಸಿಯಾಗಿದ್ದಾರೆ. ಸರ್ಕಾರದವರು ಈ ಬಗ್ಗೆಯೂ ಯಾವುದೇ ಉತ್ತಮವಾದ ಯೋಜನೆಗಳನ್ನೂ ಹಾಕಿಕೊಳ್ಳಲಿಲ್ಲ.

ನಾನ್‌ಗೆಜೆಟೆಡ್ ಅಧಿಕಾರಿಗಳ ಬಗ್ಗೆ ಹೇಳಬೇಕಾದರೆ ದಿನೇ ದಿನೇ ಆಹಾರ ಪದಾರ್ಥಗಳ ಮತ್ತು ಇತರ ಜೀವನಾವಶ್ಯಕ ವಸ್ತುಗಳ ಬೆಲೆಗಳು ಏರುತ್ತಿವೆ. ಇವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಾಂಗ್ರೆಸ್ ಸರ್ಕಾರದಿಂದ ಆಗಿಲ್ಲ. ಅವರಿಗೆ ಕೇಂದ್ರ ಮಟ್ಟದ ತುಟ್ಟಿಭತ್ಯವನ್ನು ಇನ್ನೂ ಇವರೆಗೆ ಕೊಟ್ಟಿಲ್ಲ. ಇದು ಬಹಳ ವಿಷಾದವೆನಿಸುತ್ತದೆ.

ರಾಜ್ಯಪಾಲರು ಹರಿಜನರ ಸಲುವಾಗಿ ಯಾವುದೇ ಉತ್ತಮವಾದ ಧೋರಣೆಯನ್ನು ತಮ್ಮ ಭಾಷಣದಲ್ಲಿ ಹೇಳಿಲ್ಲ. ಯಾವ ರೀತಿ ಮತ್ತು ಹೇಗೆ ಹರಿಜನರ ಉದ್ಧಾರವಾಗುತ್ತದೆ ಅವರ ಏಳಿಗೆ ಯಾಗುತ್ತದೆ ಎನ್ನುವ ಬಗ್ಗೆ ಏನೂ ಹೇಳಿಲ್ಲ. ಇದು ಬಹಳ ವಿಷಾದವೆನಿಸುತ್ತದೆ. ಇವತ್ತಿನ ದಿವಸ ಹರಿಜನರು ಧರ್ಮದ ತಕಡಿಯನ್ನು ತಗೆದುಕೊಂಡು ಹೋಗುತ್ತಿದ್ದಾರೆ. ಹರಿಜನರು ಇದ್ದ ಕಡೆ ರಾಜ್ಯದ ರಾಜ್ಯ ಆಡಳಿತವಿರುತ್ತದೆ. ಹರಿಜನರನ್ನೂ ಮತ್ತು ಹರಿಜನ ಶಾಸನ ಸಭಾ ಸದಸ್ಯರನ್ನು ಉದಾಸೀನ ಮಾಡಿದರೆ ಯಾವ ಪಕ್ಷವೂ ಮುಂದೆ ಬರವುದಿಲ್ಲ. ಕಾಂಗ್ರೆಸ್ ಪಕ್ಷವು ಹರಿಜನರನ್ನು ಉದಾಸೀನ ಮಾಡಿದ್ದರಿಂದ ಇದೇ ರೀತಿಯ ಸಮಸ್ಯೆ ಇದೆ. ಇಂದು ಅಧೋಗತಿಗೆ ಹೋಗುತ್ತಿದೆ, ಆದ್ದರಿಂದ ವಿರೋಧ ಪಕ್ಷಗಳು ಹಾಗೆ ನಡೆದರೆ ವಿರೋಧ ಪಕ್ಷಗಳ ರಾಜಕೀಯ ಭವಿಷ್ಯ ಮಸಣವಾದೀತು! ಎಚ್ಚರಿಕೆ! ಇವರ ಸಲುವಾಗಿ ಹರಿಜನರಿಗೆ ಜಮೀನುಗಳನ್ನು ಕೊಡುವುದು ಮತ್ತು ಅವರಿಗೆ ಸಹಾಯ ಮಾಡಲು ಉತ್ತಮವಾದ ಯೋಜನೆಗಳನ್ನು ಹಾಕಿ ಅವರನ್ನು ಮುಂದೆ ತರಬೇಕೆಂದು ಹೇಳುತ್ತೇನೆ.

ಇನ್ನೂ ಅನೇಕ ವಿಷಯಗಳು ಮಾತನಾಡುವುದಿತ್ತು. ಇವತ್ತಿನ ದಿವಸ ನನಗೆ ಹೆಚ್ಚು ಕಾಲವನ್ನು ಕೊಡದ್ದರಿಂದ ನಾನು ವಿಷಾದಿಸುತ್ತೇನೆ. ಇನ್ನು ಮುಂದಾದರೂ ಚೀಫ್‌ವಿಪ್ ಅವರು ಈ ರೀತಿ ಅನ್ಯಾಯ ಮಾಡಬಾರದೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎ ಚೆನ್ನೇಗೌಡ (ಶಾಂತಿಗ್ರಾಮ).—ಸನ್ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ಒಪ್ಪಿದಾಗ ಬಹಳ ಸ್ಫೂರ್ತಿದಾಯಕವಾಗಿದೆ ಎಂದು ಕೆಲವರು ಹೇಳಿದ್ದಾರೆ. ರಾಜ್ಯ

ಪಾಲರ ಭಾಷಣವನ್ನು ಕೇಳಿದಾಗ ಗ್ರಾಮಫೋನ್ ರಿಕಾರ್ಡಿನಲ್ಲಿ ಕೆಲವರು ಆಟಗಾರರು ಪುನರಾವೃತ್ತಿ ಹಾಡು ಹೇಳುವುದನ್ನು ಕೇಳಿದ ಹಾಗೆ ನನಗನ್ನಿಸಿತ್ತು.

ರಾಜ್ಯಪಾಲರು ಭಾಷಣ ಸಮಸ್ಯೆಯನ್ನು ತೆಗೆದುಕೊಂಡು ಆಡಳಿತ ಸುವ್ಯವಸ್ಥೆ, ಕಾನೂನು ವ್ಯವಸ್ಥೆ ಎಂದು ಹೇಳಿ ಅದನ್ನು ಆ ಮಟ್ಟಕ್ಕೆ ಇಳಿಸಿದ್ದಾರೆ. ಇಡೀ ಭಾರತದಲ್ಲಿ ಭಾಷಾ ಗೊಂದಲವಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ವಿಚಾರದಲ್ಲಿ ದೇಶದಲ್ಲಿ ಅಂದೋಳನವಿರುವಾಗ, ಕಾನೂನು ಪಾಲನೆ ಎಂದು ಹೇಳಿ ರಕ್ತದಾಹಿಯಾದ ಅಧ್ಯಕ್ಷ ಮತ್ತು ತತ್ವರಹಿತ ಮಂತ್ರಿಮಂಡಲವನ್ನು ರಕ್ಷಿಸಿಕೊಳ್ಳಲು ಈ ಮಾತನ್ನು ಹೇಳಿದ್ದಾರೆ. ನ್ಯಾಯವಾಗಿ ಅವರು ಮಂತ್ರಿಮಂಡಲವನ್ನು ವಜಾ ಮಾಡಬೇಕಾಗಿತ್ತು. ರಾಜ್ಯದ ಭಾಷೆಯ ವಿಚಾರವಾಗಿ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ಕೇಂದ್ರದಲ್ಲಿ ತಮ್ಮ ಪ್ರಭಾವವನ್ನು ಬೀರದೆ ಇರತಕ್ಕ ವರ್ತನೆಯನ್ನು ಬೀರದೆ ಇರತಕ್ಕ ಮಂತ್ರಿಮಂಡಲ ಅಧಿಕಾರದಲ್ಲಿರುವುದಕ್ಕೆ ಲಾಯಖ್ ಅಲ್ಲ ಎಂದು ಮಂತ್ರಿಮಂಡಲವನ್ನು ಏತಕ್ಕೆ ವಜಾಮಾಡಬಾರದಾಗಿತ್ತು? ಹಾಗೆ ಮಾಡದೆ ಸರ್ಕಾರವನ್ನು ರಕ್ಷಿಸಿಕೊಂಡಿದ್ದಾರೆ. ನನಗೆ ಕೇವಲ ಐದು ನಿಮಿಷ ಕೊಟ್ಟಿರುವುದರಿಂದ ನಾನಾದರೂ ಕೇವಲ ಎರಡು ಮುಖ್ಯವಾದ ವಿಚಾರಗಳಲ್ಲಿ ಮಾತನಾಡ ಬಯಸುತ್ತೇನೆ.

ಮೊದಲನೆಯದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಸೌಲಭ್ಯವನ್ನು ಒದಗಿಸುವ ವಿಚಾರ. ಈ ಬಗ್ಗೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಒಂದೊಂದು ಬಾವಿಯನ್ನು ತೆಗೆಯುವುದಕ್ಕೆ ಏರ್ಪಾಡು ಮಾಡುತ್ತೇವೆ, ಮುಂದಿನ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಎಲ್ಲ ಊರುಗಳಿಗೂ ಕುಡಿಯುವ ನೀರಿನ ಪ್ರಯೋಜನ ಸಿಕ್ಕುವ ಹಾಗೆ ಆಗುತ್ತದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಮೂರು ಯೋಜನೆಗಳನ್ನು ಕಾರ್ಯಗತ ಮಾಡಿದರೂ ಕೂಡ ಕುಡಿಯುವ ನೀರಿಗೇ ಗತಿ ಇಲ್ಲ. ಮನೆಯ ಅಡಿಗೆ ಪಾತ್ರೆಗಳಲ್ಲಿ ಅಕ್ಕಿ ಇಲ್ಲವೇ ಇರುವುದಲ್ಲದೆ ಬಾವಿಗಳಲ್ಲಿ ನೀರು ಕೂಡ ಇಲ್ಲ. ನನ್ನ ಕ್ಷೇತ್ರದಲ್ಲಿರುವ 187 ಹಳ್ಳಿಗಳ ಪೈಕಿ 150 ಹಳ್ಳಿಗಳಲ್ಲಿರುವ ಬಾವಿಗಳಲ್ಲಿ ಕುಡಿಯುವ ನೀರು ಒಂದು ತೊಟ್ಟೂ ಇಲ್ಲ. ನನ್ನ ಜೊತೆಯಲ್ಲಿ ಯಾರಾದರೂ ಸಂಬಂಧಪಟ್ಟವರು ಬರಲಿ, ಆ ಬಾವಿಗಳನ್ನು ನೋಡಲಿ. 40 ಅಡಿ ಆಳವಿರುವ ಬಾವಿಯಲ್ಲಿ ಕೂಡ ನೀರಿಲ್ಲದಿರುವುದನ್ನು ತೋರಿಸುತ್ತೇನೆ. ತಾಲ್ಲೂಕು ಬೋರ್ಡಿನಲ್ಲಿ ವಿಚಾರಿಸಿದರೆ ಅದಕ್ಕೆಲ್ಲ ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಬಾವಿಗಳನ್ನು ಆಳಪಡಿಸುವುದಕ್ಕೆ ಅವಕಾಶವಿಲ್ಲ ಎಂದು ಹೇಳುತ್ತಾರೆ. ಜನಗಳಿಗೆ ಆಹಾರವನ್ನು ಒದಗಿಸಲಾರದಂಥ ಸರ್ಕಾರಕ್ಕೆ ಪ್ರಾಣಾಧಾರಕ್ಕೆ ಮುಖ್ಯವಾದ ನೀರನ್ನಾದರೂ ಒದಗಿಸುವುದಕ್ಕೂ ಯೋಗ್ಯತೆ ಇಲ್ಲವೇ ಎಂದು ಪ್ರಶ್ನೆ ಮಾಡುತ್ತಿದ್ದೇನೆ.

ಪಂಚವಾರ್ಷಿಕ ಯೋಜನೆಗಳಿಂದ ಬಹಳವಾಗಿ ಸಾಧಿಸಿದ್ದೇವೆಂದು ಕೃತಜ್ಞತಾ ಪ್ರಸ್ತಾಪದ ಸೂಚಕರಾದ ಮಾನ್ಯ ಶ್ರೀನಿವಾಸನ್ ಅವರು ಕೆಲವು ಅಂಕಿಅಂಶಗಳನ್ನು ಕೊಟ್ಟರು. ಸಕ್ಕರೆ ಉತ್ಪಾದನೆ ಶೇಕಡ 226 ರಷ್ಟು ಹೆಚ್ಚಿದೆ, ಪೇಪರ್ ಉತ್ಪಾದನೆ 72 ರಷ್ಟು ಹೆಚ್ಚಿದೆ ಎಂದು ಹೇಳಿದರು. ಆದರೆ ಸಕ್ಕರೆಯ ಬೆಲೆ 1957ರಲ್ಲಿ 75 ಪೈಸೆ ಇದ್ದುದು ನಿನ್ನೆ ತಾನೇ ಪ್ರಕಟವಾದ ದರಗಳ ಪ್ರಕಾರ ಒಂದು ರೂಪಾಯಿ 75 ಪೈಸೆಯಾಗಿರುವುದನ್ನು ಹೇಳಲಿಲ್ಲ. ಈ ಬೆಲೆ ಏರಿಕೆಯಿಂದ ನಮ್ಮ ಆರ್ಥಿಕ ನೀತಿ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ನೋಡಬಹುದು. ಮಾನ್ಯ ಶ್ರೀನಿವಾಸ್ ಅವರು ಕೆಲವು ಅಂಕಿಅಂಶಗಳನ್ನು ಕೊಟ್ಟಾಗ ಮುಖ್ಯವಾದ ಆಹಾರ ಉತ್ಪಾದನೆ ವಸ್ತುಗಳ ಕಡೆಗೆ ಗಮನವೇಕೆ ಹರಿಯಲಿಲ್ಲವೋ ಗೊತ್ತಿಲ್ಲ. ಅದೇ ಅಂಕಿ ಅಂಶಗಳ ಪಟ್ಟಿಯಲ್ಲಿ 1956-57 ರಲ್ಲಿ ಹತ್ತಿ 3,95 ಸಾವಿರ ಬೇಲುಗಳಿದ್ದುದು 1966-67 ರಲ್ಲಿ 1,97 ಸಾವಿರಕ್ಕೆ ಇಳಿದಿದೆ, ಸೇಂಗಾ 6,?5 ಸಾವಿರ ಮೆಟ್ರಿಕ್ ಟನ್ ಇದ್ದುದು 3,64 ಸಾವಿರ ಟನ್‌ಗಳಿಗೆ ಇಳಿದಿದೆ, ಬೇಳೆ 80 ಸಾವಿರ ಟನ್‌ಗಳಿಂದ 67 ಸಾವಿರಕ್ಕೆ ಇಳಿದಿದೆ, ಗೋಧಿ 67 ಸಾವಿರ ಟನ್‌ಗಳಿಂದ 54 ಸಾವಿರಕ್ಕೆ ಇಳಿದಿದೆ, ಬಾಜ್ರ 1,13 ಸಾವಿರ ಟನ್‌ಗಳಿಂದ 85 ಸಾವಿರಕ್ಕೆ ಇಳಿದಿವೆ, ಎಲ್ಲಕ್ಕಿಂತ ಮುಖ್ಯವಾಗಿ 7,60 ಸಾವಿರ ಮೆಟ್ರಿಕ್ ಟನ್‌ಗಳಿಂದ 8,87 ಸಾವಿರ ಟನ್‌ಗಳಿಗೆ ಇಳಿದಿವೆ. ಈ ಅಂಶಗಳನ್ನು ನೋಡಿದರೆ ನಮ್ಮ ಪಂಚವಾರ್ಷಿಕ ಯೋಜನೆಗಳು ಎಷ್ಟರಮಟ್ಟಿಗೆ ವಿಫಲವಾಗಿದೆ ಎಂದು ಹೇಳಬಹುದು. ನಮ್ಮ ಸರ್ಕಾರ ಪ್ರತಿಯೊಂದಕ್ಕೂ ಕಮಿಷನ್‌ಗಳನ್ನು ರಚನೆಮಾಡಿ ಹಣವ್ಯಯಮಾಡುತ್ತಿದೆ ಇದಕ್ಕೆ ಬದಲಾಗಿ ಟ್ಯಾರಿಫ್ ವಿಚಾರಣಾ ಸಮಿತಿ ಮಾದರಿಯ ಎಕ್ಸ್‌ಪೆಂಡಿಚರ್ ಎನ್‌ಕ್ವೈರಿ ಕಮಿಷನನ್ನು ರಚಿಸಿ ಯಾವ ಯಾವ ರೀತಿಯಲ್ಲಿ ಖರ್ಚನ್ನು ಇಳಿಸಬಹುದು, ಯಾವ ರೀತಿಯಲ್ಲಿ ಖರ್ಚನ್ನು ಸದುಪಯೋಗ ಮಾಡಬಹುದು ಎನ್ನುವುದರ ಬಗ್ಗೆ ಗಮನವನ್ನು ಹರಿಸಿದರೆ ಒಳ್ಳೆಯದಾಗುತ್ತದೆ ಎಂದು ನನ್ನ ಸೂಚನೆ.

ಕುಟುಂಬ ಯೋಜನೆ ವಿಚಾರದಲ್ಲಿ ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಸಾಕಾದಷ್ಟು ಜನ ಆ ವಿಚಾರದಲ್ಲಿ ಮಾತನಾಡಿದ್ದಾರೆ. ನಾನು ಹೇಳುವುದು ಒಂದು ಹೊಸ ಸೂಚನೆ. ಸರ್ಕಾರದವರು ಸರ್ಕಾರಿ ನೌಕರರಿಗೆ ಮಾತ್ರ ಮೂರು ಮಕ್ಕಳಿಗಿಂತ ಜಾಸ್ತಿ ಆದರೆ ಅವರಿಗೆ ಇರತಕ್ಕ ಕೆಲವು ಸೌಲಭ್ಯಗಳನ್ನು ಕೊಡುವುದಿಲ್ಲ ಎಂದು ಹೇಳಿದ್ದಾರೆ. ಮಕ್ಕಳನ್ನು ಪಡೆಯುವುದು ಅವರ ಫಂಡಮೆಂಟಲ್

(ಶ್ರೀ ಎನ್. ಎ. ಚನ್ನೇಗೌಡ.)

ರ್ಸೆಂಟ್ಸ್. ಅದಕ್ಕೆ ಸ್ವಲ್ಪ ಧಕ್ಕೆ ಬರಬಹುದು. ಈ ಬಲತ್ಕಾರ ಅಥವಾ ಒತ್ತಾಯ ಅನಿವಾರ್ಯವಾದರೆ ಸರ್ಕಾರಿ ನೌಕರರಮೇಲೆ ಮಾತ್ರ ಕುಟುಂಬ ಯೋಜನೆಯನ್ನು ಒತ್ತಾಯಮಾಡುವ ಈ ಸರ್ಕಾರ ರಾಜ್ಯದಲ್ಲಿರುವ ಭಿಕ್ಷುಕರು, ಕ್ರಿಮಿನಲ್ ಶಿಕ್ಷೆಗೆ ಒಳಗಾದವರು ಮತ್ತು ಇನ್‌ಕೂರೆಬಲ್ ಡಿಸೀಸಸ್‌ನಿಂದ (ವಾಸಿಯಾಗಲಾರದ ಖಾಯಿಲೆಗಳಿಂದ) ನರಳುತ್ತಿರುವವರು-ಇಂಥವರಮೇಲೆ ಒತ್ತಾಯಮಾಡಿ ಅವರನ್ನು ಕುಟುಂಬ ಯೋಜನೆಗೆ ಒಳಪಡಿಸಿದರೆ ಈ ಯೋಜನೆ ಗುರಿಯನ್ನು ಜಾಗ್ರತ ಸಾಧಿಸಬಹುದು ಎಂದು ಸೂಚಿಸಬಯಸುತ್ತೇನೆ. ಕುಟುಂಬ ಯೋಜನೆಯನ್ನು ಜಾರಿಗೆ ತರುವಾಗ ಸರಕಾರದವರು ಕೆಲಸ ಮಾಡಲಾಗದ ವಯಸ್ಸಾದವರು ಮತ್ತು ಕೆಲಸ ಮಾಡಲು ಲಾಯಕ್ಕಾಗಿರುವವರು--ಇವರುಗಳಲ್ಲಿ ಇಂಬ್ಯಾಲೆನ್ಸ್ ಬಾರದೆ ಇರುವ ಹಾಗೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಹೋದ ವರ್ಷ ಬಜೆಟ್ ಮಂಡಿಸುವಾಗ ಕಂದಾಯವನ್ನು ವಜಾಮಾಡುವುದಾಗಿ ಹೇಳಿದ್ದು ಎಲ್ಲರಿಗೂ ಗೊತ್ತಿದೆ. ಆದರೆ ಈಗ ಕಂದಾಯವನ್ನು ರದ್ದುಮಾಡದಿರುವುದೇ ಅಲ್ಲದೆ ಅದಕ್ಕೆ ಹೆಚ್ಚಿನ ದರ ಸರ್‌ಛಾರ್ಜು, ವಾಟರ್ ರೇಟು ಮುಂತಾದ್ದನ್ನೆಲ್ಲಾ ಸೇರಿಸಿರುವುದು ರೈತರಿಗೆ ತುಂಬ ವಿಷಾದಕರವಾದ ಸಂಗತಿ. ಇದರ ಜೊತೆಗೆ ಈಗ ಕಾಲುವೆ ಇರುವ ಜಮೀನುಗಳಿಗೆ ನೀರು ಕೊಡುವುದರಲ್ಲಿ ಕೂಡ ತುಂಬಾ ಅನ್ಯಾಯಮಾಡುತ್ತಿದ್ದಾರೆ. ಕೆ. ಆರ್. ಸಾಗರದ ವಿ. ಸಿ. ನಾಲೆಯಲ್ಲಿ 15 ದಿವಸಗಳಿಗೊಂದು ಸಲ ನೀರನ್ನು ಬಿಡುತ್ತಿದ್ದಾರೆ, ಅಲ್ಲಿ 40 ಸಾವಿರ ಎಕರೆಯಲ್ಲಿ ಕಬ್ಬಿನ ಬೆಳೆಯಿದೆ, ಅದರಲ್ಲಿ 8 ಸಾವಿರ ಎಕರೆಯಲ್ಲಿರುವ ಕಬ್ಬು 6 ತಿಂಗಳಿಗಿಂತ ಕಡಮೆ ವಯಸ್ಸಿನದು. 15 ದಿವಸಗಳಿಗೊಂದು ಸಲ ನೀರು ಬಿಟ್ಟರೆ ಅದು ಸಾಕಾಗುವುದಿಲ್ಲ. ಈ ರೀತಿ ಮಾಡಿದರೆ ರೈತರಿಗೆ ತೊಂದರೆಯಾಗಿ ಬೆಳೆ ನಷ್ಟವಾಗುತ್ತದೆ. ಯಾವ ಎಕ್ಸ್‌ಪರ್ಟ್ ಅಭಿಪ್ರಾಯದ ಮೇಲೆ ನೀರಾವರಿ ಇಲಾಖೆ ಈ ರೀತಿ 15 ದಿವಸಗಳಿಗೊಂದು ಸಲ ನೀರನ್ನು ಕೊಡುವುದನ್ನು ಮತ್ತು 6 ದಿವಸ ಮಾತ್ರ ನೀರು ಕೊಡುವುದನ್ನು ಜಾರಿಗೆ ತಂದಿತೋ ಅರ್ಥವಾಗುವುದಿಲ್ಲ.

ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಸೇವೆಯಲ್ಲಿರುವ ರಾಜ್ಯದ ಪ್ರಜೆಗಳ ಬಗ್ಗೆ ಏನೂ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ, ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಒಂದು ಅಕ್ಷರ ಕೂಡ ಇಲ್ಲ. ಅವರ ಹಿತರಕ್ಷಣೆ ಮಾಡಬೇಕು. ಸೈನ್ಯ, ರೈಲ್ವೆ, ಪಿ. ಅಂಡ್ ಟಿ. ಮುಂತಾದ ಕೇಂದ್ರ ಇಲಾಖೆಗಳಲ್ಲಿ ನಮ್ಮ ರಾಜ್ಯದ ಜನರಿದ್ದಾರೆ, ಅವರ ಹಕ್ಕು ಬಾಧ್ಯತೆಗಳನ್ನು ನಮ್ಮ ಸರ್ಕಾರ ರಕ್ಷಣೆಮಾಡುತ್ತಿಲ್ಲ. ಇದು ವಿಷಾದಕರವಾದ ವಿಚಾರ. ಉದಾಹರಣೆಗೆ ಪಿ. ಅಂಡ್. ಟಿ. ಇಲಾಖೆಯ ಮೈಸೂರು ಡಿವಿಜನ್‌ನಲ್ಲಿ ತೆಗೆದುಕೊಳ್ಳೋಣ. ಈ ಡಿವಿಜನ್‌ನಲ್ಲಿ ರೀಜನಲ್ ಲ್ಯಾಂಗ್ವೇಜ್ ಕನ್ನಡ ಭಾಷೆಯಾದರೂ ದಕ್ಷಿಣದ 4 ಭಾಷೆಗಳ ಪೈಕಿ ಒಂದು ಭಾಷೆ ಗೊತ್ತಿರುವವರಿಗೆ ಈ ಶಾಖೆಯಲ್ಲಿ ಕೆಲಸ ಪಡೆಯಲು ಅವಕಾಶವಿದೆ. ಇದರಿಂದ ತೆಲುಗು, ತಮಿಳು ಮತ್ತು ಮಲೆಯಾಳ ಭಾಷೆ ಮಾತ್ರ ಗೊತ್ತಿದ್ದು ಕನ್ನಡವೇ ಗೊತ್ತಿಲ್ಲದವರೂ ಕೂಡ ಇಲ್ಲಿ ಕೆಲಸದಲ್ಲಿರುವುದಕ್ಕೆ ಅವಕಾಶವಿದೆ. ಆದುದರಿಂದ ಸರ್ಕಾರ ಇದನ್ನು ಗಮನಿಸಿ ಪ್ರಾದೇಶಿಕ ಭಾಷೆಯಾದ ಕನ್ನಡ ಬರುವವರಿಗೇ ಈ ಸರ್ಕಲ್ಲಿನಲ್ಲಿ ಬಹುಮಟ್ಟಿಗೆ ಪ್ರಾಧಾನ್ಯತೆ ಕೊಡಬೇಕೆಂದು ಸೂಚನೆ ಕೊಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರು ಅಧಿವೇಶನದ ಆರಂಭ ಭಾಷಣವನ್ನು ಸಭೆಯ ಮುಂದೆ ಮಾಡಲು ಉದ್ಯುಕ್ತರಾದಾಗ ವಿರೋಧ ಪಕ್ಷದ ನಾವು ರಾಜ್ಯ ಸರಕಾರ ತನ್ನ ಕರ್ತವ್ಯಪಾಲನೆಯಲ್ಲಿ ವಿಫಲವಾಗಿದೆಯೆಂಬ ಕಾರಣಕ್ಕಾಗಿ ಪ್ರತಿಭಟನೆ ಮಾಡಿ ಈ ಸಭೆಯನ್ನು ತ್ಯಾಗ ಮಾಡಿದೆವು. ಶ್ರೀಮಾನ್ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವುದರಿಂದ ರಾಜ್ಯದ ಮುಖ್ಯ ಮಂತ್ರಿ ಪದವಿಯನ್ನು ತ್ಯಜಿಸಬೇಕು, ಇಲ್ಲವೇ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಬೇಕು ಎಂಬ ಅಭಿಪ್ರಾಯವನ್ನು ಎರಡು ದಿವಸಗಳ ಕಾಲ ನಾವು ಈ ಸಭೆಯ ಮುಂದೆ ಒತ್ತಾಯಪೂರ್ವಕವಾಗಿ ಮಂಡಿಸಿದೆವು. ಕೊನೆಯಲ್ಲಿ ಚರ್ಚೆಗೆ ಉತ್ತರ ನೀಡದೆ ಶ್ರೀ ನಿಜಲಿಂಗಪ್ಪನವರು ಸಂಪೂರ್ಣವಾಗಿ ಸಮಂಜಸವಾದ ಉತ್ತರವನ್ನು ನೀಡಲಿಲ್ಲ. ಅವರ ಗಂಡಭೇರುಂಡದಂಥ ಅಸ್ತಿತ್ವ ಬೇಗ ಮುಗಿಯಬೇಕು. ಎರಡು ಸ್ಥಾನಗಳನ್ನು ವಹಿಸಿಕೊಂಡಿದ್ದಾರೆ. ಅವರು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿರಲಿ ಅಥವಾ ರಾಜ್ಯದ ಮುಖ್ಯ ಮಂತ್ರಿಗಳಾಗಿರಲಿ. ಇಲ್ಲವಾದರೆ ಈ ವಿಷಯದ ಬಗ್ಗೆ ನಾವು ದೇಶದಾದ್ಯಂತ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಸ್ವಾಮಿ, ಮಹಾಜನ್ ಆಯೋಗದ ಶಿಫಾರಸನ್ನು ಒಪ್ಪಬೇಕೆಂದು ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ತಾವಾಗಿಯೇ ಷರತ್ತನ್ನು ಹಾಕಿಕೊಂಡಿದ್ದರು. ಆದರೆ ನಾವು ವಿರೋಧಪಕ್ಷದವರು ಈ ನೇಮಕದ ಅಗತ್ಯತೆ ಇಲ್ಲವೆಂದು ಹೇಳಿದೆವು. ಆದರೂ ಕೂಡ ಅದು ನೇಮಕವಾಯಿತು, ತೀರ್ಪಿನಲ್ಲಿ ಕೆಲವೊಂದು ಮಾರ್ಪಾಟುಗಳಾದುವು. ರಾಜ್ಯದ ಹಿತದೃಷ್ಟಿಯಿಂದ ಅದನ್ನೊಪ್ಪುವುದು ಉಚಿತವೆಂದು ನಾವು ಅಭಿಪ್ರಾಯಪಟ್ಟೆವು. ಈಗ ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವುದರಿಂದ ಅವರಿಗೆ ಪ್ರಭಾವವಿದ್ದರೆ ಕೇಂದ್ರದ ವರ್ತುಳದಲ್ಲಿ ಅದನ್ನು ಬೀರಿ ರಾಜ್ಯಕ್ಕೆ ನ್ಯಾಯವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಅವರನ್ನು ಒತ್ತಾಯಪಡಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ 1965ರಲ್ಲಿ ಪಾಕೀಸ್ಥಾನವು ಭಾರತದ ಗಡಿ ಅಕ್ರಮಣ ನಡೆಸಿದಾಗ ಅದರ ಪರಿಣಾಮವಾಗಿ ನಮ್ಮ ಯೋಜನೆಗಳೆಲ್ಲಾ ಹಿಂದುಮುಂದಾದುವು ಎಂದು ಹೇಳಿದ್ದಾರೆ. ನಮಗೂ ಮತ್ತು ಪಾಕೀಸ್ಥಾನಕ್ಕೂ ಗಡಿ ವಿಷಯದಲ್ಲಿ ಕಚ್ ಪ್ರದೇಶವಲ್ಲಿದ್ದ ವಿವಾದದ ಬಗ್ಗೆ ಸರಕಾರದವರು ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದವರು ವಿವಾದದ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಭಾರತದ ಭೂಭಾಗದ ಅಧಿಕಾರವನ್ನು ಬ್ರಿಟಿಷರು ಬಿಟ್ಟುಹೋಗುವಾಗ ಕೊಟ್ಟಿರುವ ಭಾಗವನ್ನು ಬಿಟ್ಟುಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನವನ್ನು ಹಿಂದೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಉಪಾಧ್ಯಕ್ಷರು ಅದು ಈ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಲ್ಲ ಎಂದು ಹೇಳಿದರು. ನಿಜವಾಗಿಯೂ ಅಂತಿಮ ನಿರ್ಣಯ ಕೇಂದ್ರ ಸರಕಾರ ಮತ್ತು ಪಾರ್ಲಿಮೆಂಟಿನದಾಗಿದ್ದರೂ ಕೂಡ ಭಾರತದಲ್ಲಿರುವ ಎಲ್ಲಾ ಸಭೆಗಳೂ ಮತ್ತು ಪ್ರತಿನಿಧಿಗಳು ಯಾರಿದ್ದಾರೋ ಅವರ ಅಭಿಪ್ರಾಯವನ್ನು ಪಡೆದುಕೊಂಡು ಈ ರಾಷ್ಟ್ರದ ವಿಷಯದಲ್ಲಿ ಅಂತಿಮ ತೀರ್ಮಾನಕ್ಕೆ ಬರುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾಶ್ಮೀರ ಮತ್ತು ಕಚ್ ಪ್ರದೇಶ ಈ ದಿವಸ ಪಾಕೀಸ್ಥಾನಕ್ಕೆ ಸೇರಬೇಕೆಂದು ಕೆಲವರು ಹೇಳುತ್ತಿದ್ದರೂ ಆ ಪ್ರದೇಶದ ಜನರೂ ಕೂಡ ಈ ತೀರ್ಪನ್ನು ಪ್ರತಿಭಟಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ.

ಸ್ವಾಮಿ, ಈ ವರದಿಯ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ಮತ್ತು ಶ್ರೀ ಹುಚ್ಚಮಾಸ್ತಿಗೌಡರು ಒಂದು ತಿದ್ದುಪಡಿ ಕಳುಹಿಸಿದ್ದೆವು, ಅದರಲ್ಲಿ ಒಂದು ತಪ್ಪಾಗಿದೆ, ಏನೆಂದರೆ, ಕೃತಜ್ಞತಾ ಪ್ರಸ್ತಾವ ಎಂದು ಕರೆದಿದ್ದೇವೆ. ಹಾಗಿರುವುದು ಸರಿಯಲ್ಲ, ಇದು ಅಭಿನಂದನೆ ಮಾಡುವ ನಿರ್ಣಯ. ಈ ತಪ್ಪಿಗೆ ವಿಷಾದ ಸೂಚಿಸಿ, ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇವೆ. ಚರ್ಚೆ ಇದುವರೆಗೆ ಸಾಕಷ್ಟಾಗಿದೆ. ಚರ್ಚೆಯ ಕೊನೆಯಲ್ಲಿ ನಾವಿದ್ದೇವೆ; ಜೊತೆಗೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವವರಿದ್ದಾರೆ. ಕೊನೆಯಲ್ಲಿ ನನಗೆ ಅವಕಾಶ ಕೊಟ್ಟಿದ್ದಾರೆ, ಇರುವ ಕಾಲ ಕಡಮೆ. ಮುಖ್ಯ ಮಂತ್ರಿಗಳಿಗೆ ಕೊಟ್ಟಿರುವ ಕಾಲದಲ್ಲಿ 5-10 ನಿಮಿಷ ನನಗೆ ಕೊಟ್ಟರೆ ಇನ್ನು ಕೆಲವು ವಿಷಯಗಳನ್ನು ಹೇಳಬೇಕೆಂದಿರುವುದಕ್ಕೆ ಅವಕಾಶವಾಗುತ್ತದೆ.

2-00 P.M.

ಮೊದಲೇ ಈ ಒಂದು ವಿಷಯವನ್ನು ಹೇಳಿದ್ದೇನೆ. ಇದನ್ನು ಹೆಚ್ಚು ವಿವರಿಸುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಗೃಹಮಂತ್ರಿಗಳಾಗಿದ್ದಂಥ ಶ್ರೀಮಾನ್ ಎಂ. ವಿ. ರಾಮರಾಯರವರು ಅಖಿಲಭಾರತ ಕಾಂಗ್ರೆಸ್‌ನ ಕಾರ್ಯದರ್ಶಿಯಾದ ಕಾರಣಕ್ಕಾಗಿ ಈ ರಾಜ್ಯದ ಮಂತ್ರಿಯಾಗಿರುವುದಿಲ್ಲ ಎಂದು ರಾಜಿನಾಮೆ ಕೊಟ್ಟಿದ್ದಾರೆ ಅದು ನಿಜಲಿಂಗಪ್ಪನವರಿಗೂ ಅನ್ವಯಿಸುತ್ತದೆ. ಸ್ವಾಮಿ, ತಾವು ಹಿಂದಿ ವಿರೋಧವಾಗಿ ಆದಂತಹ ಚಳುವಳಿಯನ್ನು ಖಂಡಿಸುತ್ತಾ ಒಂದು ಮಾತನ್ನು ಬಹಿರಂಗವಾಗಿ ವಿಶೇಷವಾಗಿ ಹೇಳಿದ್ದೀರಿ. ಪರಕೀಯರ ಕೈವಾಡ, ಹೊರಗಿನವರ ಕೈವಾಡ, ಗೂಂಡಾಗಳ ಕೈವಾಡ ಎಂದು ಈ ರೀತಿ ಹೇಳಿದ್ದೀರಿ. ಯಾರ ಕೈವಾಡ ಈ ಚಳುವಳಿಯ ಹಿಂದೆ ಇದೆ ಎನ್ನುವುದನ್ನು ರಾಜ್ಯ ಸರ್ಕಾರ ಪರಿಶೀಲನೆ ಮಾಡಿ, ನ್ಯಾಯಾಂಗ ವಿಚಾರಣೆ ಮಾಡಿ ಜನತೆಯ ಮುಂದೆ ಇಡಬೇಕು. ತಮಗೇನಾದರೂ ಗೊತ್ತಿದ್ದರೆ ಇವತ್ತಿನ ಉತ್ತರದಲ್ಲಿ ಹೆಸರುಗಳನ್ನು ಹಿಡಿದು ಸಂಸ್ಥೆಯ ಅಥವಾ ಜನರೇ ಯಾರು ಇದರ ಹಿಂದೆ ಇದ್ದಾರೆ ಎಂದು ಹೇಳಿ ಸ್ಪಷ್ಟಪಡಿಸಿದರೆ ಒಳ್ಳೆಯದು. ಇಲ್ಲದೇ ಇದ್ದರೆ ಏನಾಗುತ್ತದೆ? ಬೇರೆಯವರ ಕೈವಾಡ, ರಾಜಕಾರಣಿಗಳ ಕೈವಾಡ, ಹೊರಗಿನವರ ಕೈವಾಡ ಅಂತ ಹೇಳಿ ಬಿಟ್ಟುಬಿಟ್ಟರೆ ಅಪಾರ್ಥಕ್ಕೆ ಗುರಿಯಾಗುತ್ತದೆ ಎಂದು ಹೇಳುತ್ತೇನೆ.

ಸ್ವಾಮಿ, ಈ ರಾಜ್ಯದಲ್ಲಿ ಸರ್ಕಾರ ಇತ್ತೆ? ಇದೆಯೋ ಅನ್ನುವುದೇ ನಮಗೆ ಸಂದೇಹ ಬರುವುದು, ತಾವು ಇದ್ದೂ ಕೂಡ, Inspite of your sitting there and laughing, ಸ್ವಾಮಿ ಮಧುಗಿರಿ ಪ್ರಕರಣ ಇನ್ನೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿತವಾಗುತ್ತಾ ಇರುವ ಹಾಗೆಯೇ

(ಶ್ರೀ ಎಸ್. ಗೋಪಾಲಗೌಡ)

6—1—1968ರಲ್ಲಿ ಚಿಕ್ಕಮಗಳೂರಿನಲ್ಲಿ ಒಂದು ಗಲಭೆ ನಡೆಯಿತು. ಆ ವಿಷಯವನ್ನು ಈ ಸಭೆಯಲ್ಲಿ ಈಗಾಗಲೇ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ಗಲಭೆಯಾದ ಮೇಲೆ ನಾನು ನನ್ನ ಗೆಳೆಯರು ಬೇರೆ ಪಕ್ಷದವರ ಜೊತೆಯಲ್ಲಿ ಅಲ್ಲಿಗೆ ಹೋಗಿದ್ದೆ. ನಾನು ಒಂದು ವರದಿಯನ್ನೂ ಕೂಡ ಮಾಡಿ ಬಹಿರಂಗವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಇನ್ನೊಂದು ಹೇಳಿಕೆಯನ್ನು ಜನಸಂಘದ ಈ ಮಾನ್ಯ ಸದಸ್ಯರಾದ ಶ್ರೀಮಾನ್ ಶೆಟ್ಟರು ಕೊಟ್ಟಿದ್ದಾರೆ. ಮೇಲ್ಮನೆಯ ಸದಸ್ಯರೂ ಹೇಳಿಕೆಯನ್ನು ಕೊಟ್ಟಿದ್ದಾರೆ. ಸ್ವಾಮಿ, ತಾವೂ ಹೋಗಿದ್ದಿರಿ. ಕಾಂಗ್ರೆಸ್ ಅಧ್ಯಕ್ಷರು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ನೋಡಿದಂತಹ ಈ ಸ್ಮಶಾನದ ವಿವಾದ ಹೊಸದಲ್ಲ. ಸ್ಮಶಾನದ ಪಕ್ಕದಲ್ಲಿ ಪಾಲಿಟೆಕ್ನಿಕ್ ಕಟ್ಟಿದ್ದಾರೆ. ಮುಸಲ್ಮಾನರಿಗೆ ಸೇರಿದಂತಹ ಸ್ಮಶಾನಕ್ಕೆ ಕಲ್ಲುಚಪ್ಪಡಿಗಳನ್ನು ನೆಟ್ಟುಕೊಳ್ಳಬಹುದು ಅಂತ ಅಲ್ಲಿದ್ದಂತಹ ಡೆಪ್ಯೂಟಿ ಕಮೀಷನರು ಅನುಮತಿಯನ್ನು ನೀಡಿದ್ದಾರೆ. ಅದರ ಪ್ರಕಾರ ಮುಸಲ್ಮಾನ್ ಜನಾಂಗದವರು ಕಲ್ಲುಚಪ್ಪಡಿಗಳನ್ನು ನೆಟ್ಟುಕೊಂಡು ಅವರ ಸ್ಮಶಾನದ ಸುತ್ತಲೂ ಆವರಣವನ್ನು ನಿರ್ಮಿಸಿಕೊಂಡರು ಅಲ್ಲಿಯೇ ಪಾಲಿಟೆಕ್ನಿಕ್‌ನ್ನು ಹಾಕಿದ್ದರಿಂದ ಮತ್ತೊಂದು ಕಡೆಯಿಂದ ಹಿಂದೂಗಳ ಸ್ಮಶಾನಕ್ಕೆ ಪ್ರವೇಶಮಾಡಲು ತೊಂದರೆಯಾಗಿದೆ ಎಂಬ ವಿಷಯವೇ ಅವತ್ತು ಆದಂತಹ ಘರ್ಷಣೆ. ಅದು ಆದಮೇಲೆ ಬಾಂಬು ಅಂತ ಹೇಳಿದ್ದನ್ನು, ಅಥವಾ ಒಂದು ವಸ್ತು ಅಸ್ಫೋಟನೆ ಆದದ್ದನ್ನು ನಾವು ಬಾಂಬು ಅಂತ ಏಕೆ ಹೇಳಲಿಲ್ಲ ಅಂದರೆ–ಅದು ಕೆಲವು ಜನರ ಅಭಿಪ್ರಾಯದ ಮಾತು, ಅದಕ್ಕೆ ಪುರಾವೆ ದೊರೆತಿರಲಿಲ್ಲ. ಆ ಕಾರಣಕ್ಕಾಗಿ ಅದು ಬಾಂಬೆ ಅಥವಾ ಬೇರೆ ವಸ್ತುವೇ, ಮನೆಯಲ್ಲಿ ಸ್ಫೋಟವಾಯಿತೇ ಅಥವಾ ಹೊರಗಡೆಯಿಂದ ಹಾಕಿದ್ದಾರೆಯೇ ಅನ್ನುವುದು ನಿರ್ಣಯವಾಗದೇ ಮುಸಲ್ಮಾನರು ನಮ್ಮ ಮೇಲೆ ಬಾಂಬನ್ನು ಹಾಕಿದರು, ಮುಸಲ್ಮಾನರ ಮನೆಯಲ್ಲಿ ಪಾಕಿಸ್ತಾನದ ಬಾಂಬು ಇತ್ತು ಅಂತ ಹೇಳುವುದು ತುಂಬಾ ಅನುಚಿತವಾಗುತ್ತದೆ ಎಂಬ ಕಾರಣಕ್ಕಾಗಿ ನಾವು ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು ಅಂತ ಬಿಟ್ಟಿದ್ದೇವೆ. ಇನ್ನೂ ಅನೇಕ ವಿಷಯಗಳು ಅಲ್ಲಿ ಪರಿಶೀಲನೆಯಾಗಬೇಕಾದ್ದು ಇವೆ. ನಮ್ಮ ರಾಜ್ಯ ಸರ್ಕಾರದ ಮಾನ್ಯ ಮಂತ್ರಿಗಳು ಆ ಭಾಗಕ್ಕೆ ಭೇಟಿಕೊಟ್ಟಿದ್ದರು ಅವರ ಅಭಿಪ್ರಾಯ ಏನಿದೆಯೋ ಗೊತ್ತಿಲ್ಲ. ಇದರ ಬಗ್ಗೆ ತನಿಖೆಯಾಗಬೇಕು. ನ್ಯಾಯಾಂಗ ವಿಚಾರಣೆಗೆ ಈ ವಿಷಯವನ್ನು ಗುರಿಪಡಿಸಿ ಇದನ್ನು ತ್ವರಿತ ಮಾಡುವುದಲ್ಲ, ನಮ್ಮಲ್ಲಿರತಕ್ಕ ಸಾಕ್ಷಿ ಪುರಾವೆಗಳನ್ನು ನ್ಯಾಯಾಲಯದ ಮುಂದೆ ಇಡುತ್ತೇವೆ. ಸ್ವಾಮಿ, ಈ ಚಿಕ್ಕಮಗಳೂರು ಗಲಭೆಯಾದ ಮೇಲೆ 21ನೇ ಜನವರಿಯಲ್ಲಿ ಕಪಾಲಿ ಚಿತ್ರಮಂದಿರದ ಪ್ರಾರಂಭೋತ್ಸವದ ಕಾಲದಲ್ಲಿ ಗಲಭೆಯಾಯಿತು. 22-1-1968ರ ದಿನ ವಿದ್ಯಾರ್ಥಿಗಳ ಮೇಲೆ ಅಶ್ರುವಾಯು, ಕಲ್ಲು ಎಸೆತ, ಗಲಭೆ. ವಿದ್ಯಾರ್ಥಿಗಳಿಗೆ ಏಟು ಮತ್ತು ಮೆಡಿಕಲ್ ಕಾಲೇಜಿಗೆ ಪೋಲೀಸರು ನುಗ್ಗಿದರು. 23-1-1968 ರಲ್ಲಿ ಗೋಲಿಬಾರು — ಬೆಂಗಳೂರಿನಲ್ಲಿ 7 ಸಾವು, ಬಸ್ಸುಗಳಿಗೆ ಬೆಂಕಿ. 29-1-1968 ರಲ್ಲಿ ಬೆಂಗಳೂರು, ಮೈಸೂರಿನಲ್ಲಿ ಗಲಭೆ. 31-1-1968 ರಲ್ಲಿ ಮೈಸೂರಿನಲ್ಲಿ ಗಲಭೆ, 3-2-1968 ರಲ್ಲಿ ಮಂಗಳೂರಿನಲ್ಲಿ ಗೋಲಿಬಾರು. 4-2-1968 ರಲ್ಲಿ ವೈಯಾಲಿ ಕಾವಲ್‌ನಲ್ಲಿ ಗೋಳಿಬಾರು ಎರಡು ಮರಣ, 5 ಜನರಿಗೆ ಗಾಯ. 5-2-1968 ರಲ್ಲಿ ದೊಡ್ಡಬಳ್ಳಾಪುರದಲ್ಲಿ ಗೋಲಿಬಾರು ಒಂದು ಸಾವು, ಐದು ಜನರಿಗೆ ಗಾಯ. ಸ್ವಾಮಿ, ಪಶ್ಚಿಮ ಬಂಗಾಳದಲ್ಲಿ ಅಲ್ಲಿನ ಗವರ್ನರ್ ಆಗಿದ್ದ ಧರ್ಮವೀರ ಅವರು ಅಜಯಮುಖರ್ಜಿ ಸರ್ಕಾರವನ್ನು ಅವರು ಕೊಟ್ಟಂಥ ಕಾರಣಗಳಿಗಾಗಿ ವಜಾಮಾಡಿಬಿಟ್ಟರು, ಹಾಗಾದರೆ ನಮ್ಮ ರಾಜ್ಯಪಾಲರು ಈ ಸರ್ಕಾರವನ್ನು ವಜಾಮಾಡುವುದಕ್ಕೆ ಇನ್ನೂ ಏನಾದರೂ ಕಾರಣಗಳು ಬೇಕೇ? ಎಂದು ನಾನು ಕೇಳುತ್ತೇನೆ. ನಮ್ಮ ಅಭಿಪ್ರಾಯದಲ್ಲಿ ಕಾನೂನು ಪಾಲನೆ, ರಾಜ್ಯದಲ್ಲಿ ಸುವ್ಯವಸ್ಥಿತವಾದಂತಹ ಶಾಂತಿ, ಶಿಸ್ತು ಪಾಲನೆಗೆ ಅವರು ಹೊಣೆಯಾಗಿದ್ದ ಪಕ್ಷದಲ್ಲಿ—ರಾಜ್ಯಾಂಗದತ್ತವಾಗಿ ಅವರು ರಾಜ್ಯದ ಆಡಳಿತ ನಿರ್ವಹಣೆಗೆ ಹೊಣೆಯಾಗಿದ್ದ ಪಕ್ಷದಲ್ಲಿ ಈ ಒಂದು ಕಾರ್ಯವನ್ನು ಅವರು ಮಾಡಬೇಕಾಗಿತ್ತು, ಮಾಡಿಲ್ಲ, ರಾಜ್ಯಪಾಲರು ಈ ಕಾರ್ಯ ನಿರ್ವಹಣೆಯಲ್ಲಿ ತಪ್ಪಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

4 ನೇ ಯೋಜನೆಯನ್ನು 1968-69 ನೇ ಸಾಲಿನಿಂದಲಾದರೂ ಆರಂಭಿಸಲು ಸರ್ಕಾರ ವಿಫಲವಾಗಿರುವುದಕ್ಕೆ ಕಾರಣ ಪಾಕೀಸ್ತಾನ 1965 ರಲ್ಲಿ ದಾಳಿ ಮಾಡಿತು ಎಂದು ಹೇಳಿದ್ದಾರೆ. ದುಂದು ವೆಚ್ಚ, ದುರ್ವ್ಯಯ, ಅಲಕ್ಷ್ಯನೀತಿ ಇವುಗಳನ್ನು ಅವರು ಉಲ್ಲೇಖ ಮಾಡಿಲ್ಲ. ಮಳೆಬೆಳೆಯಾಗಲಿಲ್ಲ, ಅದು ಆಯಿತು, ಇದು ಆಯಿತು ಎಂದು ಈ ರೀತಿ ಹೇಳುವುದು ಇದು ರಾಜ್ಯಪಾಲರು ಕೊಡತಕ್ಕ ಭಾಷಣವಲ್ಲ, ಅವರು ಹೇಳುವಂತಹ ಮಾತೂ ಅಲ್ಲ.

ಇನ್ನೊಂದು ವಿಷಯ. ಲೆವಿಗೆ ವಿರುದ್ಧವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ 2—3 ವರ್ಷದಿಂದ ತೀವ್ರವಾಗಿ ಪ್ರತಿಭಟನೆ ಮಾಡುತ್ತಾ ಇದ್ದೇವೆ. ಗೇಣಿದಾರರು ಲೆವಿ ಕೊಡುವುದನ್ನು ವಿರೋಧಿಸಿದ್ದೇವೆ, ಇದು ಅನ್ಯಾಯದ ಲೆವಿ ಅಂತ ವಿರೋಧ ಮಾಡಿದ್ದೇವೆ. ಕೇರಳ ಹೈಕೋರ್ಟಿನವರು ಈ ಆಜ್ಞೆ ಅನ್ಯಾಯದ್ದು, ಇದು ಯಾವ ನೀತಿ ಇಲ್ಲದೇ ಇರತಕ್ಕದ್ದು ಎಂದು ಹೊಡೆದು ಹಾಕಿರುವಾಗ ಈ ರಾಜ್ಯಸರ್ಕಾರದವರು ಈ ಲೆವಿಯ ಕಡ್ಡಾಯ ವಸೂಲಾತಿಯನ್ನು ಕೂಡಲೇ ರದ್ದುಪಡಿಸಬೇಕೆಂದು ಮತ್ತೊಮ್ಮೆ ನಾನು ಸರ್ಕಾರದವರಿಗೆ ಒತ್ತಾಯ ಪೂರ್ವಕವಾಗಿ ತಿಳಿಸುತ್ತೇನೆ.

ಭೂಸುಧಾರಣೆ ಜಾರಿಗೆ ತರುವುದು ಇಂತಹ ದೊಡ್ಡ ವಿಷಯಗಳು ರಾಜ್ಯಪಾಲರ ಭಾಷಣದಲ್ಲಿ ಬರುವುದೇ ಇಲ್ಲ. ಗೋಸಂಗೋಪನ, ಕುಟುಂಬ ನಿಯಂತ್ರಣ ಈ ವಿಷಯಗಳೇ ಅದರಲ್ಲೆಲ್ಲಾ, ಏನು ಸ್ವಾಮಿ ಇದು? ರಾಜ್ಯಪಾಲರ ಭಾಷಣದಲ್ಲಿ ಏನಾದರೂ ತತ್ವ ಹೇಳಿ, ಹೊಸದೇನಾದರೂ ತತ್ವ ಇದ್ದರೆ ಅದನ್ನು ತಿಳಿಸಿ, ಈ ಭೂಸುಧಾರಣೆ ಏನಾಯಿತು ಯಾವಾಗ ಅದನ್ನು ತರುತ್ತೀರಿ? ಹೇಗೆ ತರುತ್ತೀರಿ? ಯಾವ ತರಹ ಕಾರ್ಯಗತ ಮಾಡುತ್ತೀರಿ? ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ವಾಕ್ಯವನ್ನು ಸೇರಿಸಿದ್ದರೆ ಯಾರ ಗಂಟು ಹೋಗುತ್ತಾ ಇತ್ತು? ಏಕೆ ಮಾಡಲಿಲ್ಲ? ಹೈಕೋರ್ಟು ಒಂದು ತೀರ್ಪು ಕೊಟ್ಟಮೇಲೆ ಅದನ್ನು ಏಕೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ? ಅದನ್ನು ತಪ್ಪಿಸುವುದಕ್ಕೆ ದಯವಿಟ್ಟು ಆಜ್ಞೆಯನ್ನು ಹೊರಡಿಸಬೇಕು ಮತ್ತು ಕೂಡಲೆ ಭೂಸುಧಾರಣೆಯನ್ನು ಜಾರಿಗೆ ತರಬೇಕು.

ಇನ್ನು ನೆನ್ನೆಯ ದಿವಸ ಯಾರೋ ಒಬ್ಬರು ನನ್ನ ಹತ್ತಿರ ಬಂದು 'ಇನ್ನೇನು ನಮ್ಮ ರಾಜ್ಯದಲ್ಲೆಲ್ಲಾ ನಾಳೆಯಿಂದ ಎಲ್ಲ ವ್ಯವಹಾರಗಳೂ ಕನ್ನಡದಲ್ಲೇ ಆಗಬೇಕೆಂದು ತೀರ್ಮಾನವಾಯಿತಂತೆ' ಅಂತ ಹೇಳಿದರು. ನನಗೂ ಇದನ್ನು ಕೇಳಿ ಬಹಳ ಸಂತೋಷವಾಗಿ ಅವರನ್ನು ಕಾಫಿ ಕುಡಿಯ ಹೋಗಿ ಎಂದು ಹೇಳಿದೆ. ಆದರೆ ಬೆಳಗಾದಮೇಲೆ ಪತ್ರಿಕೆಯನ್ನು ನೋಡಿದಾಗ — ಅದು ಕೇವಲ ತಾಲ್ಲೂಕ್ ಮಟ್ಟದಲ್ಲಿ ಮಾತ್ರ ಎಂದಿತ್ತು. ಇದನ್ನು ಪ್ರಪ್ರಥಮವಾಗಿ ಕಾರ್ಯಾರಂಭ ಮಾಡುವ ವಿಚಾರದಲ್ಲಿ ಸರ್ಕಾರಕ್ಕೆ ತಮ್ಮ ಒಂದು ನೀತಿ, ತತ್ವ, ರಾಜ್ಯಾಂಗ ಇತ್ಯಾದಿಗಳಲ್ಲಿ ತಮಗೆ ನಂಬಿಕೆ ಇದ್ದರೆ ಅವರು ಮೊದಲನ್ನು ಸೆಕ್ರೆಟೇರಿಯಟ್‌ನಿಂದ ಹಿಡಿದು ಪಂಚಾಯಿತಿಗಳವರೆಗೂ ನಡೆಸಲ್ಪಡತಕ್ಕ ವ್ಯವಹಾರಗಳಲ್ಲಿ ಒಂದು ಕನ್ನಡದ ಮೂಲ ಪ್ರತಿ ಇರಲೇಬೇಕು. ಹಾಗೆ ಮಾಡದಿದ್ದರೆ ಈ ಸರ್ಕಾರ ದೇಶದ ಜನತೆಗೂ ಮತ್ತು ರಾಜ್ಯಾಂಗಕ್ಕೂ ದ್ರೋಹ ಮಾಡಿದಂತೆ ಆಗುತ್ತದೆ ಎಂದು ಹೇಳಿ, ಇನ್ನು ಕನ್ನಡವನ್ನು ಶಿಕ್ಷಣದ ಎಲ್ಲ ಹಂತಗಳಲ್ಲೂ ಜಾರಿಗೆ ತರುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡಿ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಈ ಕೊನೆಯಲ್ಲಿ ನನಗೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೂ ಮತ್ತು ನಮ್ಮ ಮುಖ್ಯ ಮಂತ್ರಿಗಳಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri S. S. SHETTAR (Hubli)—Sir, I rise on a point of personal explanation. The Hon'ble Member Sri Gopala Gowda made a reference to me with reference to the Chickmagalur incident.

Mr. CHAIRMAN.—I shall give the Hon'ble Member an opportunity to explain after the Chief Minister's reply.

Sri S. S. SHETTAR.—Before the Chief Minister's reply if I am allowed to explain, the Chief Minister will be able to answer properly.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಸುಮಾರು 6—7 ದಿವಸಗಳಿಂದಲೂ ಗೌರ್ನರ್ ಅವರ ಅಡ್ರಸ್ಸಿನ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಕೆಲವು ಉಪಯುಕ್ತ ಸಲಹೆಗಳೂ ಬಂದಿವೆ. ಆ ಸಲಹೆಗಳು ಕೆಲವು ಒಳ್ಳೆಯ ವಿಷಯಗಳನ್ನು ಹೊರಪಡಿಸುತ್ತವೆಂದು ನಾನು ನಂಬಿದ್ದೇನೆ. ಈ ಹಿಂದೆ ಗೌರ್ನರ್ ಅವರು ಅಪ್ಪಣೆ ಕೊಡಿಸಿದ್ದ ಭಾಷಣದ ಹೊತ್ತಿಗೆ 49 ಪುಟಗಳಿದ್ದುದು ಈ ಸಾರ್ತಿ 28 ಪುಟಗಳಿಗಿಳಿದಿದೆ. ಮುಂದಿನ ಸಾರ್ತಿ ಅದಿನ್ನೂ ಚಿಕ್ಕದಾಗಬಹುದು. ಅದರಲ್ಲಿ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳೂ ಇರಬೇಕಾದ್ದಿಲ್ಲ. ಅದರಲ್ಲಿ ಮುಖ್ಯವಾದ ವಿಚಾರಗಳಿದ್ದರೆ ಸಾಕು. ಆ ರೀತಿ ಅದನ್ನು ಮುಂದಿನವರು ಪರಿಗಣಿಸಿ ಮಾಡುತ್ತಾರೆಂದು ನಾನು ಭಾವಿಸುತ್ತೇನೆ.

ಹಾಗೂ ಅನೇಕ ಸದಸ್ಯರು ನಾನು ಎರಡು ಸ್ಥಾನಗಳಲ್ಲೂ ಇರುವುದು ಸರಿಯಲ್ಲ ಎಂಬುದಾಗಿ ಆಕ್ಷೇಪಣೆ ಎತ್ತಿರುವುದಕ್ಕೆ ನಾನಾಗಲೇ ಉತ್ತರ ಕೊಟ್ಟಿದ್ದೇನೆ. ಪುನಃ ಅದನ್ನು ಹೇಳುವುದು ಅನಾವಶ್ಯಕ. ಇನ್ನು ಆ ಬಗ್ಗೆ ಚಳುವಳಿ ಮಾಡುತ್ತೇವೆಂದು ನನ್ನನ್ನು ಹೆದರಿಸಿದ್ದಾರೆ. ಆದರೆ ಹಾಗೆ ನಾನು ಯಾವಾಗಲೂ ಹೆದರತಕ್ಕವನಲ್ಲ. ನ್ಯಾಯವಾಗಿ ಮಿತಿಮೀರದೆ ಅವರು ಏನು

(ಶ್ರೀ ಎಸ್. ನಿಜಲಿಂಗಪ್ಪ)

ಬೇಕಾದರೂ ಮಾಡಲು ಅವರಿಗೆ ಹಕ್ಕಿದೆ, ಅವರಿಗೂ ಕಾನೂನುಗಳ ಪರಿಚಯ ಚೆನ್ನಾಗಿದೆ. ನಾನು ಈ ಜನರಿಂದ ಇಂಥಾ ಟೀಕೆಗಳನ್ನು ಕಳೆದ 6–7 ವರ್ಷಗಳಿಂದ ಕೇಳುತ್ತಲೇ ಇದ್ದೇನೆ. ಬಹುಶಃ ವಿರೋಧಪಕ್ಷದವರು ಸರ್ಕಾರದವರು ಏನೇ ಒಳ್ಳೆಯ ಕೆಲಸಗಳನ್ನು ಮಾಡಿರಲಿ, ಎಷ್ಟೇ ಕೆಲಸ ಗಳನ್ನು ಮಾಡಿರಲಿ, ಆ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡಬಾರದೆಂಬುದಾಗಿ ಅವರು ಮನಸ್ಸು ಮಾಡಿದ್ದಂತೆ ಕಂಡುಬರುತ್ತಿದೆ. ವಿರೋಧಪಕ್ಷದವರು ಸರ್ಕಾರವನ್ನು ಬೈದರೇನೇ ಅವರು ಅವರ ಕರ್ತವ್ಯಮಾಡಿದಂತೆ ಆಗುತ್ತದೆ ಎನ್ನುವ ಮನೋಭಾವನೆ ಅವರಲ್ಲಿದ್ದಹಾಗೆ ಕಾಣುತ್ತಿವೆ. ಆ ರೀತಿ ಹೇಳುವುದರಿಂದ ಅವರಿಗೇ ಒಂದು ಅನಾನುಕೂಲವಾಗುತ್ತದೆ. ಸರ್ಕಾರದವರೇನು ಕೆಲಸ ಗಳನ್ನು ಮಾಡಿಸಿದ್ದಾರೆಂಬುದನ್ನು ಜನರು ನೋಡಿದ್ದಾರೆ, ನೋಡುತ್ತಲೂ ಇದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಸರ್ಕಾರದವರು ಬೇಕಾದಷ್ಟು ಕೆಲಸ ಕಾರ್ಯಗಳನ್ನು ಮಾಡಿಸಿದ್ದಾರೆ. ಇದೇ ವಿಚಾರದಲ್ಲಿ ನಿರ್ಣಯವನ್ನು ಮಂಡಿಸಿದ ಶ್ರೀ ಶ್ರೀನಿವಾಸನ್ ಅವರು ನಮ್ಮ ಸರ್ಕಾರ ಏನೇನು ಕೆಲಸ ಕಾರ್ಯಗಳನ್ನು ಮಾಡಿದೆ ಅನ್ನುವ ವಿಚಾರವನ್ನು ಪ್ರಸ್ತಾಪಮಾಡುತ್ತ—ಅನೇಕ ಸೇತುವೆಗಳು, ರಸ್ತೆಗಳು, ರಸ್ತೆಗೆ ಡಾಂಬರ್ ಹಾಕಿಸಿದ್ದು, ಸ್ಕೂಲು—ಕಾಲೇಜುಗಳು, ಪಾಲಿಟೆಕ್ನಿಕ್ ಶಾಲೆಗಳು, ಮನೆಗಳು ಮತ್ತು ಕೆರೆಕಟ್ಟೆಗಳು ಇತ್ಯಾದಿಗಳನ್ನೆಲ್ಲಾ ಮಾಡಿಸಿದ್ದಾರೆಂದು ಹೇಳಿದ್ದಾರೆ. ಹಾಗೇ ಅನೇಕ ಊರುಗಳೂ ಕೂಡ ಬೆಳೆದಿವೆ ಇತ್ತೀಚೆಗೆ. ಹಾಗೇ ಜನ ಸಂಖ್ಯೆಯೂ ಬೆಳೆದಿದೆ......

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಂತ್ರಿಗಳ ಗೃಹಗಳೆಷ್ಟು ಆ ಮನೆ ಗಳಲ್ಲಿ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಗತಿ ಎಲ್ಲ ಭಾಗದಲ್ಲೂ ಸಾಕಷ್ಟು ನಡೆದಿದೆ. ನಾವು ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಒಂದು ಏನೆಂದರೆ -ಮನುಷ್ಯನ ಒಂದು ಜೀವಮಾನ, ಮನುಷ್ಯನ ಜೀವನಯಾತ್ರೆಯು ಹಿಂದೆ 26 ವರ್ಷಗಳಿದ್ದುದು ಈಗ 52 ವರ್ಷಗಳಿಗೇರಿದೆ. ಸರ್ಕಾರದವರೇನು ಮಾಡಿದ್ದಾರೆಂಬುದಕ್ಕೆ ಇದೊಂದು ಸೊಗಸಾದ ಪ್ರಮಾಣ. ಜನರ ಆರೋಗ್ಯ ದಿನ ದಿನಕ್ಕೂ ವೃದ್ಧಿ ಗೊಳ್ಳುತ್ತಿದೆ. ಅದರಿಂದ ಅವರು ಬಹಳಕಾಲ ಬದುಕುವಂತಾಗಿದೆ. ಜನರು ಹೆಚ್ಚು ಕಾಲ ಬಾಳ ಬೇಕಾದರೆ ಅವರು ಚೆನ್ನಾಗಿ ತಿನ್ನಬೇಕು, ಸುಖವಾಗಿ ಜೀವನ ನಡೆಸಬೇಕು. ಇವಕ್ಕೆಲ್ಲಾ ಸಾಕಾ ದಷ್ಟು ಅನುಕೂಲತೆಗಳಿವೆ ಅನ್ನುವುದರಿಂದಲೇ ಜನರು ಹಿಂದಿಗಿಂತ ಇಂದು ಹೆಚ್ಚು ಕಾಲ ಬಾಳು ತ್ತಿದ್ದಾರೆ. ಸರ್ಕಾರ ಏನು ಕೆಲಸಗಳನ್ನು ನಡೆಸಿದೆ ಅನ್ನುವದಕ್ಕೆ ಇದೊಂದೇ ನಿದರ್ಶನ ಸಾಕು. ಇದನ್ನೂ ಕೂಡ ಇಲ್ಲ ಎಂದು ಅವರು ಹೇಳುವುದಾದರೆ ಅದಕ್ಕೆ ನನ್ನ ಅಡ್ಡಿಯೇನಿಲ್ಲ. ದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಸಲ್ಪಟ್ಟಿವೆ ಅನ್ನುವುದಕ್ಕೆ ಅಳತೆಗೋಲಿದೆ. ಅದನ್ನೆಲ್ಲಾ ಮರೆತು ಅವರು ಆ ಕಡೆ ಕುಳಿತಿದ್ದರಿಂದ ಯಾವ ಕೆಲಸಗಳನ್ನೂ ಸರ್ಕಾರ ಮಾಡಿಲ್ಲ ಎನ್ನುವುದು ಸರಿಯಲ್ಲ. ಮಾಡಿರತಕ್ಕ ಕೆಲಸಗಳನ್ನು ಮರೆಯಬಾರದು.

ಶ್ರೀ ಎಸ್. ಶಿವಪ್ಪ.—ತಾವು ಒಂದು ಥೀಸೀಸನ್ನು ಬರೆಯಿರಿ .....

ಶ್ರೀ ಎಸ್. ನಿಜಲಿಂಗಪ್ಪ.—ನಾನು ತಮ್ಮನ್ನು ಕೇಳಿ ಬರೆಯಬೇಕಾದ್ದಿಲ್ಲ.

(*Interruption*)

I wish the members will kindly bear with me and will develop some sense of humour. I do not understand these interruptions.

SRI S. SIVAPPA (Sravanabelagola).—It is my right.

SRI S. NIJALINGAPPA.—It is not his right. I want the Chair to see that the hon'ble Member is properly controlled.

MR. CHAIRMAN.—The hon'ble Member can reserve his remarks for some other proper time. The Hon'ble Chief Minister listened patiently when others spoke and why does not hon'ble Member listen to him now. I want order to be kept up and decorum to be observed.

AN HON'BLE MEMBER.—It all depends upon the language used by the Hon'ble Chief Minister.

Mr. CHAIRMAN.—I do not see anything unconstitutional about it.

Sri H. N. NANJE GOWDA.—Sir, I rise to a point of Order, under Rule 311. ಈ ಸಭೆಯಲ್ಲಿ ಸಭಾಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದ ಕಾಲದಲ್ಲಿ ಯಾವ ರೀತಿಯಲ್ಲಿ ಪಾಯಿಂಟ್ ಆಫ್ ಆರ್ಡರನ್ನು ಎತ್ತುತ್ತಿದ್ದೆನೋ ಅದೇ ರೀತಿಯಲ್ಲಿ ಈಗಲೂ ಅನುಸರಣೆ ಮಾಡುತ್ತಿದ್ದೇನೆ. ವಿರೋಧಪಕ್ಷದವರ ಅನುಮಾನ ಸುಮ್ಮನೆ ಪರಿಹಾರವಾಗಿದೆಯೆಂದು ಹೇಳಬಾರದು. ಬಾಯಿ ಮುಚ್ಚಿಕೊಂಡು ಕೂತುಕೊಳ್ಳಬೇಕೆಂದು ಹೇಳಿದರೆ ಇದು ಯಾವ ನ್ಯಾಯ ?

Mr. CHAIRMAN.—Rule 311 deals with the Point of Order. But what rule is violated ? May I know under what provision of law it is in order ?

ಶ್ರೀ ಎಚ್. ಎನ್. ನಂಜೇಗೌಡ.—ರೂಲ್ ನಂಬರ್ 311ನ್ನು ಓದಿ. ಆಗ ನಿಮಗೇ ಗೊತ್ತಾಗುತ್ತದೆ.

Mr. CHAIRMAN.—There is no Point of Order.

Sri B. P. GANGADHAR (Tumkur).—There is a precedent that interruptions are allowed.

Mr. CHAIRMAN.—Members may please make a note of the points and ask for clarifications after his reply.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಯಾವಾಗಲೂ ವಿರೋಧಪಕ್ಷದವರ ಕ್ಷೇಮಕ್ಕಾಗಿ ಹೇಳುತ್ತೇನೆ. ನಾವು ಒಳ್ಳೆಯದನ್ನು ಮಾಡಿದ್ದರೆ ಮಾಡಿದೆ ಎಂದು ಹೇಳಿ, ಇನ್ನೂ ಹೆಚ್ಚು ಮಾಡಬೇಕೆಂದು ಹೇಳಿ. ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳಿ. ತಿದ್ದಿಕೊಳ್ಳೋಣ. ಹಾಗೆ ಹೇಳದೆ, ಅಧಿಕಾರದ ಬಲದಿಂದ ಏನೋ ಮಾತನಾಡುತ್ತಾರೆ ಎಂದು ಹೇಳುವುದು ಸರಿಯಲ್ಲ. ನಿಜ ಹೇಳಿದರೆ, ಅದನ್ನೂ ಒಪ್ಪುತ್ತೇನೆ. ಬೇಕಾದರೆ ಸ್ವಲ್ಪ ಉತ್ಪ್ರೇಕ್ಷೆ ಮಾಡುತ್ತೇನೆ. ನನಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಒಬ್ಬ ಗ್ರಂಥಕರ್ತ ಹೇಳಿರುವುದು ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, If you want to have a dishful of untruth, at least give it a garnish of truth. ಒಂದು ತಟ್ಟೆಯಷ್ಟು ಸುಳ್ಳನ್ನು ನುಂಗಬೇಕಾದರೆ, ಅದಕ್ಕೆ ಸತ್ಯದ ಒಗ್ಗರಣೆಯಾದರೂ ಕೊಡಿ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ವಿರೋಧಪಕ್ಷದವರು ಈ ವಿಚಾರವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ನಾನು ಹೇಳುವುದನ್ನು ಒಪ್ಪಲಿ, ಒಪ್ಪದಿರಲಿ, ಕೆಲವರು ಒಪ್ಪಿದರೆ ಸಂತೋಷ. ಒಬ್ಬರು ಒಪ್ಪಿದರೂ ಬಹಳ ಸಂತೋಷ. ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಎಲ್ಲರಿಗೂ ಕಳವಳ ಮಾಡುವಂಥ ಒಂದು ಪ್ರಶ್ನೆ ಅಂದರೆ ನಿರುದ್ಯೋಗ ಸಮಸ್ಯೆ. ಸಾಕಷ್ಟು ಜನರಿಗೆ ಕೆಲಸವಿಲ್ಲದೇ ಇರುವುದು ಅತ್ಯಂತ ಮುಖ್ಯ ಪ್ರಶ್ನೆ. ಅವನ್ನು ಬಗೆಹರಿಸಬೇಕಾದುದು ಅವಶ್ಯಕ. ಅದರಲ್ಲಿಯೂ ವಿದ್ಯಾವಂತರಾಗಿರತಕ್ಕ ಅನೇಕ ಮಕ್ಕಳು ಕೆಲಸವಿಲ್ಲದೆ ಇದ್ದಾರೆ. ಈಗ ತುರ್ತು ಪರಿಸ್ಥಿತಿ ಬಂದಿರುವುದು ಇಂಜನಿಯರುಗಳಿಗೆ. ಬಹಳವಾಗಿ ಇಂಜನಿಯರುಗಳನ್ನು ತಯಾರು ಮಾಡುತ್ತಿದ್ದೇವೆ. 1,500 ಜನರನ್ನು ನಾವು ಈಗ ನೋಡುತ್ತಿದ್ದೇವೆ. ಅದೇ ರೀತಿಯಲ್ಲಿ ಇನ್ನು ಮುಂದೆ ವೈದ್ಯರು ಬಹಳವಾಗಿ ಜಾಸ್ತಿಯಾಗುತ್ತಿದ್ದಾರೆ. ಇನ್ನೂ ಅನೇಕರು ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಇನ್ನೂ ಅನೇಕ ಕಡೆಗಳಲ್ಲಿ ವ್ಯಾಸಂಗಮಾಡುತ್ತಿದ್ದಾರೆ, ಹಾಗೂ ಕೆಲಸಮಾಡುತ್ತಿದ್ದಾರೆ. ಅವರ ಒಂದು ಪ್ರಶ್ನೆ ಬಹಳ ದೊಡ್ಡದು. ನಮ್ಮ ದೇಶದಲ್ಲಿ ಲಕ್ಷಾಂತರ ಜನ ಬಿ.ಎಸ್‌ಸಿ , ಬಿ.ಎ., ಎಂ.ಎ., ಎಂ.ಎಸ್.ಸಿ., ವಗೈರೆ, ವಗೈರೆಗಳಲ್ಲಿ ಪದವೀಧರರಾಗುತ್ತಾ ಇದ್ದಾರೆ. ಅವರಿಗೆಲ್ಲರಿಗೂ ಸಾಕಷ್ಟು ಕೆಲಸ ಸಿಗುವುದು ಬಹಳ ಕಷ್ಟ. ಈ ಪ್ರಶ್ನೆಯನ್ನು ಬಗೆಹರಿಸುವುದು ಇತ್ತೀಚೆಗೆ ಬರುತ್ತಾ ಬರುತ್ತಾ ಸರ್ಕಾರಕ್ಕೆ ಹೆಚ್ಚು ಕಷ್ಟವಾಗುತ್ತಿದೆಂದು ನನಗನ್ನಿಸುತ್ತದೆ. ಇದರಿಂದ ಈಗಿನ ವಿದ್ಯಾಭ್ಯಾಸ ಕ್ರಮವನ್ನು ಸ್ವಲ್ಪಮಟ್ಟಿಗೆ ಬದಲಾಯಿಸುವುದು ಸೂಕ್ತವೆಂದೂ, ಅವಶ್ಯಕವೆಂದೂ ನನಗೆ ಕಾಣುತ್ತದೆ. ಅದನ್ನು ಈಗಾಗಲೇ ತಜ್ಞರು ವಿಚಾರಮಾಡುತ್ತಿದ್ದಾರೆ. ಬಹುಶಃ ಇತ್ತೀಚೆಗೆ ಒಂದೆರಡು ವರದಿಗಳು ಬಂದಿವೆಯೆಂದು ನನಗೆ ತಿಳಿದು ಬಂದಿದೆ. ಅವನ್ನು ನಾವೆಲ್ಲರೂ ವಿಚಾರಮಾಡಬೇಕಾಗಿದೆ. ಯಾರೇ ಆಗಲಿ ಈ ಸಭೆಯಲ್ಲಿಯೇ ಇರಲಿ, ಹೊರಗಡೆ ಇರಲಿ, ಅಥವಾ ಎಲ್ಲಿಯೇ ಇರಲಿ ಬೃಹದಾಕಾರ ಸಮಸ್ಯೆಗಳಲ್ಲಿ ಅತ್ಯಂತ ದೊಡ್ಡ ಪ್ರಶ್ನೆ ಇದು. ಇದನ್ನು ನಾವು ಬಗೆಹರಿಸಲೇ ಬೇಕು. ನಾವು ಈಗ ಕೊಡುವ ವಿದ್ಯಾಭ್ಯಾಸ ಕ್ರಮದಲ್ಲಿ ಸಾಕಷ್ಟು ಬದಲಾವಣೆಗಳು

(ಶ್ರೀ ಎಸ್. ನಿಜಲಿಂಗಪ್ಪ)

ಆಗಬೇಕು. ಇದು ಅವಶ್ಯಕ. ಹಾಗೆಯೇ ಇದೇ ಸಂದರ್ಭದಲ್ಲಿ ವ್ಯವಸಾಯವೂ ಅಷ್ಟೇ ಮುಖ್ಯ. ಅದು ನಮಗೆ ಹೆಚ್ಚು ಕೆಲಸಗಳನ್ನು ಕೊಡುವ ಉದ್ಯೋಗ. ಶೇಕಡ 80 ರಷ್ಟು ಜನರು ಈಗ ವ್ಯವಸಾಯವನ್ನೇ ಅವಲಂಬಿಸುತ್ತಿದ್ದಾರೆ. ಆದರೂ ಅಲ್ಲಿಯೂ ಸಾಕಷ್ಟು ಕೆಲಸಗಳು ಸಿಗುತ್ತಾ ಇಲ್ಲ. ಅನೇಕ ಜನರಿಗೆ, ಕೂಲಿಗಾರರಿಗೆ ಹೆಚ್ಚು ಕೆಲಸ ದೊರಕಬೇಕಾದರೆ ಈ ದೇಶದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳು ಯಥೇಚ್ಛವಾಗಿ ಬೆಳೆಯಬೇಕು. ಅದಕ್ಕೆ ಸರ್ಕಾರದವರು ಏನು ಸಹಾಯ ಕೊಡಬೇಕೋ ಅದನ್ನು ಹೆಚ್ಚಿಗೆ ಕೊಡುತ್ತಿದ್ದಾರೆ. ಆದರೂ ಈ ವಿಷಯವನ್ನು ಸಾಕಷ್ಟು ವಿಚಾರ ಮಾಡಿದ್ದರಲ್ಲಿ ನೀರಾವರಿ ಪ್ರದೇಶಗಳನ್ನು ಜಾಸ್ತಿಮಾಡದ ಹೊರತು ಹೆಚ್ಚು ಜನರಿಗೆ ವ್ಯವಸಾಯದಲ್ಲಿ ಕೆಲಸಕೊಡುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ, ಒಂದು ಕುಟುಂಬದಲ್ಲಿ ಒಬ್ಬ ಮನುಷ್ಯ, ಅವನ ಹೆಂಡತಿ ಸಾಧಾರಣವಾಗಿ 10 ಎಕರೆ ಜಮೀನಿನಲ್ಲಿ ಕೆಲಸಮಾಡುವವರಾಗಿದ್ದರೆ, ಆ 10 ಎಕರೆ ನೀರಾವರಿಯಾದರೆ, ಮೂರು ನಾಲ್ಕು ಕುಟುಂಬಗಳಿಗೆ ಕೆಲಸ ಸಿಗುವ ಪರಿಸ್ಥಿತಿ ಒದಗುತ್ತದೆ. ಅಂದ ಮೇಲೆ ಇದು ಅತ್ಯಂತ ದೊಡ್ಡ ಪ್ರಶ್ನೆ. ಆದ್ದರಿಂದ ನಮ್ಮ ಮುಂದೆ ಇರುವ ಈ ವ್ಯವಸಾಯ ನಾನಾ ರೀತಿಯಲ್ಲಿ ಬೆಳೆಯಬೇಕು. ಶಾಸ್ತ್ರೀಯವಾದ ರೀತಿಯಲ್ಲಿಯೂ ಬೆಳೆಯಬೇಕು. ಹೊಸ ಹೊಸ ಪದ್ಧತಿಯನ್ನು ನಾವು ಅವಲಂಬಿಸಬೇಕು. ಅದು ಅವಶ್ಯಕ. ಅದರ ಜೊತೆಯಲ್ಲಿ ವ್ಯವಸಾಯಕ್ಕೆ ಬೇಕಾದ ಹಣದ ಸಹಾಯ, ಸಾಲದ ಸಹಾಯ, ಗೊಬ್ಬರದ ಸಹಾಯ, ಬೀಜದ ಸಹಾಯ, ಔಷಧಿ ಸಹಾಯ – ಇವೆಲ್ಲವೂ ವ್ಯವಸಾಯಕ್ಕನುಗುಣವಾಗಿ ರೈತರಿಗೆ ಸಕಾಲದಲ್ಲಿ ಸಿಗಬೇಕು. ಆಗ ನೀರಾವರಿ ಪ್ರದೇಶ ಜಾಸ್ತಿಯಾಗಲು ಅವಕಾಶವಾಗುತ್ತದೆ. ಹೆಚ್ಚಿನ ಕೆಲಸಗಳು ಜನರಿಗೆ ದೊರೆಯಲು ಅನುಕೂಲವಾಗುತ್ತದೆ. ನಮ್ಮ ಮೈಸೂರು ದೇಶದಲ್ಲಿ ಶೇಕಡ 7 ರಷ್ಟು ನೀರಾವರಿ ಇದ್ದುದು ಇವತ್ತು 10 ಕ್ಕೆ ಬಂದಿದೆ. ಅಂದಮೇಲೆ 9–10 ಲಕ್ಷ ಎಕರೆ ಜಾಸ್ತಿಯಾಗಿದೆ. ಇನ್ನೂ ಈಗಿನ 4 ರಷ್ಟು ಜಾಸ್ತಿಯಾಗಬೇಕು. ಅದಕ್ಕೆ ಅನುಕೂಲವಿದೆ. ಆದ್ದರಿಂದ ನೀರಾವರಿ ಪ್ರದೇಶವನ್ನು ಜಾಸ್ತಿಮಾಡದ ಹೊರತು ಬಹುಶಃ ಗತ್ಯಂತರವಿಲ್ಲ. ಬೇರೆ ರಾಜ್ಯಗಳೂ ಇವೆ. ಅವರು ಸುಖವಾಗಿದ್ದಾರೆ. ಮದ್ರಾಸಿನಲ್ಲಿ ಶೇಕಡ 42 ರಷ್ಟು ನೀರಾವರಿ ಪ್ರದೇಶವಿದೆ, ಆಂಧ್ರದಲ್ಲಿ ಶೇಕಡ 30 ರಷ್ಟು ನೀರಾವರಿ ಪ್ರದೇಶವಿದೆ. ಅಲ್ಲೆಲ್ಲಾ ಜಾಸ್ತಿಯಾಗುತ್ತಿದೆ. ನಮ್ಮಲ್ಲಿ ಈಗ ಶೇಕಡ 7 ರಿಂದ 10 ಕ್ಕೆ ಬಂದಿದೆ. ಸುಮಾರು ಹತ್ತೂಕಾಲಿಗೆ ಬಂದಿದೆಯೆಂದು ಹೇಳಬಹುದು. ಶೇಕಡ 25 ರವರೆಗೆ ಹೋಗುವುದಕ್ಕೆ ಅವಕಾಶವಿದೆ. ಅದಕ್ಕಿಂತ ಜಾಸ್ತಿ ಹೋಗುವುದಕ್ಕಾಗುವುದಿಲ್ಲ. ಭೂಮಿ ಮೇಲೆಯೇ ನೀರು ಇದೆ. ದೊಡ್ಡ ದೊಡ್ಡ ನದಿಗಳು ಇವೆ. ದೊಡ್ಡದೊಡ್ಡ ಯೋಜನೆಗಳನ್ನು ತಯಾರುಮಾಡುತ್ತಿದ್ದೇವೆ. ಸ್ವಲ್ಪಮಟ್ಟಿಗೆ ಕೆಲಸಗಳೂ ಚೆನ್ನಾಗಿ ನಡೆಯುತ್ತಾ ಇವೆ. ಆದರೆ ಸಮರ್ಪಕವಾಗಿ ಅವೆಲ್ಲವೂ ನಡೆಯುತ್ತಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಈಗ ದೊಡ್ಡ ಪ್ರತಿಬಂಧಕ ಹಣದ ಅಭಾವ. ಪಂಚವಾರ್ಷಿಕ ಯೋಜನೆಗಳು ನಡೆಯುತ್ತಾ ಇವೆ. ಕಾರಣಾಂತರದಿಂದ ಕೆಲವು ಯೋಜನಾ ಕಾಮಗಾರಿಗಳು ನಿಂತಿವೆ. ಆ ವಿಷಯವನ್ನು ಮಾನ್ಯ ಶ್ರೀ ಗೋಪಾಲಗೌಡರಿಗೆ ಹೇಳುವ ಅಗತ್ಯವಿಲ್ಲ, ಅವರಿಗೇ ಗೊತ್ತಿದೆ. ಆದರೆ ಆ ಕೆಲಸಗಳನ್ನು ಮಾಡುವುದು ಅವಶ್ಯಕ. ಬರೀ ಪಂಚವಾರ್ಷಿಕ ಯೋಜನೆಗಳಿಂದಲೇ ಈ ಕೆಲಸಗಳು ಆಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದವರ ಶಕ್ತಿಗೂ ಮಿತಿ ಉಂಟು. ನಮ್ಮ ಶಕ್ತಿಗೂ ಹೆಚ್ಚಿಗೆ ಮಿತಿ ಉಂಟು. ಬೇರೆ ರೀತಿಯಲ್ಲಿ ಹೆಚ್ಚಿಗೆ ಹಣವನ್ನು ತೆಗೆದುಕೊಳ್ಳುವುದು ಅವಶ್ಯಕವಿದೆ. ಈ ವಿಚಾರವನ್ನು ನಾನು ಅನೇಕಬಾರಿ ಅಲ್ಲಿ ಮಾತನಾಡಿದ್ದೇನೆ. ರೈತರಲ್ಲಿಯೂ ಮಾತನಾಡಿದ್ದೇನೆ. ಬಹುಶಃ ಇಲ್ಲಿಯೂ ಅನೇಕ ವೇಳೆ ಹೇಳಿದ್ದೇನೆಂದು ನನಗೆ ಕಾಣುತ್ತದೆ. ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿಯೂ ಮಾತನಾಡಿದ್ದೇನೆ. ಬರೀ ಸಣ್ಣಪುಟ್ಟ ನೀರಾವರಿ ಯೋಜನೆಗಳು ಈಗ ಅವಶ್ಯಕ. ಅಷ್ಟೇ ಅವಶ್ಯಕ ದೊಡ್ಡ ದೊಡ್ಡ ನೀರಾವರಿ ಯೋಜನೆಗಳೂ ಇವೆ. ಅವನ್ನು ಮಾಡದ ಹೊರತು ಗತ್ಯಂತರವಿಲ್ಲ. ಅದರಲ್ಲಿಯೂ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟಹಾಗೆ ದಕ್ಷಿಣ ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿ ಏನೇನು ಸೌಕರ್ಯಗಳುಂಟಾಗಬೇಕೆಂಬುದನ್ನು ನಾವು ಅತ್ಯಂತ ಕಳಕಳಿಯಿಂದ ಯೋಚನೆಮಾಡಬೇಕಾಗಿದೆ. ಆದ್ದರಿಂದಲೇ ಹಣಕ್ಕಾಗಿ ರೈತರಿಂದ ಈಗಲೇ ಮುಂಗಡವಾಗಿ ಸಾಲ ಪಡೆಯುವುದು ಅವಶ್ಯಕ. ಆದರೆ ಅವರ ಹತ್ತಿರ ದುಡ್ಡು ಇಲ್ಲ. ಅವರು ಬ್ಯಾಂಕುಗಳ ಮೂಲಕ ಹಣ ಪಡೆದು ಕೊಡಬೇಕು. ಬ್ಯಾಂಕಿನವರು ಆಧಾರವಿಲ್ಲದೆ ಅದನ್ನು ಕೊಡುವುದಿಲ್ಲ. ಅದಕ್ಕಾಗಿ ಒಂದು ಮಸೂದೆಯನ್ನು ತಯಾರುಮಾಡುವುದಕ್ಕೆ ಸಾಧ್ಯವೇ ಎಂಬುದಾಗಿ ಈಗಾಗಲೇ ಕೆಲವರಲ್ಲಿ ವಿಚಾರಮಾಡಿದ್ದೇನೆ. ಅದು ಸಾಧ್ಯವಾಗುವುದಾದರೆ, ಬಹುಶಃ ಕೆಲಮಟ್ಟಿಗೆ ಅನುಕೂಲವಾಗುತ್ತದೆಂದು ನನಗೆ ಕಾಣುತ್ತದೆ. ಬಹುಶಃ ಮಾನ್ಯ ಸದಸ್ಯರಾದ ಶ್ರೀಮಾನ್ ದೊಡ್ಡಮೇಟಿಯವರು ರೈತರನ್ನು ಬಾವಿಗೆ ಪಂಪನ್ನು ಹಾಕುವುದಕ್ಕೆ ಒಂದು ಸಾವಿರ

ರೂಪಾಯಿಗಳನ್ನು ಕೇಳುತ್ತಾರೆಂದು ಹೇಳಿದರು. ಅದು ನಿಜ. ಒಂದು ಎಚ್. ಪಿ. ಗೆ ಸಾವಿರ ರೂಪಾಯಿಗಳು ಬೇಕಾಗುತ್ತದೆ. ಒಂದೇ ಹಾಕುತ್ತಿದ್ದರೆ ಅದು ಜಾಸ್ತಿ ಎಂದು ಹೇಳುತ್ತಾರೆ. ಅದನ್ನು ನಾನು ಒಪ್ಪುತ್ತೇನೆ.

2-30 P.M.

ಇದೇರೀತಿ ನೀರಾವರಿಗೆ ದುಡ್ಡು ಬೇಕು. ಹೆಚ್ಚಿನ ರೀತಿಯಲ್ಲಿ ದುಡ್ಡು ಬೇಕು. ನಮ್ಮ ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ಬಹುಶಃ ಸಾಕಷ್ಟು ಹಣವನ್ನು ಒದಗಿಸಿದರೆ 10 ಕೋಟಿ, 13 ಕೋಟಿ, 15 ಕೋಟಿ ರೂಪಾಯಿಗಳವರೆಗೂ ಅವರು ಖರ್ಚು ಮಾಡುವುದಕ್ಕೆ ಸಾಧ್ಯವಿದೆ. ಈ ಇಲಾಖೆಯ ಕೆಲಸಗಳನ್ನು ಮಾಡುವುದಕ್ಕೆ ಬೇಕಾಗಿರತಕ್ಕ ತಂತಿ ವಗೈರೆ ಸಾಮಾನುಗಳೇನಿವೆ ಅವು ಹಿಂದೆ ಸರಿಯಾಗಿ ಸಿಕ್ಕುತ್ತಾ ಇರಲಿಲ್ಲ. ಈಗ ಅವು ಇಲ್ಲಿಯೇ ತಯಾರಾಗುತ್ತಿವೆ. ಅದಕ್ಕೆ ಕಷ್ಟವಿಲ್ಲ. ಇದಕ್ಕೆ ಮುಖ್ಯವಾಗಿ ದುಡ್ಡು ಬೇಕಾಗಿದೆ. ಇದನ್ನು ನಾವು ಸಂಪಾದನೆ ಮಾಡಬೇಕು. ಅದಕ್ಕಾಗಿ ನಾವು ರೈತರಿಗೆ ಹೇಳಿದ್ದೇವೆ, ನೀವು ಒಂದು ಹಾರ್ಸ್ ಪವರ್ ವಿದ್ಯುಚ್ಛಕ್ತಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಿ ನಾವು ನಿಮ್ಮಿಂದ ಸಾಲ ತೆಗೆದುಕೊಳ್ಳುತ್ತೇವೆ, ಅದಕ್ಕೆ ಶೇಕಡಾ 6 ರೂಪಾಯಿಗಳಂತೆ ಬಡ್ಡಿಕೊಡುತ್ತೇವೆ, ನಿಮ್ಮ ಕೆಲಸಗಳನ್ನು ಮಾಡಿಕೊಡುತ್ತೇವೆ. ಇನ್ನು 5—6 ವರ್ಷಗಳಲ್ಲಿ ನಿಮ್ಮ ಸಾಲವನ್ನು ತೀರಿಸುತ್ತೇವೆಂದು ಹೇಳುತ್ತಿದ್ದೇವೆ. ಈಗಾಗಲೇ ಸಾಕಷ್ಟು ಜನ ರೈತರು ಆ ರೀತಿ ದುಡ್ಡು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಬೆಳಗಾಮ್ ಜಿಲ್ಲೆಯಿಂದ ಸುಮಾರು 400—500 ಜನ ರೈತರು ಬಂದು ಒಂದು ಹಾರ್ಸ್ ಪವರಿಗೆ ಒಂದು ಸಾವಿರ ರೂಪಾಯಿ ಜಾಸ್ತಿ ಆಯಿತು, 400—500 ರೂಗಳಂತೆ ನಾವು ದುಡ್ಡು ಕೊಡುತ್ತೇವೆಂದು ಬಂದಿದ್ದಾರೆ. ಈಗ ನಮ್ಮಲ್ಲಿ ವಿದ್ಯುಚ್ಛಕ್ತಿ ಇದೆ, ಸಾಮಾನುಗಳು ಇದೆ. ಕೆಲಸಗಾರರು ಇದ್ದಾರೆ, ನಮ್ಮ ಹತ್ತಿರ ದುಡ್ಡು ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಅವರ ಬೊಜ್ಜು ಬೆಳೆಸುತ್ತಿದ್ದೀರಲ್ಲಾ ಅವರಿಂದ ವಸೂಲೂ ಮಾಡಿ, ಬಡ ರೈತರನ್ನು ಏತಕ್ಕೆ ಕೇಳುತ್ತಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಬೊಜ್ಜು ಬೆಳೆದಿರುವವರು ಯಾರೂ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಬೇಕಾದರೆ ಪಟ್ಟಿ ಕೊಡುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ನಮಗೆ ಹೆಚ್ಚು ಹಣಬೇಕು, ಕೊಡಿ ನೋಡುತ್ತೇನೆ. ಒಂದು ವೇಳೆ ಅಂಥವರಿಂದ ಹಣವನ್ನು ವಸೂಲು ಮಾಡಿದರೂ ನಮಗೆ ಸಾಕಷ್ಟು ಹಣ ಸಿಕ್ಕುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ನಾನು ಸಾಕಷ್ಟು ವಿಚಾರ ಮಾಡಿದ್ದೇನೆ. ಒಂದು ಹಾರ್ಸ್ ಪವರ್ ವಿದ್ಯುಚ್ಛಕ್ತಿಗೆ 400 ರೂಪಾಯಿಗಳಂತೆ ಕೊಟ್ಟರೂ ಕೂಡ ಈಗ ಸರ್ಕಾರದವರು ಈ ಇಲಾಖೆಯ ಕೆಲಸಕಾರ್ಯಗಳಿಗಾಗಿ ಖರ್ಚು ಮಾಡಬೇಕೆಂದು ಉದ್ದೇಶಿಸಿರುವುದರ ಜೊತೆಗೆ ಈ ಹಣವನ್ನು ಸೇರಿಸಿಕೊಂಡು 10) ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದರ ಬದಲು ಇನ್ನು ಹೆಚ್ಚು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬಹುದು. ಎರಡುಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬಹುದು. ಆ ರೀತಿ ರೈತರು ಹಣವನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಆದ್ದರಿಂದ ಅವರಿಗೆ ಕೂಡಲೇ ವಿದ್ಯುಚ್ಛಕ್ತಿ ದೊರೆತು, ಪಂಪುಸೆಟ್ಟು ಕೆಲಸಮಾಡುತ್ತದೆ, ಬಾವಿಯಲ್ಲಿ ನೀರು ಸಿಕ್ಕುತ್ತದೆ. ಮತ್ತು ಅವರು ಕೊಟ್ಟಿರುವ ಹಣಕ್ಕೆ ಬಡ್ಡಿ ಸಿಕ್ಕುತ್ತದೆ. ಈ ಹಣವನ್ನು ಎಲ್ಲರೂ ತಂದು ಬ್ಯಾಂಕಿನಲ್ಲಿ ಕಟ್ಟುವುದಕ್ಕೆ ಸಿದ್ಧರಾಗಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಿಂದ ಅನುಕೂಲವಾಗುತ್ತದೆ ವ್ಯವಸಾಯಕ್ಕೆ ಸಂಬಂಧಪಟ್ಟ ಕೈಗಾರಿಕೆಯ ಕೆಲಸಗಳಿಗೆ ಬ್ಯಾಂಕಿನಿಂದ ಮತ್ತು ಕೇಂದ್ರ ಸರ್ಕಾರದಿಂದ ಸಾಧ್ಯವಾದ ಮಟ್ಟಿಗೆ ಶೇಕಡಾ 3-4 ರೂಪಾಯಿಗಳ ಬಡ್ಡಿ ಪ್ರಕಾರ ಕೊಡುವ ಹಾಗೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಯಾವುದೋ ಒಂದುರೀತಿಯಲ್ಲಿ ಈಗ ನಾನು ಹೇಳಿದ ಬಡ್ಡಿದರದಲ್ಲಿ ಸಾಲ ಸಿಕ್ಕುವುದಾದರೆ ಜನಗಳಿಗೆ ಹೆಚ್ಚು ಅನುಕೂಲ ಆದೀತು ಎಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಶ್ರೀಮಂತ ರೈತರು ಕೊಡಬಹುದು ಬಡ ರೈತರು ಹೇಗೆ ಕೊಡುತ್ತಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಯಾರು ಯಾರು ಬಾವಿಯನ್ನು ತೆಗೆದಿರುತ್ತಾರೆಯೋ ಅವರು ಬರುತ್ತಾರೆ, ಬಡವರಾಗಲಿ, ಶ್ರೀಮಂತರಾಗಲಿ ಮೊದಲು ಕೊಡಲಿ. ಯಾರೇ ಆಗಲೀ ಬಾವಿಯನ್ನು ತೆಗೆದು ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡಿ ಉತ್ಪತ್ತಿ ಮಾಡಲಿ.

(ಶ್ರೀ ಎಸ್. ನಿಜಲಿಂಗಪ್ಪ)

ಬಡವರೇ ಎಂದು ಹೇಳಬೇಕಾದ್ದಿಲ್ಲ. ಯಾವುದೋ ಒಂದು ರೀತಿಯಲ್ಲಿ ಅತ್ಯಾವಶ್ಯಕವಾದ ವಸ್ತುಗಳ ಉತ್ಪತ್ತಿಯಾದರೂ ಆಗಲೀ. ನಮ್ಮ ದೇಶದಲ್ಲಿ ಅತ್ಯಂತ ದೊಡ್ಡ ಪ್ರಶ್ನೆ ನೀರಾವರಿಯನ್ನು ಜಾಸ್ತಿ ಮಾಡತಕ್ಕದು. ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತಯಾರು ಮಾಡತಕ್ಕದ್ದು ರೈತರಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸಿ ಅವರು ಹೆಚ್ಚು ಉತ್ಪಾದನೆಯನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡತಕ್ಕದ್ದು ಇವೆಲ್ಲವೂ ಕೂಡ ಆಗಬೇಕಾಗಿದೆ. ಆದ್ದರಿಂದ ಕಡಿಮೆ ಬಡ್ಡಿ ದರದಲ್ಲಿ ಹಣವನ್ನು ತೆಗೆದುಕೊಂಡು ಈ ಕೆಲಸಗಳನ್ನೆಲ್ಲಾ ಮಾಡತಕ್ಕಂಥಾದ್ದು ಅವಶ್ಯಕ ಎಂದು ಕಾಣುತ್ತದೆ.

ಇನ್ನು ಕುಟುಂಬ ಯೋಜನೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಕೆಲವು ಮಾನ್ಯ ಸದಸ್ಯರು ಈ ಕುಟುಂಬ ಯೋಜನೆ ಬೇಕೋ ಬೇಡವೋ ಎನ್ನುವ ಬಗ್ಗೆ ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಈ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದವರು ಬಹಳ ಜನ ಇರಲಾರರು, ಮತ್ತು ಅವರೂ ಕೂಡ ಈ ವಿಚಾರವನ್ನು ಚೆನ್ನಾಗಿ ಯೋಚನೆ ಮಾಡಿಲ್ಲ ಎಂದು ಕಾಣುತ್ತದೆ. ಈ ಕುಟುಂಬ ಯೋಜನೆ ಏನಿದೆ ಇದು ಎಲ್ಲರೂ ಒಪ್ಪತಕ್ಕ ಮಾತು. ಇದನ್ನು ಜಾರಿಗೆ ತರತಕ್ಕ ಕಾಲದಲ್ಲಿ ಅನೇಕ ಕಡೆಗಳಲ್ಲಿ ಜನಗಳು ಒಪ್ಪಿಕೊಂಡಿದ್ದಾರೆ. ಸಂತಾನ ನಿರೋಧ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಕಷ್ಟು ಹೆಣ್ಣುಮಕ್ಕಳೂ ಬರುತ್ತಾರೆ. ಗಂಡಸರೂ ಬರುತ್ತಾರೆ. ಇದು ಬಹಳ ಸಮಾಧಾನ ಪಡತಕ್ಕ ಮತ್ತು ಸಂತೋಷ ಪಡತಕ್ಕ ಮಾತು.

ಒಬ್ಬರು ಮಾನ್ಯಸದಸ್ಯರು.—ಕುಟುಂಬಯೋಜನೆಯನ್ನು ನೀವು ಅನುಸರಿಸಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ನಮಗೆ ಆಗ ಗೊತ್ತಾಗಲಿಲ್ಲ. ಈಗ ಗೊತ್ತಾಗಿ ಪ್ರಯೋಜನ ಏನು ?

(ನಗು)

ಇನ್ನು ಭಾಷೆಯ ವಿಚಾರ. ಈಗ ಹಿಂದಿ ಭಾಷೆಯ ವಿಚಾರದಲ್ಲಿ ವಿಶೇಷವಾದ ಗೊಂದಲವುಂಟಾಗಿದೆ. ಈ ವಿಚಾರದಲ್ಲಿ ನಾನು ಮೊನ್ನೆ ಕೂಡ ಹೇಳಿದ್ದೇನೆ. ಸುಮಾರು 45 ವರ್ಷಗಳ ಕೆಳಗೆ ಒಂದು ರಾಷ್ಟ್ರೀಯ ಭಾಷೆ ಆಗಬೇಕು ಎಂದು ಮಹಾತ್ಮ ಗಾಂಧಿಯವರು ಇದನ್ನು ಸಾಕಷ್ಟು ವಿಚಾರ ಮಾಡಿ ಹಿಂದಿ ರಾಷ್ಟ್ರಭಾಷೆಯಾಗಿರಬೇಕೆಂದು ನಿರ್ಧಾರ ಮಾಡಿ ಅದರಂತೆ ಹಿಂದಿಯನ್ನು ಒಪ್ಪಿಕೊಂಡು ಅದರಂತೆ ನಾವು ಕೆಲಸಮಾಡಿಕೊಂಡು ಬಂದಿದ್ದೇವೆ. ಇತ್ತೀಚೆಗೆ ಈ ವಿಚಾರದಲ್ಲಿ ಕಾನ್‌ಸ್ಟಿಟ್ಯೂಷನ್‌ನಲ್ಲಿ ಕೂಡ ಹಿಂದಿ ರಾಷ್ಟ್ರಭಾಷೆ ಆಗಬೇಕೆಂದು ಒಪ್ಪಿಕೊಂಡು ಬಂದು ಆಗಿದೆ. ಯಾರದು ಏನೂ ಈ ವಿಚಾರದಲ್ಲಿ ತಕರಾರು ಇಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ಮೈಸೂರು, ಕೇರಳ, ಮತ್ತು ಆಂಧ್ರ ಈ ಮೂರು ರಾಜ್ಯಗಳಲ್ಲಿಯೂ ಸಹ ಹೈಸ್ಕೂಲುಗಳಲ್ಲಿ ಹಿಂದಿ ಕಂಪಲ್ಸರಿ ಲಾಂಗ್ವೇಜ್ ಆಗಿದೆ. ಕಾಲೇಜಿನಲ್ಲಿ ಕಂಪಲ್ಸರಿ ಇಲ್ಲ. ದೇಶದಲ್ಲಿ ಒಗ್ಗಟ್ಟು ಮತ್ತು ಐಕ್ಯತೆ ಬರಲಿ ಎನ್ನುವ ದೃಷ್ಟಿಯಿಂದ 45–50 ವರ್ಷಗಳ ಹಿಂದೆಯೇ ಹಿಂದಿ ರಾಷ್ಟ್ರಭಾಷೆಯಾಗಿರಬೇಕೆಂದು ಮಾಡಿದ್ದಾರೆ ; ಮತ್ತು ಮೂರು ಭಾಷೆ ನಮಗೆ ಬೇಕು ಎಂದು ಎಲ್ಲರೂ ಒಪ್ಪಿ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡು ಅದು ಈಗ ಜಾರಿಯಲ್ಲಿದೆ. ಈಗ 10–12 ವರ್ಷಗಳಿಂದ ಹಿಂದಿ ಪಠ್ಯ ಭಾಷೆಯಾಗಿ ಕಂಪಲ್ಸರಿಯಾಗಿ ನಡೆಯುತ್ತಿದೆ. ಇದರ ವಿಷಯದಲ್ಲಿ ಇಲ್ಲಿಯವರೆಗೂ ಏನೂ ಇರಲಿಲ್ಲ. ಅನಂತರ ಶ್ರೀ ನೆಹರೂ ಅವರೂ ಕೂಡ ಭಾಷೆಯ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಆಮೇಲೆ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳೂ ಸಹ ಒಂದು ಮಾತು ಹೇಳಿದ್ದಾರೆ. ಅದು ಈ ರೀತಿ ಇದೆ. " The assurances in the words of Pandit Nehru, later re-inforced by Sri Shastri " English would continue to be an ' associate language ;' and ' alternate language' as long as people required it and the decision for that, I would leave not to the Hindi knowing people but to the non-Hindi knowing people."

The assurance of the late Prime Minister Jawaharlal Nehru was as follows :

> " Hindi has been suggested in our Constitution as the link language for Central and Official purposes because it is the only feasible language."

But the change-over cannot be sudden. We cannot fix a date and say that from that date English ceases and Hindi comes in. It has to to be a gradual process. In this gradual transformation, dates have very little significance except to examine the position from time to time to see whether we are going along the right lines."

The assurance of Sri Shastri is as follows :

" Firstly, every State will have complete and unfettered freedom to continue to transact its own business in the language of its own choice, which may be the regional language or English." ಎಂದು ಹೇಳಿದ್ದಾರೆ.

ಆದ್ದರಿಂದ ತ್ರಿಭಾಷೆಯ ರೀತಿ ಬಹಳ ನಿಧಾನವಾಗಿ ಹೋಗತಕ್ಕಂಥದ್ದು ಎಂದು ಹೇಳಿದ್ದಾರೆ. ಯಾವುದು ಒಂದು ಹಿಂದಿಯೇತರ ರಾಜ್ಯ ಇದ್ದರೂ ಕೂಡ ಎಲ್ಲರೂ ಒಪ್ಪಬೇಕು ಎಂದು ಹೇಳಿದ್ದಾರೆ. ಈಗ ಹೋದ ಎರಡು ತಿಂಗಳಿನಿಂದ ಗಲಾಟೆಗಳು ಪ್ರಾರಂಭವಾಗಿವೆ. ಇದು ಬರೇ ಮೈಸೂರಿನಲ್ಲಿ ಮಾತ್ರವಲ್ಲ ಬಾಕಿ ಕಡೆಗಳಲ್ಲೂ ಕೂಡ ಆಗಿದೆ. ಉತ್ತರ ಹಿಂದೂಸ್ಥಾನದಲ್ಲಿ ಇಂಗ್ಲಿಷ ಬೇಡವೆಂದು ಹೇಳುತ್ತಿದ್ದಾರೆ. ನಮಗೆ ಇವತ್ತು ರಾಜ್ಯವನ್ನು ಒಟ್ಟು ಮಾಡತಕ್ಕ ಯಾವುದಾದರೂ ಒಂದು ಭಾಷೆ ಬೇಕು. ಆದ್ದರಿಂದ ಇಂಗ್ಲಿಷ್ ಇರುತ್ತದೆ. ಹಿಂದಿಯೂ ಬೇಕು. ಅದು ನಮ್ಮ ದೇಶದ ಭಾಷೆ, ಬಹುಜನ ಮಾತನಾಡತಕ್ಕ ಭಾಷೆ. ಆದರೆ ಇವತ್ತು ಮನದಲ್ಲಿ ಕೆರಳಿರಿತಕ್ಕ ವಿಷಯವೆಂದರೆ, ಅದು ಒಂದು ರೆಸಲ್ಯೂಷನ್. ಒಂದು ಬಿಲ್ ತಂದರು. ಅದು ಆಕ್ಟ್ ಆಗಿದೆ. ಅದರಲ್ಲಿ ತಕರಾರು ಇಲ್ಲ. ಅದರೆ ಈ ನಿರ್ಣಯ ಬಂದು ಅದರಲ್ಲಿ ಹಿಂದಿಗೆ ಮಹತ್ವ ಬರುತ್ತದೆ. ಹಿಂದಿ ಅಥವಾ ಇಂಗ್ಲೀಷ ತೆಗೆದು ಹಿಂದಿ ಮತ್ತು ಇಂಗ್ಲೀಷ್ ಎಂದು ಮಾಡಿದ್ದಾರೆ. ಉತ್ತರದಲ್ಲಿ ಹಿಂದಿ ಮಾತ್ರ ಕಲಿತರೆ ಸಾಕು. ಬಾಕಿ ಇದ್ದವರು ಹಿಂದಿ ಕಲಿಯ ಬೇಕು, ಇಂಗ್ಲೀಷ್ ಕಲಿಯಬೇಕು ಹಾಗೂ ಇನ್ನಿತರ ಭಾಷೆ ಕಲಿಯಬೇಕು. ಇದು ಮದ್ರಾಸಿನಲ್ಲಿ ಪ್ರಾರಂಭವಾಯ್ತು. ಈಗಬಾಕಿ ಕಡೆ ಕೂಡ ಹರಡಿದೆ. ಇಲ್ಲಿನಡೆದ ಗಲಭೆಗೆ ಯಾರ್‍ಯಾರು ಕಾರಣ ಎಂಬುದೆಲ್ಲಾ ನನ್ನ ಹತ್ತಿರ ಇದೆ. ಯಾರು ಏನು ಮಾಡಿದರು ಎಂದು ಇದೆ. ಅದೇ ಜನ ಆಂಧ್ರದಲ್ಲಿ ಹೋಗಿ ಗಲಾಟೆ ಮಾಡಿದ್ದಾರೆ. ಅಲ್ಲಿಂದ ಇಲ್ಲಿ ಬಂದಿದ್ದಾರೆ, ಮತ್ತೆ ಮದ್ರಾಸಿನಿಂದ ಬೇರೆ ಕಡೆ ಹೋಗಿದ್ದಾರೆ. ನಮ್ಮ ಹತ್ತಿರ ಕೆಲವು ಪುರಾವೆಗಳು ಇವೆ. ಎಷ್ಟು ಅವಶ್ಯವಿದೆಯೋ, ಅಷ್ಟನ್ನು ತಿಳಿಸೋಣ ಇಲ್ಲಿ. ನಾನು ಈ ಮಾತು ಹೇಳುವಾಗ ಸಾಕಷ್ಟು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ದುಡ್ಡು ತೆಗೆದುಕೊಂಡು ಬಂದರು, ಕೆಲವರು ಪ್ರಿಂಟ್ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ತಮ್ಮ ಅಭಿಪ್ರಾಯದ ಪ್ರಕಾರ ಹೊರಗಡೆಯಿಂದ ಬರದಿದ್ದರೆ, ಇಲ್ಲಿಯ ಜನರು ಪ್ರೀತಿಯಿಂದ ಅದನ್ನು ಒಪ್ಪಿಕೊಂಡಿದ್ದಾರೆ ಎಂದು ತಾವು ತಿಳಿದುಕೊಂಡಿದ್ದೀರಾ ? ತಾವು ಹೇಳುವುದು ವಾಸ್ತವಾಂಶದ ಮಾತಲ್ಲ, ಏನು ಸ್ವಾಮಿ ಹೀಗೆ ಹೇಳಿದರೆ ?

ಶ್ರೀ ಎಸ್. ನಿಜಲಿಂಗಪ್ಪ.—12 ವರ್ಷಗಳಿಂದ ಯಾವುದೂ ಬರಲಿಲ್ಲ. ಇವತ್ತಿನ ದಿವಸ ಏಕೆ ವ್ಯಾಜ್ಯ ಬಂತು ಎಂದರೆ, ಕೇಂದ್ರ ಸರ್ವಿಸಸ್ ಏನು ಇದೆ, ಅಡ್ಮಿನಿಸ್ಟ್ರೇಟಿವ್ ಮತ್ತು ಇತರ ಸೆಂಟ್ರಲ್ ಸರ್ವಿಸಸ್ ಅಲ್ಲಿ ಎಲ್ಲಾ ಇವೆರಡೂ ಕಲಿಯ ಬೇಕೆಂದು ಇದೆ. ನಾವು ಹಿಂದಿ ಕಲಿಯಬೇಕು, ಇಂಗ್ಲೀಷ್ ಕಲಿಯಬೇಕು, ಮತ್ತು ನಮ್ಮ ಭಾಷೆ ಕಲಿಯಬೇಕಾಗಿದೆ, ಆದರೆ ಅವರು ಒಂದೇ ಭಾಷೆ ಕಲಿಯಬೇಕಾಗುತ್ತದೆ. ಇದು ಅನ್ಯಾಯ. ಭಾರ ನಮ್ಮ ಮೇಲೆ ಹೆಚ್ಚಾಗಿ ಬೀಳುತ್ತದೆ. ಅದು ಗಲಾಟೆಗೆ ಅವಕಾಶ ಮಾಡಿಕೊಡುತ್ತದೆ. ಇದನ್ನು ನೀವೆಲ್ಲಾ ಯೋಚನೆ ಮಾಡುವ ಮೊದಲೇ ನಾವು ಯೋಚನೆ ಮಾಡಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ.—ತಮಗೆ ಮುಂಚೆಯೇ ಗೊತ್ತಿದ್ದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳದಿರುವುದು ಸರ್ಕಾರದ ತಪ್ಪಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದೇನು ಚಿಟಕಿಯಲ್ಲಿ ಮಾಡುವ ಕೆಲಸವಲ್ಲ. ಮದ್ರಾಸಿನವರೇ ಆಗಬಹುದು, ಆಂಧ್ರದವರೇ ಆಗಬಹುದು. ಈ ವಿಚಾರದಲ್ಲಿ ಕೇರಳದವರಲ್ಲಿ ಏನೂ ಗಲಾಟೆಯಾಗಲಿಲ್ಲ. ಅವರು ಬುದ್ಧಿವಂತರು. ಅವರಿಗೆ ಕೆಲಸ ಬೇಕಾಗಿದೆ ಅವರು ಕೆಲಸಗಳಿಗೆ ಹೋಗುತ್ತಿದ್ದಾರೆ, ನಾನು ಅಲ್ಲಿಗೆ ಹೋಗಿದ್ದಾಗ್ಯೆ ಅವರು ಒಂದು ಮಾತೂ ಹೇಳಲಿಲ್ಲ

(ಶ್ರೀ ಎಸ್. ನಿಜಲಿಂಗಪ್ಪ)

ಆದ್ದರಿಂದ ಈ ವಿಚಾರದಲ್ಲಿ ವರ್ಕಿಂಗ ಕಮಿಟಿ ಎರಡು ಸಾರಿ ವಿಚಾರ ಮಾಡಿದೆ. ವಿದ್ಯಾರ್ಥಿಗಳಲ್ಲಿ ತಪ್ಪು ಭಾವನೆ ಬಂದು ಗಲಾಟೆಯಾಯಿತು. ವಿದ್ಯಾರ್ಥಿಗಳಲ್ಲಿ ನಾನಾ ರೀತಿಯ ಭಾವನೆ ಬಂದಿದೆ. ಇದಕ್ಕೆ ಕೆಲವರು ಕಾರಣರೂ ಇದ್ದಾರೆ. ಪಾಪ, ವಿದ್ಯಾರ್ಥಿಗಳಿಗೆ ಏನೂ ತಿಳಿಯುವುದಿಲ್ಲ. ಚಿಕ್ಕ ಮಕ್ಕಳಿಗೆ, ಕಲ್ಲು ತೆಗೆದುಕೊಂಡು ಹೊಡೆಯಿರೋ, ಎಂದು ಹೇಳಿದರೆ, ಅವು ಹೊಡೆಯುತ್ತವೆ. ಅಂಥವರನ್ನು ಉಪಯೋಗ ಮಾಡಿಕೊಳ್ಳತಕ್ಕ ಬುದ್ಧಿವಂತರೂ ಇದ್ದಾರೆ. ಅದು ದುರದೃಷ್ಟಕರ. ಇದು ಅನೇಕ ಕಡೆ ನಡೆದಿದೆ. ಬರೇ ವಿದ್ಯಾರ್ಥಿಗಳು ಗಲಾಟೆ ಮಾಡಿದ್ದರೆ ಅದನ್ನು ಸರಿಮಾಡಿಕೊಳ್ಳಬಹುದಿತ್ತು. ಇಂಥ ಸಂದರ್ಭವನ್ನು ನೋಡಿ ಕೆಲವು ಗೂಂಡಾ ಪ್ರವೃತ್ತಿಯ ಜನರು ಕೂಡ ಇದರಲ್ಲಿ ಸೇರಿಕೊಂಡಿದ್ದಾರೆ. ಅದು ಇಲ್ಲಿ ಇತ್ತು, ಎಲ್ಲಾ ಕಡೆ ಇತ್ತು. ಆದರೆ 23ನೇ ತಾರೀಕಿನ ದಿವಸ ರಸ್ತೆಗಳನ್ನು ಬಂದು ಮಾಡಿದರು, ಮಕ್ಕಳ ಕೈಯಲ್ಲಿ ಕಾಟನ್ ವೇಸ್ಟಿಗೆ ಪೆಟ್ರೋಲ್ ಅದ್ದಿ ಬೆಂಕಿ ಹಚ್ಚಿಸುವುದಕ್ಕೆ ಪ್ರಾರಂಭ ಮಾಡಿದರು. ಕೆಲವು ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ನಷ್ಟಮಾಡಿದರು, ಕೆಲವು ಬಸ್ಸುಗಳಿಗೆ ಬೆಂಕಿ ಇಟ್ಟರು, ಕಾರುಗಳಿಗೆ ಹೊಡೆದರು, ಪೆಟ್ರೋಲ್ ಬಂಕ್ ಸುಟ್ಟು ಹಾಕಿದರು. ಇಷ್ಟೆಲ್ಲಾ ಮಾಡಿದರೂ, ಪೋಲೀಸಿನವರು ಇದನ್ನೆಲ್ಲಾ ಸಹನೆಯಿಂದ ನೋಡುತ್ತಿದ್ದರೂ, ಹತೋಟಿ ಮೀರಿದಾಗ ಟಿಯರ್ ಗ್ಯಾಸ್ ಬಿಟ್ಟರು, ಲಾಟಿ ಚಾರ್ಜ್ ಮಾಡಿದರು. ನೂರಾರು ಜನ ಕಲ್ಲಿನ ಏಟು ತಿಂದರು ಹಲವರಿಗೆ ಗಾಯಗಳಾಯಿತು. ಆದರೆ ಲಾಠಿ ಛಾರ್ಜ್ ಮಾಡದಿದ್ದರೆ, ಅಲ್ಲಿ ವಿಪರೀತವಾಗಿ ದರೋಡೆಗಳಾಗಿ, ಅಂಗಡಿಗಳನ್ನೆಲ್ಲಾ ಲೂಟಿ ಮಾಡತಕ್ಕ ಸಂದರ್ಭವಿತ್ತು. ಪರಿಸ್ಥಿತಿ ಈರೀತಿ ಇರುವಾಗ ಅದನ್ನೆಲ್ಲಾ ಕೈಕಟ್ಟಿಕೊಂಡು ನೋಡುತ್ತಾ ನಿಲ್ಲುವುದು ಸರಿಯಲ್ಲ. ಅದನ್ನು ನಿಲ್ಲಿಸತಕ್ಕ ಕ್ರಮವನ್ನು ಸರ್ಕಾರ ಕೈಗೊಳ್ಳುವುದು ಅದರ ಕರ್ತವ್ಯ. ಇದು ಒಂದು ತೃಪ್ತಿಪಡಬೇಕಾದ ಮಾತು. ಪೋಲೀಸರು ಸಾಕಷ್ಟು ಸಂಯಮದಿಂದ ವರ್ತಿಸಿದ್ದಾರೆ. ಗೂಂಡಾಗಳನ್ನು ಸರಿಯಾಗಿ ಹಿಡಿದು ತಡೆಗಟ್ಟಿದ್ದಾರೆ. ಇದು ಮಾಡದಿದ್ದರೆ ಎಷ್ಟೋ ಲೂಟಿಯಾಗುತ್ತಿತ್ತು, ಎಷ್ಟೋ ಆಸ್ತಿ ಪಾಸ್ತಿಗಳಿಗೆ ನಷ್ಟವಾಗುತ್ತಿತ್ತು.

ಒಬ್ಬ ಮಾನ್ಯ ಸದಸ್ಯರು.—ಕಾಲೇಜು ಪ್ರಿನ್ಸಿಪಾಲರನ್ನು ಏಕೆ ಹೊಡೆದರು ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಪ್ರಿನ್ಸಿಪಾಲರನ್ನು ಹೊಡೆದಿಲ್ಲ. ಅವರನ್ನು ನಾನು ಕೇಳಿದ್ದೇನೆ. ಅಂಥದ್ದು ಏನೂ ಆಗಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ.—ಪ್ರಿನ್ಸಿಪಾಲರು ಏಟು ತಿಂದರೂ ಕೂಡ ತಿನ್ನಲಿಲ್ಲವೆಂದು ಹೇಳುವ ಸ್ಥಿತಿಗೆ ಇದು ಬಂತು.

ಶ್ರೀ ಎಸ್ ನಿಜಲಿಂಗಪ್ಪ.—ಪೋಲೀಸರು ಹುಡುಗರ ಹಿಂದೆ ಹೋದರು., ಅವರಿಗೆ ಹೊಡೆಯತಕ್ಕ ಕಾಲದಲ್ಲಿ ಇವರಿಗೆ ಏನೋ ಸ್ವಲ್ಪ ತಗಲಿತು. ಇವರಿಗೆ ಪೂರ್ತಿ ಬಿದ್ದಿಲ್ಲ ವೆಂದು ಅವರೇ ಹೇಳುತ್ತಿದ್ದಾರೆ. ಅದನ್ನ ನಾನು ಆ ರಾತ್ರಿಯಲ್ಲೇ ಕೇಳಿದ್ದೇನೆ. "ಏನೋ ನಿಮ್ಮನ್ನು ಹೊಡೆದರಂತೆ—ಎಂದು" ಅದಕ್ಕೆ ಅವರು, "ಇಲ್ಲ, ಈ ರೀತಿಯಾಯಿತು" ಎಂದು ತಿಳಿಸಿದರು.

ಶ್ರೀ ಬಿ. ಪಿ. ಗಂಗಾಧರ್.—ವೈಸ್ ಚಾನ್ಸಲರ್ ಹೇಳಿದ್ದಾರೆ, ಇಲ್ಲಿ ಪೋಲೀಸ್ ರಾಜ್ಯವಾಗಿದೆ ಎಂದು.

The Vice-Chancellor has said it on more than one occasion that you are just defending the action already taken. Neither you nor Mr. Rama Rao were here at that time. You were in Hyderabad.

Sri S. NIJALINGAPPA.—Wherever I may be, My Government continues. My officers are there to look after and run the Government. ಆದುದರಿಂದ ಈ ವಿಷಯದಲ್ಲಿ ಎಲ್ಲೆಲ್ಲೋ ಏನೇನೋ ಆಯಿತು ಎಂದು ಅವರ ಮಾತು ಕೇಳಿಕೊಂಡು ಇಲ್ಲಿ ಏನೋ ಹೇಳುವುದಕ್ಕಾಗುವುದಿಲ್ಲ. ಪೇಪರುಗಳಲ್ಲಿ ಇದೂ ಬಂದಿದೆ. ತಾವೇ ಬೇಕಾದರೆ ಓದಿ ನೋಡಬಹುದು.

(*Interruptions*)

ನಾನು ಯಾರಿಗೂ ಬೆಂಬಲ ಕೊಡುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ನಮ್ಮ ನೀತಿಯೇನು ಅದನ್ನು ತಿಳಿದುಕೊಳ್ಳಲಿ ಎಂದು ಇಲ್ಲಿ ಹೇಳುತ್ತಿದ್ದೇನೆ. ಆದುದರಿಂದ ನಾನು ಇಲ್ಲಿ ಹೇಳುತ್ತಿರುವುದು ಈ ದೇಶದಲ್ಲಿ ಲಾ ಅಂಡ್ ಆರ್ಡರೇ ಇಲ್ಲ ಎಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ.

ಇನ್ನು ದೊಡ್ಡಬಳ್ಳಾಪುರದಲ್ಲಿ ನಡೆದ ಗಲಭೆಗಳ ಬಗ್ಗೆ ಹೇಳಬೇಕಾದರೆ, ಅದು ಅಲ್ಲಿನ ಲೋಕಲ್ ಕಂಡಿಷನ್ಸ್‌ಗೆ ಸಂಬಂಧಪಟ್ಟದ್ದು. ಇದಕ್ಕೂ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ಎಲ್ಲರಿಗೂ ಗೊತ್ತಿರುವ ಹಾಗೆ ಎಲ್ಲ ಕಡೆಗಳಲ್ಲಿಯೂ ಅಲ್ಲಲ್ಲಿ ವಾಜ್ಯಗಳಿರುತ್ತವೆ. ಅದರಂತೆ ಇಲ್ಲೂ ಕೂಡ ವಾಜ್ಯಗಳಿದ್ದುವು. ಇದನ್ನೇ ಒಂದು ಕಾರಣ ಮಾಡಿಕೊಂಡು ಇಲ್ಲಿ ಗಲಭೆಗಳಾದವು, ಇದಕ್ಕೂ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ದೊಡ್ಡಬಳ್ಳಾಪುರದಲ್ಲಿ ಆಹಾರವೇ ಇಲ್ಲ ಎಂದು ಹೇಳಿದರೆ ಯಾರೂ ಅದನ್ನು ಒಪ್ಪುವುದಿಲ್ಲ. ದೊಡ್ಡಬಳ್ಳಾಪುರದಲ್ಲಿರುವ ಜನ ಸಾಕಷ್ಟು ದುಡ್ಡು ಉಳ್ಳಂತಹವರು ಮತ್ತು ಅವರು ಸೇರಿಗೆ ಎರಡು ಮೂರು ರೂಪಾಯಿಗಳಷ್ಟಾದರೂ ಅದನ್ನು ಕೊಂಡು ಉಪಯೋಗಿಸುವವರು. ಆಹಾರಕ್ಕೋಸ್ಕರ ಅಲ್ಲಿ ಗಲಭೆಗಳಾಗಿಲ್ಲ.

ಇನ್ನು ವೈಯ್ಯಾಲಿ ಕಾವಲ್‌ನಲ್ಲಿ ನಡೆದ ಗಲಭೆಗಳ ಹಾಗೂ ಗೊಂದಲಗಳ ಬಗ್ಗೆ ವಿಚಾರಣೆ ಯಾಗುತ್ತಿದೆ. ವೈಯಾಲಿಕಾವಲ್‌ನಲ್ಲಿ ಆದುದಕ್ಕೆ ಬೇರೆ ಕಾರಣಗಳೂ ಇವೆ. ಅವನ್ನು ಗೂಂಡಾಗಳು ಮಾಡಿದ್ದು.

Sri M. S. KRISHNAN.—There was murder in the Police lock-up. You are trying to defend the indefensible.

(Some Members stood up to speak)

Mr. CHAIRMAN.—There is a way of doing things. Unless the Chief Minister yields nobody can interrupt. The Hon'ble Members may make a note of what the Chief Minister says and make use of it at the appropriate time.

Sri M. S. KRISHNAN.—He defends police action and expresses ike this.

Sri B. P. GANGADHAR.—I rise to a point of order, Sir. The Chief Minister was pleased to make certain observation with regard to the Vaiyali Kaval incident. The matter is being investigated and it is at the investigation stage. But he makes a categorical statement that he does not think that it is murder. How can he dare make such a statement when the matter is being investigated that it is not murder? Is it not against canons of justice?

Mr. CHAIRMAN.—According to Hon'ble Member Mr. Gangadhar, the Chief Minister has made a misstatement. I do not know whether it is a misstatement or a correct statement. Since this point of order does not involve violation of any rule, there is no point of order.

Sri B. P. GANGADHAR.—It is a very important matter.

(Some Members stood up to speak)

Mr. CHAIRMAN.—Let there be some order. The Hon'ble Member raised a point of order. Ruling is given and that ruling binds every one. It is not for anybody to say that it is right or wrong.

Sri B. P. GANGADHAR.—Please hear my position. The case is being investigated. Till the investigation is completed and charge-sheet is placed before the court and the judge gives a decision either this way or that way and whether it is murder or otherwise, it is not within the compass of the Chief Minister or any Minister or any official to make a comment about that and to say that it is not murder. It is clear dereliction of his duties as Chief Minister to give a blank cheque to the police and make them feel that hence forward also whatever they do, whether they give blows and kick people and if people die, they

(SRI B. P. GANGADHAR)

will go unheard or uncared for. When a matter is under investigation it is not correct for the Chief Minister to make a statement here on the floor of the House. When he makes a statement, he must make it with due sense of responsibility to the House.

SRI M. S. KRISHNAN.—The Chief Minister should have stated that the matter is under investigation and he has nothing to say about it. That is not the way he stated. He said nothing has taken place and no murder has taken place.

SRI S. NIJALINGAPPA.—I did not say that.

SRI M. NAGAPPA (Raichur).—I raise a different point of order, under rule 311 read with rule 288. Rule 311 (1) says :

"A point of order shall relate to the interpretation or enforcement of these rules or such articles of the Constitution as regulate the business of the Assembly and shall raise a question which is within the cognizance of the Speaker."

I will read rule 288 :

"A member while speaking shall not—

(i) refer to any matter of fact on which a judicial decision is pending."

In this respect, Hon'ble Chief Minister just now referred to a matter which has already been entrusted to judicial enquiry and judicial enquiry is going on. He was not right in saying that there was no murder and what the police has done is justified. I request there is very much force in the point of order and it may be upheld.

MR. CHAIRMAN.—I think as a matter of fact, there is nothing before me or before this House to say that any particular case is put up regarding the alleged death of the man in the Vayali Kaval Police Station and is pending before the court of law or whether any decision is being awarded on that subject.

SRI S. SIVAPPA.—There is a notification appointing the Assistant Commissioner for going into the Vayali Kaval incident.

SRI M. NAGAPPA.—The Assistant Commissioner is a first class magistrate.

SRI M. S. KRISHNAN.—Even now magisterial enquiry is going on.

MR. CHAIRMAN.—Magisterial enquiry is in respect of causes which led to violence and other things in a general manner and not in particular with reference to the Particular incident. Hence my ruling is that there is no point of order.

3-00 P. M.

SRI B. P. GANGADHAR.—The Chief Minister has said that the matter is under investigation.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಆ ರೀತಿ ಹೇಳಲಿಲ್ಲ. ಶ್ರೀ ಕೃಷ್ಣನ್ ಅವರು ಕೋಲ್ಡ್ ಬ್ಲಡೆಡ್ ಮರ್ಡರ್ ಆಗಿದೆಯೆಂದು ಹೇಳಿದರು.

Sri S. SIVAPPA.—By your statement you have created confusion in the minds of the people who are under the impression that a magisterial enquiry has been ordered. After the Vaiyalikaval incident, the I. G. P. has made a statement that a magisterial enquiry has been ordered. We have questioned that already. We know that that enquiry does not bring forward any thing. It would be a farce.

ಶ್ರೀ ಎಸ್. ನಿಜಲಿಂಗಪ್ಪ.—ಯಾವುದು ಏನಾಗಿದೆ ಎಂಬುದನ್ನು ವಿಚಾರ ಮಾಡಲಿ ಯಾವುದನ್ನು............

Sri B. P. GANGADHAR.—I am really sorry for the statement made by the Chief Minister.

Sri M. S. KRISHNAN.—He has wrongly interpreted what I said.

ಶ್ರೀ ಎಸ್. ನಿಜಲಿಂಗಪ್ಪ.—ಯಾವುದನ್ನೂ ತಿಳಿದು ಮಾತನಾಡಬೇಕು. ವಿದ್ಯಾರ್ಥಿಗಳ ಚಳುವಳಿಗೂ ವೈಯ್ಯಾಲಿಕಾವಲ್‌ನಲ್ಲಿ ನಡೆದ ಗಲಾಟೆಗೂ ಏನೂ ಸಂಬಂಧವಿಲ್ಲ. ಮತ್ತು ದೊಡ್ಡಬಳ್ಳಾಪುರದಲ್ಲಿ ನಡೆದ ಗಲಾಟೆಗೂ ವೈಯ್ಯಾಲಿಕಾವಲ್‌ನಲ್ಲಿ ನಡೆದ ಗಲಾಟೆಗೂ ಯಾವ ಸಂಬಂಧವಿಲ್ಲ. ಚಿಕ್ಕಮಗಳೂರಿನಲ್ಲಿ ನಡೆದ ಘಟನೆಯ ಬಗ್ಗೆ ಈಗ ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದು ಜಾತಿಗೆ ಸಂಬಂಧಪಟ್ಟ ವಿಚಾರ. ಆ ಬಗ್ಗೆ ಕೆಲವು ಕೇಸ್‌ಗಳನ್ನು ಹಾಕಿರಬಹುದು. ನಾನು ಅಲ್ಲಿಗೆ ಹೋಗಿ ಅಲ್ಲಿಯ ಜನರನ್ನು ನೋಡಿದ್ದರಲ್ಲಿ ಅಂತಹ ದೊಡ್ಡ ಗಲಾಟೆಯೇನೂ ಆಗಿರಲಿಲ್ಲ. ಅಲ್ಲಿಯ ಜನರು ಅಣ್ಣತಮ್ಮಂದಿರಂತೆ ವರ್ತಿಸುತ್ತಿದ್ದಾರೆ. ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದು ಸಾಧುವಲ್ಲವೆಂದು ಹೇಳುತ್ತೇನೆ. ಲಾ ಅಂಡ್ ಆರ್ಡರ್ ದೇಶದಲ್ಲಿ ಚೆನ್ನಾಗಿ ನಡೆಯುತ್ತಿದೆ. ಒಳ್ಳೆಯವರಿಗೆ ರಕ್ಷಣೆ ಸಿಗುತ್ತಿದೆ ಮತ್ತು ತುಂಟರಿಗೆ ಶಿಕ್ಷೆಯಾಗುತ್ತಿದೆ.

ಆಮೇಲೆ ಮತ್ತೊಂದು ವಿಚಾರವೆಂದರೆ, ಮಹಾಜನ ತೀರ್ಪಿನ ಬಗ್ಗೆ ಹೇಳುವುದಾದರೆ, ಮಹಾಜನ ಅಯೋಗದ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಮಾತುಗಳು ನಡೆದಿವೆ. ನಡೆಯುವುದು ಅವಶ್ಯಕ. ಮಹಾಜನ ಅಯೋಗ ನೇಮಕವಾಗಬೇಕೆಂದು ನಾವು ಅಪೇಕ್ಷೆಪಡಲಿಲ್ಲ. ನಾವು ಅದಕ್ಕೆ ವಿರುದ್ಧವಾಗಿದ್ದೆವು. ಏಕೆಂದರೆ ಈ ಗಡಿ ವಿಚಾರ ಈಗಾಗಲೆ ತೀರ್ಮಾನವಾಗಿ ಹೋಗಿದೆ. ಈ ಪ್ರಶ್ನೆಯನ್ನು ಪುನಃ ಕೆದಕುವುದು ಸರಿಯಲ್ಲವೆಂದು ಕೇಂದ್ರ ಸರ್ಕಾರಕ್ಕೆ ಹೇಳಿದ್ದಾಯಿತು. ಆದರೂ ಸಹ ಮಹಾಜನ ಅಯೋಗವನ್ನು ನೇಮಕ ಮಾಡುತ್ತೇವೆಂದು ಹೇಳಿದರು. ಅನಂತರ ನಾನು ಮೂರು ಜನರಿರುವ ಒಂದು ಅಯೋಗವನ್ನು ಬೇಕಾದರೆ ನೇಮಕ ಮಾಡಿ ಎಂದು ಹೇಳಿದೆ. ಮೈಸೂರಿನವರು ಒಬ್ಬರು, ಮಹಾರಾಷ್ಟ್ರದವರು ಒಬ್ಬರು ಮತ್ತು ಬೇರೆ ಒಬ್ಬರು ಆ ಅಯೋಗದಲ್ಲಿ ಇರಲಿ ಎಂದೂ ಸಹ ಹೇಳಿದೆ. ಅದಕ್ಕೆ ಕೇಂದ್ರಸರ್ಕಾರದವರು ಹರಿಯಾನ ಮತ್ತು ಪಂಜಾಬ್ ವಿಭಜನೆಯಾದಾಗ ಮೂರು ಜನರ ಒಂದು ಆಯೋಗವನ್ನು ನೇಮಕ ಮಾಡಿದಾಗ ಅವರು ಕೊಟ್ಟ ತೀರ್ಮಾನದಲ್ಲಿ ವ್ಯತ್ಯಾಸ ಕಂಡುಬಂತು, ಆದ್ದರಿಂದ ಒಬ್ಬರೇ ಇದ್ದರೆ ಸರಿಯೆಂದು ಹೇಳಿ ಏಕಸದಸ್ಯ ಆಯೋಗವನ್ನು ನೇಮಕ ಮಾಡಿದರು. ಕೇಂದ್ರ ಸರ್ಕಾರದವರು ಮೊದಲೇ ಮಾತನಾಡಿಕೊಂಡು ನಂತರ ನನ್ನನ್ನು ಕೇಳಿದರು, ಮಹಾಜನ ಅವರನ್ನು ಏಕ ಸದಸ್ಯ ಆಯೋಗಕ್ಕೆ ನೇಮಕ ಮಾಡಬಹುದೇ ಎಂದು. ಮಹಾಜನ ಅವರು ಚೀಫ್ ಜಸ್ಟೀಸ್ ಆಗಿದ್ದವರು, ನ್ಯಾಯ ಶಾಸ್ತ್ರಜ್ಞರೂ ಮತ್ತು ನ್ಯಾಯವೇತ್ತರೂ ಆದವರೂ ಆದ್ದರಿಂದ ನಾನು ಆಗಬಹುದು ಎಂದು ಹೇಳಿದೆ. ಆ ಬಗ್ಗೆ ನನ್ನದು ಅಡ್ಡಿಯಿಲ್ಲವೆಂದು ಹೇಳಿದೆ. ಇವತ್ತು ಅವರು ತೀರಿಹೋಗಿದ್ದಾರೆ. ಅವರ ಬಗ್ಗೆ ನಾನಾ ರೀತಿಯಲ್ಲಿ ಟೀಕೆ ಮಾಡುವುದು ಸರಿಯಲ್ಲ. ಮಹಾಜನ ವರದಿಯ ಬಗ್ಗೆ ಕೇಂದ್ರಸರ್ಕಾರದವರು ಒಟ್ಟು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿದೆಯೆಂದು ಈಗ ಹೇಳುತ್ತಿದ್ದಾರೆ. ಇದು ನನಗೆ ಅರ್ಥವೇ ಆಗಿಲ್ಲ. ಬಹು ಜನರ ಅಭಿಪ್ರಾಯವೆಂದು ಕಾಣುತ್ತದೆ.

ಶ್ರೀ ವಿ. ಎನ್. ಪಾಟೀಲ್ (ಹುಮನಾಬಾದ್) —ಶ್ರೀ ಚವಾಣ್ ಅವರು ಮೈಸೂರು ರಾಜ್ಯಕ್ಕೆ ಮೋಸ ಮಾಡುವ ಬಲೆಯಾಗಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಮೈಸೂರಿನವರು ತಮಗೆ ಅನಾನುಕೂಲವಾಗಿದೆಯೆಂದು ಬೈಯುವುದು, ಕೇರಳದವರು ತಮಗೆ ಅನಾನುಕೂಲವಾಗಿದೆಯೆಂದು ಬೈಯುವುದು, ಮಹಾರಾಷ್ಟ್ರ

(ಶ್ರೀ ಎಸ್. ನಿಜಲಿಂಗಪ್ಪ)

ದವರು ತಮಗೆ ಅನಾನುಕೂಲವಾಗಿದೆಯೆಂದು ಬೈಯುವುದು ಸರಿಯಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮಹಾಜನ ಅವರು ಕೊಟ್ಟಿರುವ ತೀರ್ಪನ್ನು ಎಲ್ಲರೂ ಒಪ್ಪಿಕೊಳ್ಳುವುದು ಸಾಧುವಾದುದು, ಗೌರವವಾದುದು. ಅವರು ಕೊಟ್ಟಿರುವ ತೀರ್ಪು ಕಾನೂನು ಪ್ರಕಾರ ಅವಾರ್ಡ್ ಆಗುವುದಿಲ್ಲ.

ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಕಚ್ ಅವಾರ್ಡ್‌ನ್ನು ಕೇಂದ್ರಸರ್ಕಾರದವರು ಒಪ್ಪಿಕೊಂಡಂತೆ ಇದನ್ನು ಸಹ ಏತಕ್ಕೆ ಒಪ್ಪಿಕೊಳ್ಳಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಲಾಯರ್ ಆಗಿದ್ದಾರೆ. ಅವರಿಗೂ ಗೊತ್ತಿರಬಹುದು. ಅದು ಅಡ್ಜುಡಿಕೇಷನ್ ಅವಾರ್ಡ್. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಕೇಂದ್ರಸರ್ಕಾರದವರು ಒಪ್ಪದಿದ್ದರೆ ಮಹಾಜನ ವರದಿಯ ಬಗ್ಗೆ ತಮ್ಮ ನಿಲುವೇನು ?

ಶ್ರೀ ಎಸ್. ನಿಜಲಿಂಗಪ್ಪ.—ರಾತ್ರಿಯೆಲ್ಲಾ ರಾಮಾಯಣ ಕೇಳಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನು ಸಂಬಂಧ ಎಂದು ಕೇಳಿದಂತಾಯಿತು. ಸರ್ಕಾರದ ನಿಲುವೇನು ಎಂಬುದು ಎಲ್ಲರಿಗೂ ಗೊತ್ತಿದೆ. ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಿದ್ದು ಆಗಿದೆ. ಅದರಲ್ಲೇನೂ ಅನುಮಾನ ಉಳಿದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಿಮ್ಮ ನಿಲುವಿಗೆ ವಿರುದ್ಧವಾಗಿ ಕೇಂದ್ರ ಸರ್ಕಾರದವರು ನಡೆದುಕೊಂಡರೆ ನೀವು ರಾಜೀನಾಮೆ ಕೊಡುತ್ತೀರಾ ?

ಶ್ರೀ ಎಸ್. ಶಿವಪ್ಪ.—ಮಹಾಜನ್ ಕಮಿಷನ್ ನೇಮಕ ಮಾಡಬೇಕೆಂದು ತೀರ್ಮಾನ ಕೈಗೊಂಡಿದ್ದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ. ಆ ಕಮಿಟಿಯಲ್ಲಿ ನೀವೂ ಸಹ ಇದ್ದಿರಿ. ಈಗ ಕಾಂಗ್ರೆಸ್ ಅಧ್ಯಕ್ಷರೂ ಸಹ ಆಗಿದ್ದೀರಿ. ಕಾಂಗ್ರೆಸ್ ಅಧ್ಯಕ್ಷರಾಗಿ ನೀವು ಈ ವಿಚಾರದಲ್ಲಿ ಏನು ಹೇಳುತ್ತೀರಿ ?

Sri S. NIJALINGAPPA.—I am not bound to reply to you on that point, because I am not Congress President here. I know what I should do as Congress President. Nobody need tell me which I should do as Congress President.

Sri S. SIVAPPA.—You must abide by the decision of this House.

Sri S. NIJALINGAPPA.—Not concerning what I should do as Congress President.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯಮಂತ್ರಿಗಳು ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಒಂದು ಚಕಾರ ಶಬ್ದವನ್ನೂ ಸಹ ಎತ್ತಲಿಲ್ಲ. ನಾವು ಇಲ್ಲಿ ಸರ್ವಾಧಿಕಾರಿಗಳ ಮುಂದೆ ನಿಂತಿಲ್ಲ. ಮುಖ್ಯಮಂತ್ರಿಗಳ ಮುಂದೆ ನಿಂತಿದ್ದೇವೆ. ಮುಖ್ಯಮಂತ್ರಿಗಳು ಸರ್ವಾಧಿಕಾರಿಗಳಂತೆ ಹೇಳಿಕೆ ಕೊಡುವುದು ಸರಿಯಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಸರ್ವಾಧಿಕಾರಿಯೆಂದು ನಾನು ಎಲ್ಲೂ ಹೇಳಿಲ್ಲ. ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ಮಹಾಜನ್ ವರದಿಯ ಬಗ್ಗೆ ತೆಗೆದುಕೊಳ್ಳುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಿರುವುದರಲ್ಲಿ ಅರ್ಥವಿಲ್ಲ. ರಾಷ್ಟ್ರೀಯ ಒಟ್ಟು ಅಭಿಪ್ರಾಯ ಎಂದರೆ ಎಲ್ಲಾ ಪಾರ್ಟಿಗಳ ಮುಖಂಡರನ್ನು ಕರೆಸಿ ಅವರ ಅಭಿಪ್ರಾಯವನ್ನು ಕೇಳಬಹುದೆಂದು ಕಾಣುತ್ತದೆ. ಈ ವಿಚಾರದಲ್ಲಿ ನಮ್ಮ ಕಾಂಗ್ರೆಸ್‌ನವರಲ್ಲಿಯೇ ಭಿನ್ನಾಭಿಪ್ರಾಯವಿದೆ. ಮೈಸೂರಿನ ಕಾಂಗ್ರೆಸ್‌ನವರು ಒಪ್ಪಿಕೊಳ್ಳುತ್ತೇವೆಂದು ಹೇಳಿದರೆ ಮಹಾರಾಷ್ಟ್ರದ ಕಾಂಗ್ರೆಸ್‌ನವರು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಕೇರಳದವರು ಸಹ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅದೇ ಪಿ. ಎಸ್. ಪಿ. ಪಾರ್ಟಿ ತೆಗೆದುಕೊಂಡರೆ ಮೈಸೂರಿನ ಪಿ. ಎಸ್. ಪಿ. ಪಾರ್ಟಿಯವರು ಒಪ್ಪುತ್ತೇವೆಂದು ಹೇಳಿದರೆ ಮಹಾರಾಷ್ಟ್ರದ ಪಿ. ಎಸ್. ಪಿ. ಪಾರ್ಟಿ ಒಪ್ಪುವುದಿಲ್ಲವೆಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಹೀಗಿರವಾಗ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಕೇಂದ್ರಸರ್ಕಾರದವರು ಹೇಳುತ್ತಿರುವುದು ಸರಿಯಲ್ಲ. ಇದು ಒಂದು ಪ್ರದೇಶದ ಪ್ರಶ್ನೆ

ಯಾಗಿದೆ. ಇಡೀ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಆದ್ದರಿಂದ ಈ ವರದಿಯ ಬಗ್ಗೆ ರಾಷ್ಟ್ರೀಯ ಒಟ್ಟು ಅಭಿಪ್ರಾಯವನ್ನು ಕೇಂದ್ರಸರ್ಕಾರದವರು ತೆಗೆದುಕೊಳ್ಳುವುದು ಅರ್ಥವಿಲ್ಲದ ಮಾತು. ಆದುದರಿಂದ ನನ್ನ ಸ್ಪಷ್ಟವಾದ ಅಭಿಪ್ರಾಯ ಅವರು ತೀರ್ಪು ಕೊಟ್ಟಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಅದನ್ನು ಜಾರಿಗೆ ತರಬೇಕು. ಅದೇ ಸರಿ.

ಇನ್ನು ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟ್ ಸ್ಥಾಪಿಸುವುದು ಮುಖ್ಯವಾದ ವಿಚಾರ. ನಮಗೆ ಒಂದು ಸ್ಟೀಲ್ ಪ್ಲಾಂಟ್ ಬೇಕು ಎಂದು ಇದಕ್ಕಾಗಿ ಸಾಕಷ್ಟು ಪ್ರಯತ್ನ ನಡೆದಿದೆ. ಇದು ಮೂರು ಕಡೆ ಆಗಬೇಕು ಎಂದು ಕೇಳಿದ್ದರಿಂದ ಅದು ಎಲ್ಲಿಯೂ ಆಗಲಿಲ್ಲ. ಸುಮ್ಮನೆ ಇದ್ದರೆ ಒಂದು ಕಡೆ ಆಗುತ್ತಿತ್ತೋ ಏನೋ ? ಇದನ್ನು ಸ್ಥಾಪನೆ ಮಾಡುವುದಕ್ಕೆ ಹೊಸಪೇಟೆ ಸೊಗಸಾದ ಸ್ಥಳ. ಇದು ಒಳ್ಳೇ ಜಾಗ. ನಾವು ಇದಕ್ಕಾಗಿ ಪ್ರಯತ್ನ ಮಾಡುತ್ತಾ ಇದ್ದೇವೆ. ಕೇಂದ್ರ ಸರಕಾರದವರು ನಾವು ಇದನ್ನು ಪಬ್ಲಿಕ್ ಸೆಕ್ಟರಿನಲ್ಲಿ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ ಬಿಟ್ಟರೆ ಬೇರೆಯವರ ಸಹಾಯ ತೆಗೆದುಕೊಂಡು ನಾವು ಮಾಡಬಹುದು. ಆದರೆ ಅವರು ಈ ಒಂದು ಮಾತು ಹೇಳುತ್ತಾ ಇಲ್ಲ. ಇನ್ನೊಂದು ಸಂತೋಷದ ವಿಚಾರ. ಹೊಸಪೇಟೆ ಹತ್ತಿರ ಒಂದು ಫೆರೋ ಮ್ಯಾಂಗನೀಸ್ ಫ್ಲಾಂಟ್ ಬರುತ್ತಾ ಇದೆ. ಅದು ಇಷ್ಟರಲ್ಲಿ ಪ್ರಾರಂಭವಾಗಿ ಪ್ರೊಡಕ್ಷನ್ ಮಾಡುವುದು ಪ್ರಾರಂಭ ವಾಗಬಹುದು ಎಂದು ಕಾಣುತ್ತದೆ.

ಹಿಂದಿನ ಆರೋಗ್ಯ ಮಂತ್ರಿಗಳು ದುಡ್ಡು ತೆಗೆದುಕೊಂಡು ಕೆಲಸ ಮಾಡಿ ಕೊಡುತ್ತಾ ಇದ್ದರು ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಅಸತ್ಯವಾದುದು ಅಸಭ್ಯವಾದುದು. ನೂರಾರು ಜನರಲ್ಲಿ ಒಬ್ಬ ಮನುಷ್ಯರನ್ನು ತಂದು ಇಂಥವರ ಹತ್ತಿರ ತೆಗೆದುಕೊಂಡಿದ್ದಾರೆ ಎಂದು ಮಾನ್ಯ ಸದಸ್ಯರು ನನಗೆ ತಿಳಿಸಿದರೆ ಅದನ್ನು ನಾನು ವಿಚಾರ ಮಾಡುತ್ತೇನೆ. ಈರೀತಿ ನನಗೆ ಯಾವತ್ತೂ ತಿಳಿಸಿಲ್ಲ. ನೂರಾರು ಬೇಡ. ಒಬ್ಬರಿಂದ ತೆಗೆದುಕೊಂಡಿದ್ದಾರೆ ಎಂದು ರುಜುವಾತು ಆದರೆ ನಾನು ಅದಕ್ಕೆ ಶಿಕ್ಷೆ ಮಾಡುವುದಕ್ಕೆ ಸಿದ್ಧನಿದ್ದೇನೆ. ಅದನ್ನು ಹೇಳಿದರೆ ವಿಚಾರ ಮಾಡುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಇದಕ್ಕಾಗಿ ಒಂದು ಎನ್‌ಕ್ವ್ಯಾಯರಿ ಕಮಿಷನ್ ನೇಮಕ ಮಾಡಿ. ಅಲ್ಲಿ ಜವಾಬು ಕೊಡುತ್ತೇವೆ, ಸಾಕ್ಷಿ ಒದಗಿಸುತ್ತೇವೆ ಎಂದು ಅವರು ಹೇಳಿದ್ದಾರೆ. ನಿಮ್ಮ ಹತ್ತಿರ ಹೇಳಿ ಏನೂ ಪ್ರಯೋಜನವಿಲ್ಲ. ನಿಮಗೆ ಹೇಳಿದರೆ ಅದು ಏನಾಗುತ್ತದೆ ಎನ್ನುವುದು ನಮಗೆ ಗೊತ್ತಿದೆ. ಇವರ ಕಾಲದಲ್ಲಿ ಏನೇನೋ ಅನ್ಯಾಯಗಳಾಗಿವೆ ದುಡ್ಡು ತೆಗೆದುಕೊಂಡು ನಾಗಪ್ಪ ಆಳ್ವಾ ಅವರು ಎಷ್ಟೋ ಅಪಾಯಿಂಟ್‌ಮೆಂಟ್ ಕೊಟ್ಟಿದ್ದಾರೆ. ಎಷ್ಟೋ ಅನ್ಯಾಯಗಳಾಗಿವೆ. ಎಷ್ಟೋ ಕೇಸುಗಳು ಕೋರ್ಟಿಗೆ ಹೋಗಿವೆ, ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಆದುದು ನನಗೆ ಗೊತ್ತಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲಿ ಏನು ಬೇಕಾದರೂ ಹೇಳುವುದು ಆಗಿದೆ.

Sri H. N. NANJE GOWDA.—I have not told anything and every thing that flashes to my mind. I am speaking with a full sense of responsibility. I am ready to prove if the hon. Chief Minister is courageous to appoint a judicial commission. If I dont's prove, I will retire. He cannot speak like that. With full sense of responsibibity I have alleged.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳಿ, ನಾನು ವಿಚಾರ ಮಾಡುತ್ತೇನೆ. ಅದನ್ನು ಬರವಣಿಗೆಯಲ್ಲಿ ಕೊಡಿ. We cannot go to courts without cause of action. ಆದುದರಿಂದ ಅದನ್ನು ಬರೆದು ತಿಳಿಸಿ.

I will keep it secret and confidential.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸಚಿವರಾದ ಆಲೂರು ಹನುಮಂತಪ್ಪನವರಿಗೆ ಎಷ್ಟು ಸಾಲ ಸಚಿವರಾಗುವುದಕ್ಕೆ ಮುಂಚೆ ಇತ್ತು ಎಷ್ಟು ವಾರಂಟು ಇದ್ದವು. ಅವರು ಸಚಿವರಾದ ಮೇಲೆ ಎಷ್ಟು ಮನೆ ಕಟ್ಟಿಸಿದ್ದಾರೆ ಎಷ್ಟು ಆಸ್ತಿ ಪಾಸ್ತಿ ಮಾಡಿದ್ದಾರೆ ಎಷ್ಟು ತೆಗೆದುಕೊಂಡಿದ್ದಾರೆ ಎನ್ನುವುದು ಗೊತ್ತಿದೆಯೇ ?

Sri S. NIJALINGAPPA.—My friend is making a statement. Let him give a statement that he had no property before and that he had so much of debt. I will make enquiries.

ಶ್ರೀ ಎಸ್. ಶಿವಪ್ಪ.—ಯಾರ್ಯಾರ ಹೆಸರಿನಲ್ಲಿ ಮನೆ ಮಾಡಿದ್ದಾರೋ !

ಶ್ರೀ ಕೆ. ಎಚ್. ಪಾಟೀಲ್. (ಹುಬ್ಬಳ್ಳಿ).—ಏತಕ್ಕೆ ತಮಗೆ ಇಷ್ಟು ಸಿಟ್ಟು ಬರುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಸುಳ್ಳು ಹೇಳಿದರೆ ಸಿಟ್ಟು ಬರುತ್ತದೆ.

ಇನ್ನು ಡೈರಿ ವಿಚಾರ. ಹಾಲಿನ ಕೇಂದ್ರ ಒಂದನ್ನು ಬೆಂಗಳೂರಿನಲ್ಲಿ ಮಾತ್ರ ಮಾಡಿದ್ದಾರೆ ಬೇರೆ ಕಡೆ ಮಾಡಿಲ್ಲ ಎಂದು ಒಂದು ಆಕ್ಷೇಪಣೆ ಇದೆ. ರೈತರ ಹಿತ ದೃಷ್ಟಿಯಿಂದ ಡೈರಿ ಯೋಜನೆ ಅವಶ್ಯಕವಾಗಿದೆ. ಬೆಂಗಳೂರಿನಲ್ಲಿ ಮಾಡಿದ್ದು ನಿಜ. ಹಾಲಿಗೆ ಮೊದಲು ಬಹಳ ಕಡಿಮೆ ಬೆಲೆ ಕೊಡುತ್ತಾ ಇದ್ದರು. 78 ಅಥವಾ 79 ಪೈಸೆಗೆ ಒಂದು ಲೀಟರ್ ಹಾಲು ಯಾರು ಕೊಡುತ್ತಾರೆ. ಒಂದು ಲೀಟರ್ ಹಾಲಿಗೆ ಒಂದು ರೂಪಾಯಿ ಎಪ್ಪತ್ತೈದು ಪೈಸೆ ರೇಟು ಮಾಡಿದ ಮೇಲೆ ಹೊರಗಡೆ ಯಿಂದ ಸಾಕಷ್ಟು ಹಾಲು ಬರುತ್ತಾ ಇದೆ. ಈಗ ಬೆಂಗಳೂರು ಡೈರಿಯಲ್ಲಿ ಹಾಲಿಗೇನೂ ಕೊರತೆ ಯಿಲ್ಲ. ಹಳ್ಳಿಯಲ್ಲಿಯೇ ಹಾಲಿಗೆ ಒಳ್ಳೆ ದರ ಕೊಡುತ್ತಾ ಇರುವುದರಿಂದ ಮೊದಲು 40 ಸಾವಿರ ಲೀಟರ್ ಹಾಲು ಬರುತ್ತಾ ಇದ್ದುದು ಈಗ 70 ಸಾವಿರ ಲೀಟರ್ ಹಾಲು ಬರುತ್ತಾ ಇದೆ. ಈಗ ಹಾಲು ಹೆಚ್ಚಾಗಿ ಬರುತ್ತಾ ಇರುವುದರಿಂದ ತುಪ್ಪ ಬೆಣ್ಣೆ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಬೇಕಾದರೆ ಅಪ್ಪಟ ತುಪ್ಪ ಅಪ್ಪಟ ಬೆಣ್ಣೆ ಕೊಡುತ್ತೇವೆ. ಇಷ್ಟೇ ಅಲ್ಲದೆ ಡೈರಿ ಯೋಜನೆ ಬೆಂಗ ಳೂರಿನಲ್ಲಿ ಅಲ್ಲದೆ ಬಾಕಿ ಕಡೆ ಕೂಡ ಅಂದರೆ, ಹುಬ್ಬಳ್ಳಿ, ಧಾರವಾಡ, ದಾವಣಗೇರಿ ಅಲ್ಲಿ ಕೂಡ ಪ್ರಾರಂಭ ಮಾಡಬೇಕು ಎಂದಿದೆ. ಯಾರಾದರೂ ಸಹಕಾರ ಪದ್ಧತಿಯ ಮೇಲೆ ಈ ಯೋಜನೆ ನಡೆಸುವುದಕ್ಕೆ ಮುಂದೆ ಬಂದರೆ ಸಾಕಷ್ಟು ಸಹಾಯ ಮಾಡುತ್ತೇವೆ. ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಎಂಟು ಹತ್ತು ಕಡೆ ಇದು ಆಗಬಹುದು.

ಶ್ರೀ ಎಸ್. ಗೋಪಾಲಗೌಡ.—ಡೈರಿ ಬಗ್ಗೆ ಒಂದು ಅಪಾದನೆ ಇದೆ.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಬರೆದು ಕಳಿಸಿ. ನಿಮಗೆ ಯಾವುದಕ್ಕೂ ನಂಬಿಕೆ ಬಂದಿಲ್ಲ ಸಂಶಯಾತ್ಮಾ ವಿನಶ್ಯತಿ ಎಂದು ಹೇಳುವ ಹಾಗೆ ಆಗಿದೆ.

ಇನ್ನು ಕನ್ನಡವನ್ನು ಆಫೀಷಿಯಲ್ ಲಾಂಗ್ವೇಜ್ ಮಾಡುವ ಬಗ್ಗೆ ಹೇಳುವುದಾದರೆ, ಕನ್ನಡ ಭಾಷೆ ಎಂದು ಒಪ್ಪಿಕೊಂಡಿದ್ದೇವೆ. ಇದರ ಬಗ್ಗೆ ನಿರ್ಣಯ ಕೂಡ ಆಗಿದೆ. ಆದರೆ ಇನ್ನೂರು ವರ್ಷಗಳಿಂದ ಬಂದಿರತಕ್ಕಂಥ ಇಂಗ್ಲೀಷ್ ಭಾಷೆಯನ್ನು ತೆಗೆದು ಹಾಕಿ ಇವತ್ತೇ ಇದನ್ನು ಮಾಡಿ ಅಂದರೆ ಅದು ಆಗುವುದಿಲ್ಲ. ಆಫೀಷಿಯಲ್ ಲಾಂಗ್ವೇಜ್‌ಗೆ ಸಂಬಂಧಪಟ್ಟ ಆಡಳಿತ ಶಬ್ದಕೋಶ ಒಂದು ಲಕ್ಷಣವಾದ ನಿಘಂಟು ತಯಾರ್ಮಾಡಿದ್ದಾರೆ. ಅದು ಬಳಕೆಯಲ್ಲಿ ಬರುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಆಡಳಿತ ಭಾಷೆ ಕನ್ನಡವಾಗಬೇಕು ಎಂದು ಮಾಡಿದೆ. ಇದರಿಂದ ಶೇಕಡ 70 ಭಾಗ ಕೆಲಸ ಕನ್ನಡದಲ್ಲಿ ಆಗುತ್ತದೆ. ಕೆಲವು ದಿವಸ ಇದು ಜಾರಿಯಲ್ಲಿ ಬಂದರೆ ಇದನ್ನು ಸಂಪೂರ್ಣ ವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸ ಈಗ ನಡೆಯುತ್ತಾ ಇದೆ.

ಶ್ರೀ ಎಸ್. ಗೋಪಾಲಗೌಡ.—ಇದನ್ನು ಜಾರಿಗೆ ತರತಕ್ಕವರು ಅಧಿಕಾರಿಗಳು ಆಗಿರುವುದ ರಿಂದ ಕನ್ನಡ ಬಾರದೇ ಇರತಕ್ಕ ಅಧಿಕಾರಿಗಳು ಎಷ್ಟು ವರ್ಷದಲ್ಲಿ ತರುತ್ತಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಅಧಿಕಾರಿಗಳು ಕೂಡ ಕನ್ನಡ ಕಲಿಯುತ್ತಾರೆ. ಶೇಕಡ 90 ರಷ್ಟು ಜನ ಅಧಿಕಾರಿಗಳಿಗೆ ಕನ್ನಡ ಬರುತ್ತದೆ. ಐ.ಪಿ.ಎಸ್. ಮತ್ತು ಐ.ಸಿ.ಎಸ್. ಅವರು ಒಟ್ಟು 120 ಜನ ಇದ್ದಾರೆ. ಅವರಲ್ಲಿ ಕನ್ನಡ ಬಾರದೇ ಇರುವವರು 60 ಜನಕ್ಕೆ ಕಡಿಮೆ ಇರಬಹುದು. ಎರಡು ವರ್ಷಗಳಲ್ಲಿ ಅವರು ಕನ್ನಡ ಕಲಿಯುತ್ತಾರೆ. ಒಬ್ಬ ಬಂಗಾಲಿ ಅಧಿಕಾರಿಯು ಒಂದು ಕಡೆ ಕನ್ನಡ ಕಲಿತು ನನಗಿಂತಲೂ ಚೆನ್ನಾಗಿ ಕನ್ನಡ ಭಾಷೆ ಮಾತನಾಡುವುದನ್ನು ನಾನು ನೋಡಿದ್ದೇನೆ. ಇದರಲ್ಲಿ ತೊಂದರೆ ಏನೂ ಆಗುವುದಿಲ್ಲ.

ಇನ್ನು ಲೇವಿ ವಿಚಾರ. ಕಳೆದ ಎರಡು ವರ್ಷ ಮಳೆಯಾಗಿಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಕೆರೆ ಒಣಗಿದೆ ಎಂದು ಹೇಳಿದರೆ ಅದು ಸರಕಾರದ ತಪ್ಪೇ ? ಮಳೆ ಬಾರದೆ ಹೋದರೆ ಅದು ನಮ್ಮ ತಪ್ಪಲ್ಲ ಮಳೆ ಬಾರದೇ ಇರತಕ್ಕದ್ದಕ್ಕೆ ಯಾರೂ ಕಾರಣರಲ್ಲ. ಪ್ರಕೃತಿ ವಿಕೋಪದಿಂದ ಮಳೆ ಬರುವು ದಿಲ್ಲ. ಎರಡು ಮೂರು ವರ್ಷದಿಂದ ತೊಂದರೆಯಾಗಿದೆ. ಮೈಸೂರು ರಾಜ್ಯದಲ್ಲಿ ಶೇಕಡ 60 ರಷ್ಟು ಭಾಗದಲ್ಲಿ ಮಳೆಯಾಗಿದೆ ಈ ವರ್ಷ ಬೆಳೆ ಬಂದಿದೆ. ಶೇಕಡ 40 ಭಾಗ ಪ್ರದೇಶದಲ್ಲಿ ಮಳೆ ಬಂದಿಲ್ಲ. ಕೆರೆಗಳ ದುರಸ್ತಿ ಮಾಡುವುದು, ಕಾಲುವೆ ದುರಸ್ತಿ ಮಾಡುವುದು, ಬಾವಿ ತೆಗೆಸುವು ದಕ್ಕೆ ಎಲ್ಲೆಲ್ಲಿ ಯಾವ ಯಾವ ಅನುಕೂಲ ಬೇಕೋ ಅದನ್ನು ಶಾಶ್ವತವಾಗಿ ಪರ್ಮನೆಂಟಾಗಿ ಮಾಡುತ್ತಿದ್ದೇವೆ. ಎಲ್ಲ ಕಡೆ ಮಾಡುವ ಯೋಜನೆ ಇದೆ. ಇದಕ್ಕೆ ಎರಡು ಮೂರು ಕೋಟಿಗಿಂತ ಜಾಸ್ತಿಯಾಗಬಹುದು. ಇದಕ್ಕಾಗಿ ಕೇಂದ್ರ ಸರಕಾರವನ್ನು ಕೇಳಿದ್ದೇನೆ ತೊಂದರೆಯಾಗಿದೆ ಕ್ಷಾಮ ದಿಂದ ಕಷ್ಟ ಪರಿಸ್ಥಿತಿಯಲ್ಲಿ ಜನ ಇದ್ದಾರೆ ಶೇಕಡ 40 ಭಾಗದಲ್ಲಿ ಎಂದು ಹೇಳಿದ್ದೇವೆ. ಹಳೇ

ಮೈಸೂರು ಭಾಗದಲ್ಲಿ ಇದರ ಹೊರಗಡೆ ಇರತಕ್ಕ ಕೆಲವು ಭಾಗ ಇದಕ್ಕಾಗಿ ಸಹಾಯಬೇಕು ಎಂದು ಅವರನ್ನು ಕೇಳಿದ್ದೇವೆ. ಕುಡಿಯುವ ನೀರಿನ ಬಾವಿ ಇದ್ದರೂ ಕೂಡ ವ್ಯವಸಾಯದ ಬಾವಿ ಕಡಿಮೆಯಾಗಿವೆ. ಅಲ್ಲಲ್ಲಿ ಪಂಪ್ ಸೆಟ್ಸ್ ಹಾಕಿದ್ದಾರೆ ಪಾವರ್ ಲೈನ್ಸ್ ಹಾಕಿದ್ದಾರೆ. ಅಕ್ಟೋಬರ್ ತಿಂಗಳಿನಲ್ಲಿ ಬರಬೇಕಾಗಿದ್ದ ಮಳೆ ಬಂದಿದ್ದರೆ ಎಷ್ಟೋ ಚೆನ್ನಾಗಿತ್ತು. ಆರೇಳು ದಿವಸಕ್ಕೆ ಮುಂಚೆ ಸ್ವಲ್ಪ ಮಳೆ ಬಂದು ಜೋಳದ ಬೆಳೆಯನ್ನೆಲ್ಲ ಕೆಡಿಸಿತು. ಹೀಗೆ ನಾವು ಮಳೆ ರಾಯನ ಕೈಯಲ್ಲಿ ಸಿಕ್ಕಿದ್ದೇವೆ. ಕರೆದಾಗ ಮಳೆ ಬರುವುದಿಲ್ಲ, ಬರಬಾರದ ಸಮಯದಲ್ಲಿ ಬರುತ್ತದೆ. ಹೀಗಾಗಿ ಎರಡು ಮೂರು ವರ್ಷಗಳಿಂದ ತೊಂದರೆ ಆಗಿರತಕ್ಕುದು ನಿಜ. ಆದುದರಿಂದಲೇ ಇದನ್ನೆಲ್ಲ ಬಗೆಹರಿಸಬೇಕಾದರೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಧ್ಯಮ ದರ್ಜೆಯ ನೀರಾವರಿ ಯೋಜನೆಗಳನ್ನು ಮಾಡಬೇಕೇ ವಿನಾ ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ.

ಲೆವಿ ವಸೂಲು ಮಾಡುವ ವಿಷಯವನ್ನು ಕೆಲವು ಸದಸ್ಯರು ಹೇಳಿದರು. ಈಗ ನಮಗೆ ಬೇಕಾಗುವ ಆಹಾರ ಧಾನ್ಯಗಳನ್ನು ಹೊರಗಡೆಯಿಂದ ಕೇಂದ್ರ ಸರ್ಕಾರದವರು ತರಿಸಿಕೊಡುತ್ತಿದ್ದಾರೆ. ಹೀಗೆ ಎಷ್ಟು ದಿವಸ ತರಿಸಬಹುದು? ನಮ್ಮಲ್ಲಿ ಏನಾದರೂ ಬಫರ್ ಸ್ಟಾಕ್ಸ್ ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ನಾವು ಡೆಪ್ಯುಟಿ ಕಮಿಷನರುಗಳಿಗೆ ಆದೇಶವನ್ನು ಕಳಿಸಿದ್ದೇವೆ. ಎಲ್ಲಿ ಏನೂ ಬೆಳೆಯಾಗಿಲ್ಲ ಅಲ್ಲಿ ವಸೂಲು ಮಾಡಬೇಡಿ, ಎಲ್ಲಿ ಬೆಳೆಯಾಗಿದೆ, ಎಲ್ಲಿ ಧಾನ್ಯವನ್ನು ಬೆಳೆದಿದ್ದಾರೆ ಅಲ್ಲಿ ಮಾತ್ರ ವಸೂಲು ಮಾಡಿ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಏನೂ ಬೆಳೆಯಾಗದೆ ಇರುವ ಕಡೆಯೂ ವಸೂಲು ಮಾಡಿದ್ದರೆ, ನನಗೆ ಹೇಳಿದರೆ ಅಥವಾ ಆಹಾರ ಸಚಿವರಿಗೆ ಹೇಳಿದರೆ ಅವರು ನೋಡುತ್ತಾರೆ, ನೋಡುತ್ತಿದ್ದಾರೆ. ಇದರಲ್ಲಿ ಇನ್ನೊಂದು ವಿಚಾರ. ಕೆಲವು ಕಡೆಗಳಲ್ಲಿ ಚೆನ್ನಾಗಿ ಬೆಳೆಯಾಗಿದೆ. ಆದರೂ ಏನೂ ಬೆಳೆದಿಲ್ಲ ಎಂದು ಹೇಳುತ್ತಾರೆ. ನನಗೆ ಒಂದು ವಿಚಾರ ಗೊತ್ತಿದೆ. ನಾನು ಒಂದು ಕಡೆ ಹೋಗುತ್ತಿದ್ದೆ. ಆ ಭಾಗದಲ್ಲಿ ಬತ್ತದ ಬೆಳೆ ಬಹಳ ಚೆನ್ನಾಗಿ ಆಗಿದೆ. ಒಬ್ಬ ಮುದುಕ ಒಂದು ತೆನೆಯನ್ನು ತೆಗೆದುಕೊಂಡು ಬಂದು ಅದರಲ್ಲಿ ಒಂದೂ ಕಾಳೇ ಇಲ್ಲ ಎಂದು ಹೇಳಿದ. ಆತನ ಮುಖ ಮುರಿಯಬಾರದು ಎಂದು ಸುಮ್ಮನೆ ಇದ್ದೆ. ಅಲ್ಲಿ ಫಸ್ಟ್ ಕ್ಲಾಸ್ ಬೆಳೆಯಾಗಿದೆ. ಈ ರೀತಿ ನಡೆಯುವುದೂ ಉಂಟು. ಕೆಲವು ಕಡೆ ಬೆಳೆ ಆಗಿಲ್ಲದೆ ಇದ್ದರೂ ಬೆಳೆಯಾಗಿದೆ ಎಂದು ತಿಳಿದು ಅನ್ಯಾಯವಾಗಿರಬಹುದು. ಬೆಳೆಯಾಗಿರತಕ್ಕ ಪ್ರದೇಶದಲ್ಲಿ ಲೆವಿ ಕೊಡದೆ ಹೋದರೆ ಕಷ್ಟದಲ್ಲಿರುವ ಜನಗಳ ಗತಿಯೇನು?

ಶ್ರೀ ಎಸ್. ಗೋಪಾಲ ಗೌಡ.—ಸರ್ಕಾರದವರು ಕೊಡುವ ಬೆಲೆ 47 ರೂಪಾಯಿ. ಮಾರುಕಟ್ಟೆಯಲ್ಲಿ 70 ರೂಪಾಯಿ ಇದೆ. ಆದ್ದರಿಂದ ಸರ್ಕಾರದವರು ಕೇಳುವ ಬೆಲೆಗೆ ಏಕೆ ಕೊಡಬೇಕು?

ಶ್ರೀ ಎಸ್. ನಿಜಲಿಂಗಪ್ಪ.—ಕಡಿಮೆ ಬೆಲೆಗೆ ತೆಗೆದುಕೊಳ್ಳುತ್ತೇವೆಂಬ ಆಕ್ಷೇಪಣೆ ಇದ್ದರೆ ನಾವು ಜಾಸ್ತಿ ಬೆಲೆಗೆ ತೆಗೆದುಕೊಂಡರೆ ಪುನಃ ಅದರಿಂದ ಮಾರುವ ಬೆಲೆ ಜಾಸ್ತಿಯಾಗುತ್ತದೆ. ಆದರೂ ಸಹ ನಾವು ಈ ಬಗ್ಗೆ ಒಂದು ಯೋಚನೆ ಮಾಡುತ್ತಿದ್ದೇವೆ. ಮಾರುಕಟ್ಟೆಗೇ ಹೋಗಿ ನಾವೇ ಓಪನ್ ಆಕ್ಷನ್‌ನಲ್ಲಿ ಸರ್ಕಾರಕ್ಕೆ ತೆಗೆದುಕೊಳ್ಳಬೇಕು ಎನ್ನುವ ಯೋಚನೆ ಇದೆ. ಮಾರಾಟವಾಗುವ ಧಾನ್ಯದಲ್ಲಿ ಅರ್ಧದಷ್ಟನ್ನು ನಾವು ತೆಗೆದುಕೊಳ್ಳುತ್ತೇವೆ. ಹರಾಜು ಆಗಲಿ. ಅದಕ್ಕೆ ಏನಾದರೂ ರೂಲ್ಸ್ ಮಾಡಿ, ಆ ಪ್ರಕಾರ ಸೇಕಡ 50 ಭಾಗ ಅಥವಾ 40 ಭಾಗವನ್ನು ತೆಗೆದುಕೊಳ್ಳಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಆಹಾರದ ಅಭಾವದ ಪ್ರಶ್ನೆ ಇವತ್ತಿಗೇ ಮುಗಿಯುತ್ತದೆ ಎಂದು ತಿಳಿದುಕೊಳ್ಳಬೇಡಿ. ಇದು ವರ್ಷ ವರ್ಷವೂ ಇರತಕ್ಕುದೇ. ಎಲ್ಲಿಯವರೆಗೆ ನಾವು ನೀರಾವರಿ ಪ್ರದೇಶವನ್ನು ಜಾಸ್ತಿ ಮಾಡಿ, ಅದರಿಂದ ರೈತರಿಗೆ ಸಾಕಷ್ಟು ಸಹಾಯ ಒದಗಿಸಿ, ಹೆಚ್ಚಾಗಿ ಬೆಳೆಯುವುದಿಲ್ಲವೋ ಅಲ್ಲಿಯವರೆಗೂ ಈ ಕಷ್ಟವಿರತಕ್ಕುದೇ. ಸಮೃದ್ಧಿಯಾಗಿರುವಾಗ ಅದರಷ್ಟಕ್ಕದೇ ಸರಿಹೋಗುತ್ತದೆ. ಈಗಿರುವ ವಲಯ ಪದ್ಧತಿಯನ್ನು ತೆಗೆದುಹಾಕಿದರೆ ಬಹಳ ಸಂತೋಷ ಎಂದು ನಾನು ತಿಳಿದುಕೊಂಡಿದ್ದೇನೆ. ಅದಷ್ಟು ಮಟ್ಟಿಗೆ ಕೆಲವು ಕಡೆ ಬೆಳೆ ಚೆನ್ನಾಗಿ ಆಗಿದೆ. ಕಂಟ್ರೋಲುಗಳು ಎಂದರೆ ನನಗೆ ಸರಿಬೀಳುವುದಿಲ್ಲ. ಕೆಲವು ಸಮಯಗಳಲ್ಲಿ ಹಾಕಬೇಕಾಗುತ್ತದೆ. ಯಾವುದಾದರೂ ಬೇರೆ ಏರ್ಪಾಡು ಮಾಡುವುದರಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ.

ಲೆವಿ ತೆಗೆದುಕೊಳ್ಳಬಾರದೆಂದು ಹೇಳಿದರೆ, ಕೆಲವು ಕಡೆಗಳಲ್ಲಿ ತಿನ್ನುವುದಕ್ಕೆ ಬೇಕಲ್ಲ, ಅಲ್ಲಿ ಹೇಗೆ ಮಾಡುವುದು? ಹೆಚ್ಚಿಗೆ ಬೆಳೆಯಾಗದೆ ಇರುವ ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆಯ ಅನೇಕ ಭಾಗಗಳು, ಕೋಲಾರ ಜಿಲ್ಲೆ ಇಲ್ಲಿ ಏನು ಮಾಡಬೇಕು? ಅವರಿಗೆ ತಿನ್ನುವುದಕ್ಕೆ ಹೊರಗಡೆಯಿಂದ ಆಹಾರ ಧಾನ್ಯವನ್ನು ಒದಗಿಸಲೇಬೇಕು. ಆದುದರಿಂದಲೇ ಬಫರ್ ಸ್ಟಾಕ್ ಮಾಡುವುದು ಅವಶ್ಯಕ ಎಂದು ತಿಳಿದುಕೊಂಡು ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ತಮ್ಮ ಹಾಗೂ ರೈತರ ಸಹಕಾರ ಬೇಕು. ಸ್ವಲ್ಪ ತೊಂದರೆಯಾದರೂ ಚಿಂತೆ ಇಲ್ಲ, ನಮಗಿಂತಲೂ ಕಷ್ಟದಲ್ಲಿರುವ ಜನ ಹೊಟ್ಟೆಗೆ ಏನೂ ಇಲ್ಲದೆ ಇರುವ ಜನಗಳಿಗೆ ಕೊಡಬೇಕೆಂಬ ಮನಸ್ಸು ಅವರಲ್ಲಿ ಬೆಳೆಯಬೇಕು,

(ಶ್ರೀ ಎಸ್. ನಿಜಲಿಂಗಪ್ಪ)

ಆ ಮನಸ್ಸು ಅವರಲ್ಲಿ ಬೆಳೆಯುವಂತೆ ಮಾಡಬೇಕು. ಕೊಡತಕ್ಕ ದರದಲ್ಲಿ, ಹಣದಲ್ಲಿ ತೊಂದರೆ ಇದ್ದರೆ ಜಾಸ್ತಿ ಕೊಡಿ ಎಂದು ಕೇಳುವುದು ಸಾಧುವಾದುದು. ಆದರೆ ಧಾನ್ಯ ಕೊಡಲೇಬೇಡಿ ಎಂದು ಹೇಳುವುದು ಸಾಧುವಾದುದಲ್ಲ. ಲೆವಿ ವಸೂಲಿಯಿಂದ ಕೆಲವರಿಗೆ ಅನ್ಯಾಯವಾಗಿರಬಹುದು, ಕೆಲವರು ಏನೇ ಬೆಳೆದಿದ್ದರೂ ಕೊಡದೆ ಇರುವವರೂ ಉಂಟು, ಇಂಥ ಪರಿಸ್ಥಿತಿ ಇದೆ. ಅದಾಗ್ಯೂ ಬಫರ್ ಸ್ಟಾಕ್ಸ್ ಇರತಕ್ಕುದು ಅವಶ್ಯಕವೆಂದು ತಿಳಿದು ಲೆವಿ ಮಾಡಬೇಕೆಂದು ತಿಳಿಸಿರುತ್ತೇವೆ. ರೈತರಿಗೆ ಏನಾದರೂ ಅನಾನುಕೂಲವಿದ್ದರೆ ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ.

ಕಾಲಾವಕಾಶವಿಲ್ಲದೆ ಇರುವುದರಿಂದ ಎಲ್ಲ ವಿಷಯಗಳ ಬಗ್ಗೆಯೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

